ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಲಾಲ್ ಸಲಾಂ ಕಾಂ. ಅಹ್ಮದ್ ಕತ್ರಡ!



ಸಂಪುಟ 11 | ಸಂಚಿಕೆ 16 | ಪುಟ 16 | ಏಪ್ರಿಲ್ 10-16, 2017 | ರೂ. 10/- web: www.janashakthi.co.in | e-mail : js_weekly@yahoo.com





ಅಲವರ್‌ನಲ್ಲಿ ಮತ್ತೆ ಗೋ-ಕೊಲೆ



ಕಾಂಗ್ರೆಸ್: ತಾತ್ವಿಕ ದಿವಾಳಿಕೋರತನ



ಉಪಚುನಾವಣೆ ಎತ್ತ?

ಪರಮಾಣು ಕನಸು ಠುಸ್

ಗುಜರಾತ್ ಮಾದರಿ ಲೊಳಲೊಟ್ಟೆ



ಇಕ್ವಡಾರ್ ಎಡ ವಿಜಯ

ಗೋರಕ್ಷಣೆಯ ಹೆಸರಲ್ಲಿ ಮತ್ತೊಂದು ಕೊಲೆ: ಅಲವರ್‌ನಲ್ಲಿ ಹೈನು ಕೃಷಿಕರ ಮೇಲೆ ಅಮಾನುಷ ಹಲ್ಲೆಯನ್ನು ಪ್ರಧಾನ ಮಂತ್ರಿಗಳು ಖಂಡಿಸಬೇಕು- ಎಐಕೆಎಸ್ ಆಗ್ರಹ

ರಾಜಸ್ತಾನದ ಅಲವರ್‌ನಲ್ಲಿ ಸ್ವಯಂನೇಮಿತ 'ಗೋರಕ್ಷಕ'ರ ವೇಷದಲ್ಲಿ ಹಿಂದುತ್ವ ಉಗ್ರಗಾಮಿಗಳು ಒಬ್ಬ ಹೈನು ಕೃಷಿಕನನ್ನು ಅಮಾನುಷವಾಗಿ ಕೊಂದಿದ್ದಾರೆ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಬಲವಾಗಿ ಪ್ರತಿಭಟಿಸಿದೆ.

ಪೆಹ್ಲು ಖಾನ್ ಹರ್ಯಾಣದ ಮೇವತ್ ಜಿಲ್ಲೆಯ ನುಹ್ ತಹಸೀಲಿನ ಒಬ್ಬ ಸಣ್ಣ ಹೈನು ಕೃಷಿಕ. ಹಾಲನ್ನು ಡೈರಿಗಳಿಗೆ ಮಾರಿ ಬದುಕು ನಡೆಸುವ ಕುಟುಂಬ ಅವನದ್ದು. ರಾಜಧಾನಿ ಜೈಪುರದ ಹೊರವಲಯದಲ್ಲಿ ನಡೆದ ಪಶುಗಳ ಸಂತೆಯಲ್ಲಿ ಹೆಚ್ಚು ಹಾಲು ಕೊಡುವ ಎಮ್ಮೆ ಖರೀದಿಸಲು ತನ್ನ ಇಬ್ಬರು ಮಕ್ಕಳೊಂದಿಗೆ ಹೋಗಿದ್ದ. ಎಮ್ಮೆಯ ಬೆಲೆ ಹೆಚ್ಚಾಗಿದ್ದುದರಿಂದ ಹಸುಗಳನ್ನು ಖರೀದಿಸಿ ಜತೆಗಾರರೊಂದಿಗೆ ಹಿಂದಿರುಗುತ್ತಿದ್ದ. ದಾರಿಯಲ್ಲಿ ಅಲವರ್‌ನಲ್ಲಿ ಅಡ್ಡ ಗಟ್ಟಿದ 'ಗೋರಕ್ಷಕರು' ತಾವು ಖರೀದಿಸಿ ಮನೆಗೆ ಒಯ್ಯುತ್ತಿರುವ ಹಸುಗಳು ಇವು ಎಂದು ಎಷ್ಟು ಹೇಳಿದರೂ ಕೇಳದೆ ಹಿಗ್ಗಾಮುಗ್ಗಾ ಥಳಿಸಿ, ಅವರ ಬಳಿಯಿದ್ದ ಹಣವನ್ನು ಲೂಟಿ ಮಾಡಿ ಓಡಿ ಹೋದರು. ತೀವ್ರವಾಗಿ ಗಾಯಗೊಂಡ ರೈತರನ್ನು ಆಸ್ಪತ್ರೆಗೆ ಸೇರಿಸಬೇಕಾಗಿ ಬಂತು. ಆಸ್ಪತ್ರೆಯಲ್ಲಿ ಪೆಹ್ಲು ಖಾನ್ ಅಸು ನೀಗಿದರು.

ಮೇವತ್ ಪ್ರದೇಶದ ಮುಸ್ಲಿಂ ಸಮುದಾಯದವರು ಬೇಸಾಯ ಮತ್ತು ಪಶುಪಾಲನೆಯಲ್ಲಿ ತೊಡಗಿರುವವರು. ವಸುಂಧರರಾಜೇ ನೇತೃತ್ವದ ಬಿಜೆಪಿ ಸರಕಾರ ಸುಳ್ಳು ಆರೋಪದ ಮೇಲೆ ಕೊಲೆ ಮಾಡಿದ ಅಪರಾಧಿಗಳನ್ನು ಹಿಡಿಯುವ ಬದಲು ಪ್ರಾಣ ಕಳಕೊಂಡ ರೈತನೂ ಸೇರಿದಂತೆ ಈ ಆರು ರೈತರ ಮೇಲೆಯೇ ಎಫ್‌ಐಆರ್ ಹಾಕಿದೆ. ಈ ರೈತರ ಬಳಿ ಜೈಪುರ ಮುನಿಸಿಪಲ್ ಕಾರ್ಪೊರೇಷನ್‌ನ ರಸೀದಿ ಇದ್ದರೂ ಅವರು ಹಸು ಖರೀದಿಸಿದ್ದರು ಎಂಬುದಕ್ಕೆ ಪುರಾವೆ ಇಲ್ಲ ಎಂದು ಎಫ್‌ಐಆರ್‌ನಲ್ಲಿ ನಮೂದಿಸಲಾಗಿದೆ ಎನ್ನಲಾಗಿದೆ. ಬಿಜೆಪಿ ಸರಕಾರ ಈ ರೈತರೇ ಅಪರಾಧಿಗಳು, ಅವರನ್ನು ಥಳಿಸಿದ ಕ್ರಿಮಿನಲ್‌ಗಳು, ಕೊಲೆಗಾರರು ಕಾನೂನು ಜಾರಿ ಮಾಡಲು ಪ್ರಯತ್ನಿಸಿದವರು ಎಂದು ಅವರನ್ನು ಸಾರ್ವಜನಿಕವಾಗಿ ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತಿದೆ ಎಂದು ಎಐಕೆಎಸ್‌ಬಲವಾಗಿ ಖಂಡಿಸಿದೆ.

ಬಿಜೆಪಿ ಮತ್ತು ಸಂಘ ಪರಿವಾರ ಸಂಘಟನೆಗಳು ರಾಜಕೀಯ ಲಾಭಕ್ಕಾಗಿ ಹಿಂದುತ್ವ ಉಗ್ರಗಾಮಿ ಮತ್ತು ಕೋಮುವಾದಿ ಗುಂಪುಗಳನ್ನು ಬಹಿರಂಗವಾಗೇ ಸಮರ್ಥಿಸುತ್ತ ದೇಶವನ್ನು ಕಾಯ್ದೆ –ಕಾನೂನುಗಳಿಲ್ಲದ ಅರಾಜಕತೆಯತ್ತ ಒಯ್ಯುತ್ತಿವೆ ಎಂದು ಎಐಕೆಎಸ್ ಖೇದ ವ್ಯಕ್ತಪಡಿಸಿದೆ. ನರೇಂದ್ರ ಮೋದಿ ಸರಕಾರ ಅಧಿಕಾರ ವಹಿಸಿಕೊಂಡ ಮೇಲೆ ಉತ್ತರಪ್ರದೇಶದ ದಾದ್ರಿಯಲ್ಲಿ ಮಹಮ್ಮದ್ ಅಖ್ಲಾಕ್‌ನನ್ನು ಕೊಚ್ಚಿ ಹಾಕಿದ್ದು, ಝಾರ್ಖಂಡ್‌ನಲ್ಲಿ ಹಜಾರಿಬಾಗ್ ಸಮೀಪ ಇಬ್ಬರು ಬಾಲಕರನ್ನು ನೇಣಿಗೇರಿಸಿ ಕೊಂದದ್ದು, ಜಮ್ಮುನಲ್ಲಿ ಟ್ರಕ್ ಡ್ರೈವರ್‌ನ್ನು ಸಾಯಿಸಿದ್ದು, ಉನಾದಲ್ಲಿ ದಲಿತರ ಮೇಲೆ ಅಮಾನುಷ ಹಲ್ಲೆ ಮುಂತಾದ ಘಟನೆಗಳು ಇದಕ್ಕೆ ಮೊದಲು ನಡೆದಿವೆ.

ಇಂತಹ ಘಟನೆಗಳು ಅಬಾಧಿತವಾಗಿ ಮುಂದುವರೆಯುತ್ತಿರುವುದು, ಕಾನೂನುಬಾಹಿರ ಕಾವಲುಗಿರಿ ಪಡೆಗಳು ಹುಟ್ಟಿಕೊಳ್ಳುತ್ತಿರುವುದು ತಾಲಿಬಾನ್ ಅಥವ ಇಸ್ಲಾಮಿಕ್ ಸ್ಟೇಟ್ ಅಡಿಯಲ್ಲಿ ನಡೆಯುತ್ತಿರುವ ಬರ್ಬರತೆಯನ್ನು ನೆನಪಿಸುತ್ತಿವೆ. ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳು ಒಟ್ಟಾಗಿ ಈ ಬರ್ಬರತೆಯ ವಿರುದ್ಧ ಎದ್ದು ನಿಲ್ಲಬೇಕು ಎಂದು ಎಐಕೆಎಸ್ ಕರೆ ನೀಡಿದೆ.

ಪ್ರಧಾನ ಮಂತ್ರಿಗಳು ಅಪರಾಧಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸುತ್ತ, ಎಐಕೆಎಸ್ ಇದು ಜೀವನೋಪಾಯಕ್ಕಾಗಿ ಪಶುಪಾಲನೆ ಮತ್ತು ಹೈನುಗಾರಿಕೆಯಲ್ಲಿ ತೊಡಗಿರುವವರ ಮೇಲೆ ಬಹಿರಂಗ ದಾಳಿಯಾಗಿದೆ ಎಂದಿದೆ. ಎಲ್ಲ ಎಐಕೆಎಸ್ ಘಟಕಗಳು ಜಾಗರೂಕರಾಗಿದ್ದು ಇಂತಹ ವಿಚ್ಛಿದ್ರಕಾರಿ ಶಕ್ತಿಗಳನ್ನು ಪ್ರತಿರೋಧಿಸಲು ಸಾರ್ವಜನಿಕ ಅಭಿಪ್ರಾಯವನ್ನು ಕ್ರೋಡೀಕರಿಸಬೇಕು ಎಂದು ಅದು ಕರೆ ನೀಡಿದೆ.

ಧರ್ಮದ ಹೆಸರಿನಲ್ಲಿ ಕೊಲೆ-ಸುಲಿಗೆ ನಡೆಸುವ ಕ್ರಿಮಿನಲ್ ಗ್ಯಾಂಗ್‌ಗಳನ್ನು ವಿಸರ್ಜಿಸಬೇಕು -ಎಐಎಡಬ್ಲ್ಯುಯು

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ (ಎಐಎಡಬ್ಲ್ಯುಯು) ಕೂಡ ಈ ಘಟನೆಯನ್ನು ಖಂಡಿಸುತ್ತ ಉತ್ತರ ಭಾರತದಲ್ಲಿ ಹಸುಗಳ, ಗೋಮಾಂಸದ ಕಳ್ಳಸಾಗಣೆ ಇತ್ಯಾದಿ ಸುಳ್ಳು ಆರೋಪಗಳನ್ನು ಹೊರಿಸಿ ಗೋರಕ್ಷಕರೆಂದು ಹೇಳಿಕೊಳ್ಳುತ್ತಿರುವ ಗುಂಪುಗಳು ಕ್ರಿಮಿನಲ್ ಚಟುವಟಿಕೆಗಳನ್ನು ನಡೆಸುತ್ತಿವೆ, ಕಳೆದೆರಡು ತಿಂಗಳಲ್ಲಿ ಗುಜರಾತ್, ರಾಜಸ್ತಾನ, ಹರ್ಯಾಣ, ಉತ್ತರಪ್ರದೇಶ, ಜಮ್ಮು, ಝಾರ್ಖಂಡ್ ಮತ್ತು ಅಸ್ಸಾಂ ನಲ್ಲಿ ಹತ್ತಕ್ಕೂ ಹೆಚ್ಚು ಜನಗಳನ್ನು ಕೊಂದಿದ್ದಾರೆ ಅಥವ ತೀವ್ರವಾಗಿ ಥಳಿಸಿದ್ದಾರೆ, ಪೋಲೀಸರು ಈ ಕ್ರಿಮಿನಲ್‌ಗಳನ್ನು ಬಂಧಿಸುವ ಬದಲು ಅವರ ಕುಕೃತ್ಯಗಳಿಗೆ ಬಲಿಯಾದವರ ಮೇಲೆಯೇ ಕೇಸುಗಳನ್ನು ಹಾಕುತ್ತಿದೆ ಎಂಬುದು ಬಹಳ ಆತಂಕದ ಸಂಗತಿ ಎಂದು ಹೇಳಿದೆ.

ಎಪ್ರಿಲ್ 4ರಂದು ರಾಜಸ್ತಾನದ ಅಲವರ್‌ನಲ್ಲಿ ಈ ದಾಳಿ ನಡೆದಿದ್ದರೆ, ಎಪ್ರಿಲ್ 6ರಂದು ಅಸ್ಸಾಂನ ಜೋರ್ಹಾಟ್‌ನಲ್ಲಿ ಮೂವರು ಮುಸ್ಲಿಮ್ ಕೂಲಿಗಾರರನ್ನು ಅವರ ಬಳಿ ಗೋಮಾಂಸ ಇತ್ತು ಎಂದು ಜೈಲಿಗೆ ಹಾಕಿರುವ ಸುದ್ದಿ ಬಂದಿದೆ.

ಈ ದೇಶದಲ್ಲಿ ಬಡಜನರ ತೀವ್ರ ಅಪೌಷ್ಟಿಕತೆಯನ್ನು ನೀಗಬಲ್ಲ ಆಹಾರದ ಸೇವನೆಯನ್ನು ಕ್ರಿಮಿನಲ್ ಕೃತ್ಯವಾಗಿ ಪರಿಗಣಿಸಿ ಅವರ ಬದುಕಿನ ಸಂವಿಧಾನಿಕ ಹಕ್ಕಿನ ಉಲ್ಲಂಘನೆ ಮಾಡಲಾಗುತ್ತಿದೆ, ದಲಿತರು ಮತ್ತು ಅಲ್ಪಸಂಖ್ಯಾತರು ಚರ್ಮದ ಉದ್ಯಮ ನಡೆಸದಂತೆ ಮಾಡಲಾಗುತ್ತಿದೆ, ಇದು ಹಿಟ್ಲರ್ ಯೆಹೂದ್ಯರ ಮಾಂಸದ ಅಂಗಡಿಗಳನ್ನು ಬಲವಂತವಾಗಿ ಮುಚ್ಚಿಸಿ ಅವರ ಬದುಕಿನ ಹಕ್ಕನ್ನು ನಿರಾಕರಿಸಿದ್ದನ್ನು ನೆನಪಿಸುತ್ತದೆ ಎಂದು ಎಐಎಡಬ್ಲ್ಯುಯು ಹೇಳಿದೆ. **ಇನ್ನೊಂದೆಡೆಯಲ್ಲಿ ಗೋಮಾಂಸದ ಹಿಂದೂ ರಫ್ತುಗಾರರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲಾಗುತ್ತಿಲ್ಲ, ದೇಶದ 6 ದೊಡ್ಡ ಗೋಮಾಂಸ ರಫ್ತುಗಾರರಲ್ಲಿ ನಾಲ್ವರು ಹಿಂದುಗಳು ಎಂಬ ಸಂಗತಿಯತ್ತ ಅದು ಗಮನ ಸೆಳೆದಿದೆ.**

ಧರ್ಮದ ಹೆಸರಿನಲ್ಲಿ ಕೊಲೆ–ಸುಲಿಗೆ ನಡೆಸುತ್ತಿರುವ ಕ್ರಿಮಿನಲ್ ಗ್ಯಾಂಗ್‌ಗಳನ್ನು ವಿಸರ್ಜಿಸಬೇಕು ಎಂದಿರುವ ಎಐಎಡಬ್ಲ್ಯುಯು ಸರಕಾರ ತನ್ನ ಜವಾಬ್ದಾರಿ ನಿರ್ವಹಿಸುವಲ್ಲಿ ವಿಫಲವಾಗಿದೆ ಎಂದು ಟೀಕಿಸಿದೆ.

ನಮ್ಮ ದೇಶದ ಕಡುಬಡವರ ಆಹಾರದ ಮತ್ತು ಬದುಕಿನ ಹಕ್ಕಿನ ರಕ್ಷಣೆಗೆ ಎಚ್ಚರದಿಂದಿರಬೇಕು, ಇಂತಹ ಸುಲಿಗೆಗಾರರ ವಿರುದ್ಧ ದೂರುಗಳನ್ನು ದಾಖಲಿಸಿ ಮುಗ್ಧ ಜನಗಳ ರಕ್ಷಣೆಗೆ ಮುಂದಾಗಬೇಕು ಎಂದು ಎಐಎಡಬ್ಲ್ಯುಯು ತನ್ನ ಎಲ್ಲ ಘಟಕಗಳಿಗೆ ಕರೆ ನೀಡಿದೆ.

ಅಂಗನವಾಡಿ ಮತ್ತಿತರ ಸ್ಕೀಮ್ ನೌಕರರಿಗೆ ಭವಿಷ್ಯ ನಿಧಿ ಶಿಫಾರಸು

ಅಂಗನವಾಡಿ ನೌಕರರ ದೀರ್ಘ ಹೋರಾಟಕ್ಕೆ ಸಿಕ್ಕ ಯಶಸ್ಸು

ಅಂಗನವಾಡಿ ನೌಕರರು, ಸಹಾಯಕಿಯರು, ಆಶಾ ಕಾರ್ಯಕರ್ತೆಯರು ಮತ್ತು ಮಧ್ಯಾಹ್ನದ ಊಟದ ನೌಕರರನ್ನು ಭವಿಷ್ಯ ನಿಧಿ ಯೋಜನೆಯ ವ್ಯಾಪ್ತಿಗೆ ತರಬೇಕು ಎಂದು ಈ ನೌಕರರ ಸಂಘಟನೆಗಳು ಬಹಳ ಕಾಲದಿಂದ ಹೋರಾಟಗಳನ್ನು ನಡೆಸಿಕೊಂಡು ಬಂದಿವೆ. ಅವರ ಹೋರಾಟಗಳು ಮತ್ತು ಭವಿಷ್ಯ ನಿಧಿಯ ಕೇಂದ್ರೀಯ ಟ್ರಸ್ಟಿ ಮಂಡಳಿಯಲ್ಲಿ ಸಿಐಟಿಯುನ ಒತ್ತಡಗಳಿಂದಾಗಿ ಕೊನೆಗೂ ನೌಕರರ ಭವಿಷ್ಯನಿಧಿ ಸಂಘಟನೆ (ಇಪಿಎಫ್‌ಒ) ಈ ಎಲ್ಲ ನೌಕರರನ್ನು ಭವಿಸ್ಯನಿಧಿ ಯೋಜನೆಯಲ್ಲಿ ಸೇರಿಸಲು ಶಿಫಾರಸು ಮಾಡಿದೆ.

ಇದನ್ನು ಸ್ವಾಗತಿಸಿರುವ ಅಖಿಲ ಭಾರತ ಅಂಗನವಾಡಿ ನೌಕರರು ಮತ್ತು ಸಹಾಯಕಿಯರ ಒಕ್ಕೂಟ(ಎಐಎಫ್‌ಎಡಬ್ಲ್ಯುಹೆಚ್) ಇದಕ್ಕಾಗಿ 26ಲಕ್ಷ ನೌಕರರನ್ನು ಹಾಗೂ ಸಿಐಟಿಯುವನ್ನು ಅಭಿನಂದಿಸಿದೆ. ಸರಕಾರ ಇಪಿಎಫ್‌ಒನ ಶಿಫಾರಸನ್ನು ಸರಕಾರ ಕೂಡಲೇ ಅಂಗೀಕರಿಸಬೇಕು ಎಂದು ಅದು ಆಗ್ರಹಿಸಿದೆ. ಕೇವಲ ಎರಡು ದಿನಗಳ ಹಿಂದೆಯಷ್ಟೇ ಸರಕಾರ ಕೆಲವು ವಲಯಗಳಲ್ಲಿ ಮಾಲಕರ ವಂತಿಗೆಯ ಬಹು ಭಾಗವನ್ನು ತಾನೇ ನೀಡಲು ನಿರ್ಧರಿಸಿದೆ. ಅಂಗನವಾಡಿ ಮತ್ತಿತರ ನೌಕರರಿಗೂ ಹೀಗೆ-ಯೆ ವಂತಿಗೆ ನೀಡಬೇಕು ಎಂದು ಆಗ್ರಹಿಸಿರುವ ಎಐಎಫ್‌ಎಡಬ್ಲ್ಯುಹೆಚ್ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕೂಡಲೇ ಅಂಗನವಾಡಿ ಮತ್ತಿತರ ಸ್ಕೀಮ್ ನೌಕರರ ಅಖಿಲ ಭಾರತ ಒಕ್ಕೂಟಗಳ ಸಭೆ ಕರೆದು ಈ ವಿಷಯವನ್ನು ಮತ್ತು ನೌಕರರ ಇತರ ಪ್ರಶ್ನೆಗಳನ್ನು ಚರ್ಚಿಸಬೇಕು ಎಂದೂ ಆಗ್ರಹಿಸಿದೆ.

ಸರಕಾರ 45ನೇ ಐಎಲ್‌ಸಿಯ ಇತರ ಶಿಫಾರಸುಗಳನ್ನು, ಅಂದರೆ ಸ್ಕೀಮ್ ನೌಕರರನ್ನು ಕಾರ್ಮಿಕರೆಂದು ಪರಿಗಣಿಸಿ, ಅವರಿಗೆ ಕನಿಷ್ಟ ವೇತನ ಮತ್ತು ಸಾಮಾಜಿಕ ಭದ್ರತೆಗಳನ್ನು ಒದಗಿಸಬೇಕು ಎಂಬುದನ್ನೂ ಸ್ವೀಕರಿಸಬೇಕು ಎಂದು ಎಐಎಫ್‌ಎಡಬ್ಲ್ಯುಹೆಚ್ ಆಗ್ರಹಿಸಿದೆ.

ನೀತಿ ಆಯೋಗ ಮತ್ತು ಭಾರತ ಸರಕಾರ ಐಸಿಡಿಎಸ್, ಎಂಡಿಎಂಎಸ್ ಮತ್ತು ಎನ್‌ಹೆಚ್‌ಎಂ ಸ್ಕೀಮ್‌ಗಳನ್ನು 'ಕೋರ್ ಟು ಕೋರ್ ಸ್ಕೀಮ್'ಗಳು' ಎಂದು ವರ್ಗೀಕರಿಸದೆ ಕಳೆದೆರೆಡು ಬಜೆಟ್‌ಗಳಲ್ಲಿ ಅವಕ್ಕೆ ನೀಡಬೇಕಾದ ಮೊತ್ತವನ್ನು ಕಡಿತ ಮಾಡಲಾಗಿದೆ. ಇವು 24 ಕೋಟಿ ಫಲಾನುಭವಿಗಳಿಗೆ ಆಹಾರದ ಹಕ್ಕಿನ ಶಾಸನಬದ್ಧ ಸೌಕರ್ಯಗಳನ್ನು ಒದಗಿಸುವ ಸ್ಕೀಮುಗಳಾದ್ದರಿಂದ ಅವನ್ನು 'ಕೋರ್ ಟು ಕೋರ್ ಸ್ಕೀಮ್'ಗಳೆಂದು ವರ್ಗೀಕರಿಸಿ ಇವಕ್ಕೆ ಸಾಕಷ್ಟು ಹಣವನ್ನು ಒದಗಿಸಬೇಕು ಎಂದೂ ಎಐಎಫ್‌ಎಡಬ್ಲ್ಯುಹೆಚ್ ಆಗ್ರಹಿಸಿದೆ.

ನೌಕರರ ಈ ಮೂಲ ಬೇಡಿಕೆಗಳನ್ನು ಒಪ್ಪಿಕೊಳ್ಳಲು ಸಿದ್ಧವಿರದ ಮೋದಿ ಸರಕಾರ, ಅಂಗನವಾಡಿ ನೌಕರರಿಗೆ ನೀಡುವ ಪ್ರತಿಫಲವನ್ನು ಹೆಚ್ಚಿಸುವ ತನ್ನ ಚುನಾವಣಾ ಭರವಸೆಯನ್ನು ಈಡೇರಿಸುವ ಬದಲು ಐಸಿಡಿಎಸ್‌ಗೆ ಬಜೆಟ್ ಕಡಿತ ಮಾಡಿರುವ ಮೊದಲ ಸರಕಾರ ಎನಸಿಕೊಂಡಿದೆ. ಇದರಿಂದಾಗಿ ಈ ಸ್ಕೀಮಿನ ಜಾರಿಯಲ್ಲಿ ಬಹಳಷ್ಟು ತೊಡಕುಗಳು ಉಂಟಾಗಿವೆ. ಹಲವು ರಾಜ್ಯಗಳಲ್ಲಿ 3ರಿಂದ 12 ತಿಂಗಳ ವರೆಗೆ ವೇತನ ಬಾಕಿಯಿದೆ, ಪೂರಕ ಪೋಷಣಾಂಶ ಪೂರೈಕೆಗೂ ಅಡ್ಡಿಯಾಗಿದೆ.

ಆದ್ದರಿಂದ ಅಂಗನವಾಡಿ ಮತ್ತು ಇತರ ಸ್ಕೀಮ್ ನೌಕರರು ಈ ಸ್ಕೀಮುಗಳನ್ನು ಉಳಿಸಲು ಮತ್ತು ತಮ್ಮನ್ನು ಕಾರ್ಮಿಕರೆಂದು ಗುರುತಿಸಿ ಉತ್ತಮ ಜೀವನ ಪರಿಸ್ಥಿತಿಗಳನ್ನು ಪಡೆಯುವ ಮೂಲಭೂತ ಹಕ್ಕಿಗಾಗಿ ಹೋರಾಟವನ್ನು ಮುಮದುವರೆಸಬೇಕು ಎಂದು ಎಐಎಫ್‌ಎಡಬ್ಲ್ಯುಹೆಚ್ ಕರೆ ನೀಡಿದೆ.

ಈ ವಾರ ಚರಿತ್ರೆಯಲ್ಲಿ

13 ಎಪ್ರಿಲ್ 1919

ಜಲಿಯಾನ್ ವಾಲಾ ಬಾಗ್ ಹತ್ಯಾಕಾಂಡ

ಈ ದಿನ ಬ್ರಿಟಿಶ್ ಭಾರತದಲ್ಲಿ ನಾಗರಿಕರ ಅತಿ ದೊಡ್ಡ ಹತ್ಯಾಕಾಂಡ ಪಂಜಾಬಿನ ಅಮೃತಸರದಲ್ಲಿರುವ ಜಲಿಯಾನ್ ವಾಲಾ ಬಾಗ್ ಎಂಬ ದೊಡ್ಡ ಸಾರ್ವಜನಿಕ ಪಾರ್ಕಿನಲ್ಲಿ ನಡೆಯಿತು. ನಾಗರಿಕ ಸ್ವಾತಂತ್ರ್ಯಗಳನ್ನು ತೀವ್ರವಾಗಿ ಮಿತಗೊಳಿಸುವ ರೌಲತ್ ಆಕ್ಟ್ ವಿರುದ್ಧ ದೇಶದಲ್ಲಿ ಆಕ್ರೋಶವಿತ್ತು. ಅದರ ವಿರುದ್ಧ ಒಂದು ಸಭೆಯೂ, ಬೈಸಾಖಿ ಹಬ್ಬದ ಜಾತ್ರೆಯೂ ಅವತ್ತು ಬಾಗ್ ನಲ್ಲಿ ಇತ್ತು. ಸಭೆಯನ್ನು ನಿಷೇಧಿಸಲಾಗಿದ್ದು ಬಹುಪಾಲು ಸಾರ್ವಜನಿಕರಿಗೆ ಗೊತ್ತಿರಲಿಲ್ಲ. ದೊಡ್ಡ ಜನಜಂಗುಳಿ ಕಂಡ ಕರ್ನಲ್ ಡಾಯರ್ ಎಂಬ ಮಿಲಿಟರಿ ಅಧಿಕಾರಿ ಯಾವುದೇ ಎಚ್ಚರಿಕೆ ಇಲ್ಲದೆ ಗುಂಡು ಹಾರಿಸಲು ಆಜ್ಞೆ ಮಾಡಿದ. ಈ ಹತ್ಯಾಕಾಂಡದಲ್ಲಿ ಸಾವಿರಕ್ಕೂ ಹೆಚ್ಚು ಜನ ಸತ್ತರು. ಸಾವಿರಾರು ಜನ ಗಾಯಗೊಂಡರು. ಈ ಹತ್ಯಾಕಾಂಡ ಪಂಜಾಬು ಮತ್ತು ಇಡೀ ದೇಶದ ಜನತೆಯನ್ನು ರೊಚ್ಚಿಗೆಬ್ಬಿಸಿತ್ತು. ಇದು ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಒಂದು ತಿರುಗುಬಿಂದು ಆಗಿತ್ತು. ಅಲ್ಲಿವರೆಗೆ ಕೆಲವರ ಮನವಿ ಪತ್ರ ಸಲ್ಲಿಕೆಗೆ ಸೀಮಿತವಾಗಿದ್ದ ಚಳುವಳಿ ಸಮರಶೀಲ ಸಾಮೂಹಿಕ ಕಾರ್ಯಾಚರಣೆಯ ರೂಪ ತಾಳಿತು. ಈ ಹತ್ಯಾಕಾಂಡಕ್ಕೆ ಕಾರಣನಾದ ಡಾಯರ್ ನ್ನು ತನಿಖೆಯ ನಂತರ ಮಿಲಿಟರಿಯಿಂದ ನಿವೃತ್ತಿಗೊಳಿಸಲಾಯಿತು.

ಈಗ ಬಿಜೆಪಿಗೆ ಹಿಂದುತ್ವವೇ ಅಭಿವೃದ್ಧಿ –ಸೀತಾರಾಮ್ ಯೆಚುರಿ

ಬಿಜೆಪಿ ಈಗ ಅಲ್ಪಸಂಖ್ಯಾತರನ್ನು ಹೊರಗಿಡುವ ಒಂದು ಅಭಿವೃದ್ಧಿ ಕಾರ್ಯತಂತ್ರವನ್ನು ಮುಂದಿಟ್ಟಿದೆ. ಗುಜರಾತಿನಲ್ಲಿ ಅಲ್ಪಸಂಖ್ಯಾತರನ್ನು ಅಂಚಿಗೆ ತಳ್ಳಿದ್ದರಿಂದ ಅಲ್ಲಿ ಸಮೃದ್ಧಿ ಆಗಿದೆ ಎಂಬುದು ಅವರು ತಮ್ಮ 'ಗುಜರಾತ್ ಮಾದರಿ'ಗೆ ಕೊಡುವ ವ್ಯಾಖ್ಯೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್‌ಯೆಚುರಿ ಹೈದರಾಬಾದಿನಲ್ಲಿ ಒಸ್ಮಾನಿಯ ವಿಶ್ವವಿದ್ಯಾಲಯದ ಶತಮಾನೋತ್ಸವ ಸಂದರ್ಭದಲ್ಲಿ ವಿವಿಯ ಹಳೆಯ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತಾಡುತ್ತ ಹೇಳಿದರು.

ಉತ್ತರಪ್ರದೇಶದ ವಿಧಾನಸಭೆಗೆ ಒಬ್ಬರಾದರೂ ಅಲ್ಪಸಂಖ್ಯಾತ ಸಮುದಾಯದ ಅಭ್ಯರ್ಥಿಯನ್ನು ಬಿಜೆಪಿ ಕಣಕ್ಕಿಳಿಸಲಿಲ್ಲ. ಲೋಕಸಭೆಯಲ್ಲೂ ಆದರ ಸದಸ್ಯರಲ್ಲಿ ಅಲ್ಪಸಂಖ್ಯಾತರಿಲ್ಲ. ಈಗ ಹಿಂದುತ್ವವೋ ಅಥವ ಅಭಿವೃದ್ಧಿಯೋ ಎಂಬ ಪ್ರಶ್ನೆ ಅವರ ಮುಂದಿಲ್ಲ, ಅವರ ಮಟ್ಟಿಗೆ ಹಿಂದುತ್ವವೇ ಅಭಿವೃದ್ಧಿ ಎಂದು ಅವರು ವಿಶ್ಲೇಷಿಸಿದರು.

"ನಾನು ವಿದ್ಯಾರ್ಥಿಯಾಗಿದ್ದಾಗ ಉದ್ಯೋಗದ ಅಭದ್ರತೆ ಎಂಬುದಿರಲಿಲ್ಲ. ಆದರೆ ಈಗ ಉನ್ನತ ವಿದ್ಯಾರ್ಹತೆ ಇದ್ದರೂ ಅಂತಹ ಭದ್ರತೆ ಇಲ್ಲ" ಎಂದ ಯೆಚುರಿಯವರು ನಿಜಾಮನ ಆಳ್ವಿಕೆಯಿದ್ದ ಈ ಪ್ರದೇಶವನ್ನು ಭಾರತದೊಳಗೆ ಸಮಗ್ರೀಕರಿಸುವಲ್ಲಿ ಈ ವಿಶ್ವವಿದ್ಯಾಲಯ ಪ್ರಮುಖ ಪಾತ್ರ ವಹಿಸಿತು.



ಈಗಲೂ ವಿಶ್ವ ಜ್ಞಾನ ಭಂಡಾರಕ್ಕೆ ಅಪಾರ ಕೊಡುಗೆ ನೀಡುತ್ತಿದೆ. ಇಂದು ಕೂಡ ವಿಶ್ವವಿದ್ಯಾಲಯಗಳು, ಉನ್ನತ ಶಿಕ್ಷಣ ಮತ್ತು ಸಮಸ್ತ ಜಾತ್ಯತೀತ, ಪ್ರಜಾಪ್ರಭುತ್ವ ಹಂದರದ ಮೇಲೆ ಪ್ರಸಕ್ತ ಸರಕಾರ ದಾಳಿಯಿಡುತ್ತಿರುವಾಗ ಇದು ಮಹತ್ವದ ಪಾತ್ರ ವಹಿಸುತ್ತಿದೆ' ಎಂದು ಅಭಿಪ್ರಾಯ ಪಟ್ಟರು. ಪ್ರಸಕ್ತ ಪೀಳಿಗೆ ಭಾರತದ ಜಾತ್ಯತೀತ ಪ್ರಜಾಸತ್ತಾತ್ಮಕ ಗಣತಂತ್ರ"ನ್ನು ಉಳಿಸುವಲ್ಲಿ ಒಂದು ದೊಡ್ಡ ಪಾತ್ರ ವಹಿಸಬೇಕಾಗಿದೆ ಎಂದು ಅವರು ಹೇಳಿದರು.

ಇಂತಹ ಸನ್ನಿವೇಶದಲ್ಲಿ ಎಡಶಕ್ತಿಗಳ ಐಕ್ಯತೆ ಬಹಳ ಅಗತ್ಯವಾಗಿದೆ ಎಂಬುದು ನಿಜ ಎಂದ ಅವರು ಇದು ಜಂಟಿ ಜನತಾ ಆಂದೋಲನಗಳ ಮೂಲಕ ವಿಕಾಸಗೊಳ್ಳಬೇಕು, ಇದು ಈಗಾಗಲೇ ಆರಂಭವಾಗಿದೆ, ಇದು ಮುಂದುವರೆಯುತ್ತದೆ ಎಂಬ ಭರವಸೆಯನ್ನು ಅವರು ಒಸ್ಮಾನಿಯ ವಿವಿಯ ಹಳೆಯ ವಿದ್ಯಾರ್ಥಿಗಳ ಈ ಸಭೆಯಲ್ಲಿ ನೀಡಿದರು.

ಉಪಚುನಾವಣೆ : ವ್ಯಕ್ತಿ ಪ್ರತಿಷ್ಠೆಯ ಕಣದಲ್ಲಿ ರಾಜಕೀಯ ದಿವಾಳಿತನ

ಎಸ್.ವೈ. ಗುರುಶಾಂತ್

ನಂಜನಗೂಡು, ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣಾ ಪ್ರಚಾರಕ್ಕೆ ಏಪ್ರೀಲ್ 7, 2017 ರಂದು ಬೀಗ ಬಿದ್ದಿದೆ. 9 ರಂದು ಮತದಾನ. 13ಕ್ಕೆ 'ಪ್ರತಿಷ್ಠೆ'ಯ ಫಲಿತಾಂಶ! ಇಲ್ಲಿ ಬರೆಗಲ್ಲಿಗೆ ಹಚ್ಚಿರುವುದು ನಾಯಕರ ಪ್ರತಿಷ್ಠೆಯೇ ಅಂತೆ! ಈ ಚುನಾವಣೆಯಲ್ಲಿ 'ಜನರಿಗೇನು' ಕೆಲಸ? ಆನರದ್ದೇನು? ಏನಿದ್ದರೂ ನಾಯಕರ ಪ್ರತಿಷ್ಠೆಯನ್ನು ಕಾಯಬೇಕಷ್ಟೇ. ಇನ್ನು ಪಕ್ಷಗಳೋ? ಅವು ನಾಯಕರನ್ನು ಹೊತ್ತೋಯ್ಯುವ ಬೋಟುಗಳು.

ಗುಂಡ್ಲುಪೇಟೆಯ ಶಾಸಕರಾಗಿದ್ದ, ಸಚಿವ ಮಹದೇವ ಪ್ರಸಾದ್‌ರವರ ಅಕಾಲಿಕ, ನಿಧನದಿಂದ ಸ್ಥಾನ ತೆರವಾದದ್ದು ಬಿಟ್ಟರೆ, ಪುನರ್ರಚಿತ ಸಂಪುಟದಲ್ಲಿ ಸ್ಥಾನ ಸಿಗಲಿಲ್ಲವೆಂಬ ಆಕ್ರೋಶ ನಂಜನಗೂಡಿನ ಮರು ಚುನಾವಣೆಗೆ ಕಾರಣ. ಅಧಿಕಾರ ಲಾಲಸೆ, ಗುಂಪುಗಾರಿಕೆಯ ಬಡಿದಾಟಗಳು ರೂಪಪಡೆದುಕೊಂಡಿದ್ದು, 'ಸ್ವಾಭಿಮಾನ'ದ ಸವಾಲಿನಲ್ಲಿ. ಕಾಂಗ್ರೆಸ್ ಪಕ್ಷ ತೊರೆದ ಇವರು ದಲಿತರ ಸ್ವಾಭಿಮಾನ'ವನ್ನೂ ಕಂಡದ್ದು ಕೋಮುವಾದಿ ಬಿಜೆಪಿಯಲ್ಲಿ! ಇದೇ ವಿ. ಶ್ರೀನಿವಾಸ್ ಪ್ರಸಾದ್‌ರವರು ಮನುವಾದಿ ಸಂಘಪರಿವಾರದ ವಿರುದ್ಧ ಗುಡಿಗಿದ್ದರು! ಚಾತುರ್ವರ್ಣ್ಯದ ವಿರುದ್ಧ ಚಾಟಿ ಎತ್ತಿದ್ದರು. ಆದರೀಗ ಸಂದರ್ಭ ಸಾ ಧಕ ರಾಜಕಾರಣವು ತರುವು ಅದಃ ಪತನಕ್ಕೆ ಮತ್ತೊಂದು ಸಾಕ್ಷಿಯಾಗಿದ್ದಾರೆ ಅವರು. ಈ ಎರಡೂ ಕ್ಷೇತ್ರಗಳ ಚುನಾವಣೆಯಲ್ಲಿ ಪ್ರಸ್ತಾಪಿತವಾಗುತ್ತಿರುವ ಪ್ರಧಾನ ವಿಷಯವೆಂದರೆ ನಾಯಕರ ಪ್ರತಿಷ್ಠೆ. ಶ್ರೀನಿವಾಸ್‌ಪ್ರಸಾದರಿಗೆ ತಮ್ಮ ಉಳಿವಿಗೆ ದಲಿತರ ಸ್ವಾಭಿಮಾನ ಪ್ರತಿಷ್ಠೇಯಾಗಿಸಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ಎಸ್. ಯಡ್ಯೂರಪ್ಪನವರಿಗೆ ಮುಖ್ಯಮಂತ್ರಿಯಾಗುವ ವರ್ಚಸ್ಸಿನ ಉಳಿಕೆಯ ಪ್ರತಿಷ್ಠೆ. ತಮ್ಮ ಆಪ್ತ ವಲಯದ ಸಚಿವ ಮಹದೇವಪ್ಪನವರನ್ನು ದಲಿತರ ನಡುವೆ ಬೆಳೆಸಲು ಶ್ರೀನಿವಾಸ್ ಪ್ರಸಾದ್‌ರನ್ನು ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಬಲಿ ಮಾಡುತ್ತಿದ್ದಾರೆಂಬ ಆರೋಪ ಎದುರಿಸುತ್ತಾ, ಪ್ರಸಾದರ ಸವಾಲು ಎದುರಿಸಿ ಮೇಲುಗೈ ಸಾಧಿಸುವ ಪ್ರತಿಷ್ಠೆ. ಶ್ರೀನಿವಾಸ್ ಪ್ರಸಾದ್ ಗೆದ್ದರೆ ಸಿದ್ದರಾಮಯ್ಯ ಸೋತಂತೆ. ಯಡಿಯೂರಪ್ಪ ಮುಖ್ಯಮಂತ್ರಿಯಾಗಲು ಮುಡಿಗೆ ಗರಿ ಏರಿದಂತೆ ಎನ್ನುವವರೆಗೂ ಹರಿಯುತ್ತಿವೆ. ವಿಪರೀತ ವ್ಯಾಖ್ಯಾನಗಳು. ಹೀಗಾಗಿ ಇಡೀ ಉಪಚುನಾವಣಾ ರಾಜಕೀಯ ಹೋರಾಟವನ್ನು ಪ್ರತಿಷ್ಠೆಯ ಪ್ರಚಾರ ಕಣಗಳಿಂದಲೇ ತುಂಬಿಸಿಯಾಗಿದೆ. ಇಲ್ಲಿ ರಾಜಕೀಯ ಪಕ್ಷಗಳ ನೀತಿಗಳ ಬಗೆಗಿನ ಟೀಕೆಗಳು ತೀರಾ ಗೌಣ. ಅಂತಹ ರಾಜಕೀಯ ಪ್ರಶ್ನೆಗಳಾಗಲೀ, ಬರಗಾಲ, ಬೆಲೆಯೇರಿಕೆ, ಉದ್ಯೋಗ ಹೀನತೆಯಂತಹ ಜನರ ತತ್ತರಗಳಿಗೆ ಇಲ್ಲಿ ಜಾಗವೇ ಇಲ್ಲವಾಗಿದೆ.

ಇನ್ನು ಗುಂಡ್ಲುಪೇಟೆಯಲ್ಲಿ ದಿವಂಗತ ಹೆಚ್.ಎಸ್. ಮಹದೇವ ಪ್ರಸಾದ್‌ರವರ ಪತ್ನಿ ಎಂ.ಸಿ. ಮೋಹನ್‌ಕುಮಾರಿ ಕಾಂಗ್ರೆಎಸ್ ಅಭ್ಯರ್ಥಿ, ಎದುರಾಳಿ ಬಿಜೆಪಿಯ ಸಿ.ಎಸ್. ನಿರಂಜನ್ ಕುಮಾರ್ ಅಭ್ಯರ್ಥಿ. ಕಾಂಗ್ರೆಸ್ ಅಭ್ಯರ್ಥಿಗೆ ಪತಿಯ ಸಾವಿನ ಅನುಕಂಪ, ಬಿಜೆಪಿ ಅಭ್ಯರ್ಥಿಗೆ ಅವರ ತಂದೆ ಹಿಂದೆ ಹಲವು ಬಾರಿ ಸೋಲುತ್ತಾ ಬಂದದ್ದೇ ಅನುಕಂಪ ಆಸರೆ. ಕಾಂಗ್ರೆಸ್‌ಗೆ ಸ್ಥಾನ ಉಳಿಸಿಕೊಳ್ಳುವ ಪ್ರತಿಷ್ಠೆಯಾದರೆ, ಬಿಜೆಪಿಗೆ ಹೊಸ ಗೆಲುವಿನ ಸವಾಲು.

ಇಲ್ಲಿ ಬಬ್ಬರೊನ್ನೊಬ್ಬರು ನಿಂದಿಸುವ, ಅವಹೇಳನ ಮಾಡುವ ಪ್ರಯತ್ನಗಳು ನಡೆದಿರುವಾಗಲೇ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕೆಲವು ನಿರ್ಧಾರಗಳನ್ನು ಟೀಕಿಸುವುದು ಇಲ್ಲವೇ ಇಲ್ಲವೆಂದಲ್ಲ. ಅದೇನಿದ್ದರೂ ಉಪ್ಪಿನಕಾಯಿಯಂತೆ! ಕಾಂಗ್ರೆಸ್ ನಾಯಕರು ಮೋದಿ ಮತ್ತು ಕೇಂದ್ರ ಸರ್ಕಾರ, ಬಿಜೆಪಿ ಫ್ಯಾಶಿಸ್ಟತನದ ಬಗ್ಗೆ ಪ್ರಸ್ತಾಪಿಸಿದ್ದಾರೆ.

2017–18ರ ಸಾಲಿನ ರಾಜ್ಯ ಸರ್ಕಾರದ ಬಜೆಟ್‌ನ್ನು ಒಳ್ಳೇಯ ಬಜೆಟ್ ದಲಿತರ–ಹಿಂದುಳಿದವರ ಪರ ಎಂದು ಬಿಂಬಿಸಲು, ನಂತರ ಸರ್ಕಾರ ಲಮಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳೆಂದು ಪರಿಗಣಿಸಲು ಹಾಗೂ ವಾಸವಿರುವಲ್ಲಿಯ ಭೂಮಿ ಅವರಿಗೇ ಕೊಡಲು ತಿದ್ದುಪಡಿ ತಂದದ್ದನ್ನು ಬಳಸಲು ಕಾಂಗ್ರೆಸ್ ಪ್ರಯತ್ನಿಸುತ್ತಿದೆ. ಬಿಜೆಪಿ ಮೋದಿಯ ಗುಣಗಾನದಲ್ಲಿದೆ. ಆದರೆ ಇವಾವೂ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳ ರಾಜಕೀಯ ಆಡಳಿತದ ವಿಮರ್ಶಾತ್ಮಕ ಸ್ವರೂಪದಲ್ಲಿ ಪ್ರಸ್ತಾಪಿತ ಆಗಲಿಲ್ಲ, ಚರ್ಚೆಯೂ ನಡೆಯಲಿಲ್ಲ. ಈ ಮೂಲಕ ವಿಷಯಗಳನ್ನು ಮೂಲೆಗೆ ತಳ್ಳುವಲ್ಲಿ ಎರಡೂ ಪಕ್ಷಗಳು ಯತ್ನಿಸಿದವು. ಮತ್ತು ಪ್ರತಿಷ್ಠೆ, ಜಾತಿ ಮೇಲುಗೈ ಹಣ–ಅಧಿಕಾರದ ಮಂಕು ಬೂದಿ ಎರಚಲು ತೊಡಗಿವೆ.

ಸಾಮಾನ್ಯವಾಗಿ ಉಪಚುನಾವಣಾ ಫಲಿತಾಂಶಗಳು ಬಿಟ್ಟು, ರಾಜಕೀಯದ ಮೇಲೆ ಅಷ್ಟಾಗಿ ಪರಿಣಾಮ ಬೀರುವುದಿಲ್ಲ ಎಂಬುದು ನಿಜವಾದರೂ ಈ ಚುನಾವಣಾ ಮೂಲಕ ಎರಡೂ ಪಕ್ಷಗಳು ತಮ್ಮ ದೂರಗಾಮಿ ಅಂದರೆ 2018 ರಲ್ಲಿ ಮುಂಬರುವ ಚುನಾವಣೆಗಳನ್ನು ಗುರಿಯಾಗಿಸಿಕೊಂಡಿದೆ.

ಬಿಜೆಪಿ ಪಕ್ಷ ಈಗಾಗಲೇ ಆರು ತಿಂಗಳ ಮೊದಲೇ ಚುನವಣಾ ಸಿದ್ಧತೆ ಆರಂಭಿಸಿದೆ. ಸಂಘಪರಿವಾರದ ಮೂಲಕ ಕೋಮುಗಲಭೆ, ವಿಭಜನೆ–ಮತ ಕ್ರೋಢ್ರೀಕರಣದ ತನ್ನ ಪ್ರಯತ್ನ ಹೆಚ್ಚಿಸಿದೆ. ಅತ್ಯಂತ ಗಮನಾರ್ಹ ಸಂಗತಿಗಳೆಂದರೆ ತನ್ನ ಎದುರಾಳಿ ಪಕ್ಷವನ್ನು ಒಡೆದು ದುರ್ಬಲಗೊಳಿಸುವುದು, ಅದರ ಅತೃಪ್ತ ನಾಯಕರನ್ನು ಸೆಳೆಯುವುದು, ಇಲ್ಲವೇ ಅತೃಪ್ತಿ ಹೆಚ್ಚುವಂತೆ ಪ್ರೋತ್ಸಾಹಿಸಿ, ಕೇಂದ್ರದ ಬಲ ಬಳಸಿ, ತೆರಿಗೆ, ಜಾರಿ ಇಲಾಖೆ, ಸಿಬಿಐ ಮುಂತಾದ ಸಂಸ್ಥೆಗಳನ್ನು ಛೂ ಬಿಟ್ಟು ಧಾಳಿಗಳ ಬೆದರಿಕೆ ಬಡ್ಡಿ ತಮ್ಮ ಅಕ್ರಮ ಹಾಗೂ ಆಸ್ತಿ ಪಾಸ್ತಿ ರಕ್ಷಣೆಗೆ ಅಲ್ಲಿಂದ ಕಾಲು ಕಿತ್ತು ಬಿಜೆಪಿಯತ್ತ ಸರಿಯುವಂತೆ ಮಾಡುವುದು. ಈ ಹಿನ್ನೆಲೆಯಲ್ಲಿಯೇ ಹಿರಿಯ ನಾಯಕ ಎಸ್.ಎಂ. ಕೃಷ್ಣ ಪೇರಿ ಕಿತ್ತದ್ದು. ರಾಜಶೇಖರ ಮೂರ್ತಿ, ಜಾಫರ್ ಜಾಫರ್ ಷರೀಫ್‌ರಂತಹವರು ಮೋದಿ ಭಜನೆ, ಆರೆಸ್ಸೆಸ್ ಗುಣಗಾನ ಆರಂಭಿಸಿರೋದು. ಮೈಸೂರು ಭಾಗದ ಮಾಜಿ ಸಂಸಂದ, ದಲಿತರಾದ ಎಂ. ಶಿವಣ್ಣನವರೂ ಸಹ ಕಮಲ ಹಿಡಿಯುವ ಇಂಗಿತ ವ್ಯಕ್ತಪಡಿಸಿದ್ದು. ಇಂತಹುದೇ ತಂತ್ರಗಳನ್ನು ಬಿಜೆಪಿಯು ಉತ್ತರಪ್ರದೇಶ, ಮುಂತಾದ ರಾಜ್ಯಗಳಲ್ಲಿ ನಡೆಸಿ ಯಶಸ್ವಿಯೂ ಆಗಿದೆ. ಮೇಲಾಗಿ ಅಪಾರ ಮೊತ್ತದ ಕಾರ್ಪೋರೇಟ್ ಹಾಗೂ ಅಕ್ರಮ ಹಣದ ಚುನಾವಣಾ ಬಲ ಬೇರೆ.

ಹೀಗಾಗಿ ಈ ಉಪ ಚುನಾವಣೆಯಲ್ಲಿ ಸೋಲು–ಗೆಲುವುಗಳ ಪ್ರತಿಷ್ಠೆಯ ಜೊತೆ, ಮುಖ್ಯವಾಗಿ ಬಿಜೆಪಿ ದುರ್ಬಲವಾಗಿರುವ ದಕ್ಷಿಣ ಕರ್ನಾಟಕದಲ್ಲಿ ತನ್ನ ನೆಲೆಯನ್ನು ಭದ್ರಪಡಿಸಿಕೊಳ್ಳುವ ತೀವ್ರ ಪ್ರಯತ್ನಕ್ಕೆ ಮುಂದಾಗಿದೆ. ಪ್ರಬಲ ಜಾತಿಗಳಾದ ಒಕ್ಕಲಿಗರ ನಡುವೆ ಕೃಷ್ಣ ರಂಥವರು, ಶ್ರೀನಿವಾಸ್ ಪ್ರಸಾದ್ ಮೂಲಕ ದಲಿತ (ಬಲಗೈ)ರನ್ನು ಪ್ರಭಾವಿಸಲು ಗಮನ ಕೇಂದ್ರೀಕರಿಸಿದೆ. ಒಂದೆಡೆ ಎದುರಾಳಿ ಎದುರಾಳಿ ಬಲ ಒಡೆಯುವದು, ಮತ್ತೊಂದೆಡೆ ಅವರ ಮೂಲಕ ಜಾತಿ ಪ್ರಭಾವವನ್ನು ವಿಸ್ತರಿಸಿ ರಾಜಕೀಯ ನೆಲೆ ಮಾಡಿಕೊಳ್ಳುವುದು. ಆದ್ದರಿಂದಲೇ ಬಿಜೆಪಿ ಪಕ್ಷಕ್ಕೆ ಈ ಉಪಚುನಾವಣೆ ಮುಮಬರುವ ಮುಖ್ಯ ಚುನಾವಣೆಗೆ ನಡೆಸುತ್ತಿರುವ ತಾಲೀಮು.

ಇದರ ಎದುರಲ್ಲಿ ಕಾಂಗ್ರೆಸ್‌ನ ಪ್ರದರ್ಶನ ಉಪಚುನಾವಣೆಗೆ ಸಂಬಂಧಿಸಿದಂತೆ ಕಳಪೆಯೇನಲ್ಲ ಎನ್ನಿಸಿದರೂ ರಾಜ್ಯ ಒಟ್ಟು ವಿದ್ಯಾಮಾನಗಳಲ್ಲಿ, ಅದರದ್ದು ಅಂತಹ ಗಂಬೀರ ಪ್ರಬಾವ ಬೀರುವುದು ಕಡಿಮೆ ಎಂಬ ಭಾವನೆ ಸೃಷ್ಠಿಯಾಗದೆ. ಯಾಕೆಂದರೆ ಕಾಂಗ್ರೆಸ್ ಪಕ್ಷ ಮತ್ತು ಅದರ ಸರ್ಕಾರದ ಆಡಳಿತ ಜನತೆಯ ಮೂಲಭೂತ ಪ್ರಶ್ನೆಗಳನ್ನು ನಿರ್ಲಕ್ಷಿಸಿದೆ. ಆನರ ಮೇಲೆ ಹೆಚ್ಚುತ್ತಿರುವ ಹೊರೆಗಳನ್ನು ಕಡಿಮೆಗೊಳಿಸಿಲ್ಲ ಮತ್ತು ತನ್ನದ್ದನ್ನೂ ಸೇರಿಸಿದೆ. ಆರ್ಥಿಕ ನೀತಿಗಳಲ್ಲಿ ಭಿನ್ನತೆಯಿಲ್ಲ. ಒಳಜಗಳ, ಗುಂಪುಗಾರಿಕೆಯಂತೂ ಬಿರಿಯುತ್ತಿದೆ. ರಾಜಕೀಯ ನಿಷ್ಕ್ರೀಯತೆ ಕೂಡ. ಇದಕ್ಕೆ ಎದುರಾಗಿ, ಪರ್ಯಾಯ ರೂಪಿಸಲು ಎಡ ಪಕ್ಷಗಳು, ಜನಚಳುವಳಿಗಳ ಪ್ರಯತ್ನ ನಡೆದಿದೆ. ಎಂಬುದು ಆಶಾದಾಯಕ.

ಆದರೆ ಈ ಉಪಚುನಾವಣೆಯ ಮಟ್ಟಿಗೆ ಮೂರನೆಯ ಹಾಗೂ ಪ್ರಾದೇಶಿಕ ಪಕ್ಷವೆಂದು ಹೇಳಿಕೊಳ್ಳುತ್ತಿದ್ದ ಜಾತ್ಯಾತೀತ ಜನತಾದಳ ಸ್ಪರ್ಧಿಸಿಲ್ಲ ಎಂಬೂದೂ ಗಮನಿಸಬೇಕಾದ ಸಂಗತಿ.

ಇಂತಹ ಸ್ಥಿತಿಯಲ್ಲಿ ಜನತೆಯ ತೀರ್ಪಿನತ್ತ ಕುತೂಹಲದ ನೋಟ ಎಲ್ಲರದು. ●

ನಾಳಿನ ಕಾರ್ಯಕ್ರಮಗಳು

- **"ಸಮಾನ ಕೆಲಸಕ್ಕೆ ಸಮಾನ ವೇತನ" ವಿಚಾರ ಸಂಕಿರಣ, ಏಪ್ರಿಲ್ 9**
  ಸಿಐಟಿಯು, ಬೆಂಗಳೂರು
- **ದಲಿತ ಹಕ್ಕುಗಳ ಸಮಿತಿಯ ರಾಜ್ಯಮಟ್ಟದ ರ್‍ಯಾಲಿ ಮತ್ತು ಶಾಲೆ, ಎಪ್ರಿಲ್ 15–17,**
  ಹೊಸಪೇಟೆ (ಬಳ್ಳಾರಿ)
- **ಸಾಮಾಜಿಕ ನ್ಯಾಯ ಮತ್ತು ಸಮಾಜವಾದಿ ಕ್ರಾಂತಿ, ಏಪ್ರಿಲ್ 23**
  ದಲಿತ ಹಕ್ಕುಗಳ ಸಮಿತಿ ಇತರ ಸಂಘಟನೆಗಳ ಜತೆ
- **ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮ್ಮೇಳನ ಏಪ್ರಿಲ್ 25–27,** ಹುಬ್ಬಳ್ಳಿ
- **"ಕಾರ್ಮಿಕ ಹಕ್ಕುಗಳ ರಕ್ಷಣೆ, ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ರಕ್ಷಣಾ ಯೋಜನೆಗಳ ಜಾರಿ ಹಾಗು ಸಾರ್ವಜನಿಕ ಉದ್ಧಿಮೆಗಳ ಉಳಿವಿಗಾಗಿ"** ಮೇ 1 2017 ಕಾರ್ಮಿಕ ದಿನಾಚರಣೆ
- **"ಕೆಲಸದ ಸ್ಥಳಗಳಲ್ಲಿನ ಲೈಂಗಿಕ ಕಿರುಕುಳ"** ಕಾರ್ಯಾಗಾರ, ಜೂನ್ 3–4, ಬೆಂಗಳೂರು
- **ಕಟ್ಟಡ ಕಾರ್ಮಿಕರ ರಾಜ್ಯ ಸಮ್ಮೇಳನ** ಜುಲೈ 1–2, ಕುಂದಾಪುರ

ಮೂವರು ರಾಮರೂ, ಒಂದೇ ರಾಮಾಯಣವೂ ಮತ್ತು ರಾಮ ನವಮಿಯೂ: ನಮ್ಮ ಮಹಾಕಾವ್ಯ, ಪುರಾಣಗಳಲ್ಲಿ ಮೂವರು ರಾಮರಿದ್ದಾರೆ. ಹಾಗೇ ನೆನಪಿಸಿಕೊಳ್ಳಲು ಪ್ರಯತ್ನಿಸಿ. ರಾಮ ನವಮಿಯ ದಿನವಾದರೂ. ಈ ಮೂವರು ರಾಮರು ಪರಶುರಾಮ, ಬಲರಾಮ, ಕೋದಂಡರಾಮ. ಈ ಮೂವರೂ ತಂತಮ್ಮ ಮೂರು ಆಯುಧಗಳಿಗಾಗಿ ಪ್ರಸಿದ್ಧರಾದವರು. ಇಬ್ಬರದಂತೂ ಹಾಗೂ ಹೆಸರಿನಲ್ಲಿಯೇ ಸೇರಿದೆ. ಆದರೆ ಮಧ್ಯದ ಬಲರಾಮನದು. ಅವನ ಹೆಸರೂ ಆಯುಧ ಪ್ರಸಿದ್ಧವೇ. ಅವನು ಹಲಾಯುಧ. ಹಲವೇ ಬಲವಾಗಿದೆ . ನೇಗಿಲೇ ಅವನ ಆಯುಧ. ಮಾನವನ ವಿಕಾಸದಲ್ಲಿ ಈ ಮೂರು ಆಯುಧಗಳೂ ಅವನ ಬೆಳವಣಿಗೆಯ ಮೂರು ಮುಖ್ಯ ಹಂತಗಳ ಸೂಚಕ. ಕೊಡಲಿಯಿಲ್ಲದೆ ಕಾಡನ್ನು ನಾಡಾಗಿಸಿ ಕ್ಷೇಮಕರ ವಾಸ ಸ್ಥಾನವಾಗಿಸಲು ಸಾಧ್ಯವಾಗುತ್ತಿರಲಿಲ್ಲ. ನೇಗಿಲಿನ ಪ್ರಾಮುಖ್ಯತೆ ಹೇಳುವುದೇ ಬೇಡ. ಇನ್ನು ಬಿಲ್ಲು ಬೇಟೆಯಿಂದ ಆಹಾರ ಒದಗಿಸುವುದರ ಜೊತೆಗೆ ಯುದ್ಧದ ಉಪಕರಣ. ಆಕ್ರಮಣ, ರಾಜ್ಯ, ಸಾಮ್ರಾಜ್ಯ ಸ್ಥಾಪನೆಯ ಉಪಕರಣ.

ಈ ಮೂರು ರಾಮರೂ ಕೂಡ ತಮ್ಮ ಆಯುಧಗಳಿಂದಲೇ ಪ್ರಸಿದ್ಧರು. ಹಾಗಾದರೆ ಈ ಆಯುಧಗಳ ಜೊತೆ ಜೋಡಣೆಯಾಗಿರುವ ರಾಮ ಎಂಬ ಪದದ ಅರ್ಥವೇನು? ಈಗ ಅದಕ್ಕೆ ಕಲ್ಪಿಸಿರುವ ನಾನಾ ಅರ್ಥ ವೈಭವವನ್ನು ಪಕ್ಕಕ್ಕಿಟ್ಟು ಯೋಚಿಸೋಣ. ಮೂರೂ ಆಯುಧಗಳ ಜೊತೆ ಜೋಡಿಸಿಕೊಂಡಿರುವ ರಾಮ ಎಂಬ ಪದದ ಅರ್ಥ ಕೇವಲ ಆಯುಧವನ್ನು ಹಿಡಿದವ, ಪಡೆದವ ಎಂದಿರಬಹುದೇ?

ಮಾನವನ ಇತಿಹಾಸದಲ್ಲಿ ಮೂರು ಉಪಕರಣಗಳು ಮತ್ತು ಅವುಗಳನ್ನು ಬಳಸಿದ ಮನುಷ್ಯರು ಒಂದೊಂದೂ ಒಂದು ನೆಗೆತಗಳನ್ನು ತಂದುಕೊಟ್ಟವರು. ಆದರೆ ರಾಮಾಯಣ ಬರೆಯಲ್ಪಟ್ಟಿರುವುದು ಕೋದಂಡ ರಾಮನಿಗೆ ಮಾತ್ರ. ಉಳಿದವರದು ಕೇವಲ ಉಪ ಪಾತ್ರಗಳಾಗಿ ಉಲ್ಲೇಖ ಮಾತ್ರ. ಅವನದೇ ಜಯಂತಿ, ಕೀರ್ತನೆ. ಎಷ್ಟೊಂದು ಕಾವ್ಯಗಳು, ಹರಿಕಥೆ, ಪುರಾಣ, ಪ್ರವಚನಗಳು, ನಾಟಕ, ಯಕ್ಷಗಾನ, ಸಂಗೀತ, ನೃತ್ಯಗಳು, ದೇವಾಲಯ ವೈಭವಗಳು.

ಏಕೆ? ಏಕೆ? ಏಕೆ?

ಏಕೆಂದರೆ ಬಿಲ್ಲು ಯುದ್ಧದ, ಆಕ್ರಮಣದ ಉಪಕರಣವಾಗಿ ರಾಜ, ಮಹಾರಾಜರನ್ನು ಸೃಷ್ಟಿಸಿದ ಉಪಕರಣ.

ನೇಗಿಲು, ಕೊಡಲಿಗಳನ್ನು ಮತ್ತು ಅವುಗಳನ್ನು ಹಿಡಿದವರನ್ನು ನೆನಪಿಸಿಕೊಳ್ಳುವವರು ಯಾರು?

– ಜಿ ಎನ್. ನಾಗರಾಜ್

ತಣ್ಣೀರುಬಾವಿ ಬೀಚ್‌ನಲ್ಲಿ ಡಿವೈಎಫ್ಐ ಪ್ರತಿಭಟನೆ

ಮಂಗಳೂರಿನ ಆಸುಪಾಸಿನಲ್ಲಿರುವ ಅಧಿಕೃತ ವಿಹಾರ ಬೀಚ್‌ಗಳಲ್ಲಿ ಕೆಲವನ್ನು ಪ್ರವಾಸೋದ್ಯಮ ಇಲಾಖೆ ಖಾಸಗಿ ಗುತ್ತಿಗೆದಾರರಿಗೆ ನಿರ್ವಹಣೆಗೆ ನೀಡಿರುತ್ತದೆ. ಅದರಲ್ಲಿ ತಣ್ಣೀರುಬಾವಿ ಬೀಚ್ ಕೂಡಾ ಒಂದಾಗಿದ್ದು, ಸೂಕ್ತ ರಕ್ಷಣಾ ಸೌಲಭ್ಯ ವ್ಯವಸ್ಥೆಗಳಿಲ್ಲದೆ ಪ್ರತೀವರ್ಷ ಹಲವಾರು ಮಂದಿ ವಿಹಾರಿಗಳು ಸಮುದ್ರದಲ್ಲಿ ಈಜಲು ಹೋಗಿ ಸಾವೀಗೀಡಾಗಿದ್ದಾರೆ. ಇತ್ತೀಚೆಗೆ ಸಫ್ವಾನ್ ಎಂಬ ವಿದ್ಯಾರ್ಥಿ ತಣ್ಣೀರುಬಾವಿ ಬೀಚ್‌ನಲ್ಲಿ ಸಮುದ್ರದಲ್ಲಿ ಮುಳುಗಿ ಸಾವಿಗೀಡಾಗಿದ್ದಾನೆ. ಆತನ ಸ್ನೇಹಿತರ ಮೇಲೆ ಬೀಚ್ ನಿರ್ವಹಣಾ ಸಂಸ್ಥೆಯ ಸಿಬ್ಬಂದಿ ಹಲ್ಲೆ ನಡೆಸಿದ್ದಾರೆ. ಪ್ರವಾಸಕ್ಕಾಗಿ ಬರುವ ನಾಗರಿಕರ ಪ್ರಾಣದ ಬಗ್ಗೆ ಬೀಚ್ ಗುತ್ತಿಗೆ ಸಂಸ್ಥೆ ನಿರ್ಲಕ್ಷ್ಯ ತೋರುತ್ತಿದೆ. ಪ್ರವಾಸೋದ್ಯಮ ಇಲಾಖೆಯಡಿಯಲ್ಲಿ ಅಧಿಕೃತವಾಗಿ ನಿರ್ವಹಿಸುತ್ತಿರುವ ಬೀಚ್‌ಗಳಲ್ಲಿ ಸಮುದ್ರ ವಿಹಾರಿಗಳಿಗೆ ಇಲಾಖೆ ಸುರಕ್ಷತಾ ಸೌಲಭ್ಯಗಳನ್ನು ನೀಡಲು ಸಾಧ್ಯವಾಗದೇ ಇದ್ದಲ್ಲಿ ಬೀಚ್ ಪ್ರವಾಸೋದ್ಯಮ ಅಭಿವೃದ್ಧಿ ಸಾಧ್ಯವೇ?

ಇಂಥ ಪ್ರಶ್ನೆಗಳನ್ನು ಮುಂದಿಟ್ಟು ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ಮಾರ್ಚ್ 21ರಂದು ತಣ್ಣೀರುಬಾವಿ ಬೀಚ್‌ನಲ್ಲಿ ಪ್ರತಿಭಟನೆ ನಡೆಯಿತು. ತಣ್ಣೀರುಬಾವಿ ಬೀಚ್ ನಿರ್ವಾಹಕರ ಗುತ್ತಿಗೆ ರದ್ದುಪಡಿಸಲು ಆಗ್ರಹಿಸಲಾಯಿತು. ಸಮುದ್ರದಲ್ಲಿ ಆಕಸ್ಮಿಕವಾಗಿ ಮುಳುಗಿ ಮೃತಪಟ್ಟ ಸಫ್ವಾನ್ ಕುಟುಂಬಕ್ಕೆ ಪರಿಹಾರ ನೀಡಬೇಕೆಂದು ಆಗ್ರಹಿಸಲಾಯಿತು. ಸಫ್ವಾನ್ ಸ್ನೇಹಿತರ ಮೇಲೆ ಹಲ್ಲೆ ಮಾಡಿದ ಸಿಬ್ಬಂದಿಯ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಬೇಕೆಂದೂ ಒತ್ತಾಯಿಸಲಾಯಿತು.

ಪ್ರತಿಭಟನೆಯನ್ನುದ್ದೇಶಿಸಿ ಡಿವೈಎಫ್ಐ ಮಾಜಿ ರಾಜ್ಯಾಧ್ಯಕ್ಷ ಸುನಿಲ್ ಕುಮಾರ್ ಬಜಾಲ್, ದ.ಕ.ಜಿಲ್ಲಾ ಉಪಾಧ್ಯಕ್ಷ ಬಿ.ಕೆ.ಇಮ್ತಿಯಾಜ್ ಮಾತನಾಡಿದರು.

ವರದಿ: ವಾ.ಉ.

ಮನೆ ನಿವೇಶನ ರಹಿತ ಅರ್ಜಿದಾರರ ಸಮಾವೇಶಗಳು



ಪ್ರಪಂಚದಲ್ಲೇ ಅತೀ ಹೆಚ್ಚು ಕಾನೂನು ನಮ್ಮ ದೇಶದಲ್ಲೇ. ಆದರೆ ಪುಸ್ತಕದಲ್ಲಿದೆ ಜ್ಯಾರಿಯಾಗುತ್ತಿಲ್ಲ. ಪ್ರಾಣಿ, ಪಕ್ಷಿ, ಮರಗಿಡ, ಜನನ, ಮರಣ, ಗೋಹತ್ಯೆ ನಿಷೇಧ, ಭ್ರೂಣಲಿಂಗ ಪರೀಕ್ಷೆ ನಿಷೇದ ಇತ್ಯಾದಿ ಕಾನೂನು ಜ್ಯಾರಿಯಲ್ಲಿದ್ದರೂ ಮನೆ, ನಿವೇಶನ ಕೊಡಿ ಅನ್ನುವುದಕ್ಕೆ ಕಾನೂನು ಇಲ್ಲ– ಆದ್ದರಿಂದ ವಸತಿ ನೀತಿಜ್ಯಾರಿಯಾಗಬೇಕು ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಕುಂದಾಪುರ ತಾಲೂಕು ಪ್ರಧಾನ ಕಾರ್ಯದರ್ಶಿ ನಾಗರತ್ನ ನಾಡ ಹೇಳಿದರು.

ಕ.ಪ್ರಾ.ಕೃ.ಕೂ. ಸಂಘದ ಗುಜ್ಜಾಡಿ ಗ್ರಾಮ ಸಮಿತಿ ಆಶ್ರಯದಲ್ಲಿ ಮನೆ ನಿವೇಶನ ರಹಿತ ಅರ್ಜಿದಾರರ ಬೃಹತ್ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಕ.ಪ್ರಾ.ಕೃ.ಕೂ. ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಸಮಾವೇಶದಲ್ಲಿ ಮಾತನಾಡುತ್ತಾ– ಸ್ವಾತಂತ್ರ್ಯ ಸಿಕ್ಕಿ ಏಳು ದಶಕಗಳಾದರೂ ರೇಶನ್, ಕುಡಿಯುವ ನೀರು, ವಿದ್ಯುತ್, ಮನೆ, ಪೆನ್ಷನ್ ಕೊಡಿ ಎಂದು ಸರಕಾರವನ್ನು ಒತ್ತಾಯಿಸುವ ದುಸ್ಥಿತಿ ಬಂದಿರುವುದು ನಾಚಿಕೇಗೇಡು. ಮನೆ ನಿವೇಶನ ರಹಿತ ಅರ್ಜಿದಾರರು ಬಂಗ್ಲೆ ಬಂಗಾರ ಕೊಡಿ ಎಂದು ಕೇಳುತ್ತಿಲ್ಲ. ಒಂದು ತುಂಡು ಭೂಮಿಗಾಗಿ ಹೋರಾಡುತ್ತಿದ್ದಾರೆ. ಕ.ಪ್ರಾ.ಕೃ.ಕೂ. ಸಂಘದ ಜಿಲ್ಲಾಧ್ಯಕ್ಷ ಯು. ದಾಸಭಂಡಾರಿ, ಪದ್ಮಾವತಿ ಶೆಟ್ಟಿ, ಕುಶಲ, ಶ್ಯಾಮಲ, ಚಿಕ್ಕಮೊಗವೀರ ಗಂಗೊಳ್ಳಿ, ಉಪಸ್ಥಿತರಿದ್ದರು.

ಹಕ್ಲಾಡಿ: ಸರಕಾರಿ ಜಮೀನು ಗುರುತಿಸಿ ನಿವೇಶನ ಮಂಜೂರು ಮಾಡಲು ಅಗ್ರಹ

ಕುಂದಾಪುರ ತಾಲೂಕಿನಾದ್ಯಂತ ಸರಕಾರಿ ಜಮೀನು ಅನಧೀಕೃತವಾಗಿ ಅತಿಕ್ರಮಣ ಮಾಡಿಕೊಂಡು ಕೃಷಿ ವಗೈರೆ ಅಭಿವೃದ್ಧಿ ಪಡಿಸಿ ಸ್ಥಳ ಸ್ವಾಧೀನಾನುಭವ ಹೊಂದಿರುವ ಬಡರೈತ, ಕೃಷಿ ಕೂಲಿಕಾರರು, ಅಕ್ರಮ ಸಕ್ರಮದಡಿ ನಮೂನೆ 50, 53 ಹಾಗೂ 94 ಸಿ ಕಲಂನಲ್ಲಿ ಅರ್ಜಿ ಸಲ್ಲಿಸಿದ ಭೂಮಿಗಳಾದ ಹೊಲಗದ್ದೆ, ತೋಟ, ಮನೆ, ಬಾವಿ, ಹಟ್ಟಿ ಅಂಗಳಗಳ ಡೀಮ್ಡ್ ಫಾರೆಸ್ಟ್ ಅಡಿಯಲ್ಲಿ ಸೇರಿಕೊಂಡಿದ್ದು, ಭೂಮಂಜೂರಾತಿಗೆ ಕಾನೂನು ತಡೆಯಾಗಿರುವುದನ್ನು ಕೂಡಲೇ ಪರಿಹರಿಸಲು ಸರಕಾರ ಕ್ರಮ ವಹಿಸಬೇಕು ಎಂದು ಕ.ಪ್ರಾ.ಕೃ.ಕೂ. ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಸರಕಾರವನ್ನು ಒತ್ತಾಯಿಸಿದರು.

ಕ.ಪ್ರಾ.ಕೃ.ಕೂ. ಸಂಘ ಹಾಗೂ ಮನೆ ನಿವೇಶನ ರಹಿತರ ಹೋರಾಟ ಸಮಿತಿ ಆಶ್ರಯದಲ್ಲಿ ಹಕ್ಲಾಡಿ, ನೂಜಾಡಿ, ಕುಂದಬಾರಂದಾಡಿ ಗ್ರಾಮಗಳ ಬಡ ಅರ್ಜಿದಾರ ರೈತ ಕೃಷಿ ಕೂಲಿಕಾರರ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು. ಮನೆ ನಿವೇಶನಕ್ಕೆ ಸರಕಾರಿ ಜಾಗ ಗುರುತಿಸಿ ನಿವೇಶನ ಮಂಜೂರು ಮಾಡುವುದಕ್ಕೆ ಬೈಂದೂರು ಕುಂದಾಪುರ ಶಾಸಕರ ಅಧ್ಯಕ್ಷತೆಯಲ್ಲಿ ಕಂದಾಯ ಅಧಿಕಾರಿಗಳ ಜೊತೆ ಕೃಷಿ ಕೂಲಿಕಾರರ ಸಂಘದ ಮುಖಂಡರ ಜಂಟಿ ಸಭೆ ಕರೆಯಬೇಕು ಎಂದರು.

ಕ.ಪ್ರಾ.ಕೃ.ಕೂ. ಸಂಘದ ಜಿಲ್ಲಾ ಉಪಾಧ್ಯಕ್ಷ ರಾಜೀವ ಪಡುಕೋಣೆ, ತಾಲೂಕು ಪ್ರಧಾನ ಕಾರ್ಯದರ್ಶಿ ನಾಗರತ್ನ ನಾಡ, ಮುಖಂಡರಾದ ಶೀಲಾವತಿ, ಶ್ಯಾಮಲ, ರಮೇಶ ಗಾಣಿಗ ಕುಂದಬಾರಂದಾಡಿ, ಉಪಸ್ಥಿತರಿದ್ದರು

ನಾವುಂದ : ಗುರುತಿಸಿರುವ ಸರಕಾರಿ ಜಾಗ ನಿವೇಶನ ರಹಿತರಿಗೆ ಮಂಜೂರು ಮಾಡಲು ಆಗ್ರಹ

ಕ.ಪ್ರಾ.ಕೃ.ಕೂ. ಸಂಘ ನಾವುಂದ ಗ್ರಾಮ ಸಮಿತಿ ಮತ್ತು ಮನೆ ನಿವೇಶನ ರಹಿತರ ಹೋರಾಟ ಸಮಿತಿ ನೇತೃತ್ವದಲ್ಲಿ ನಾವುಂದ ಗ್ರಾಮ ಪಂಚಾಯತ್ ವ್ಯಾಪ್ತಿ ಮನೆ, ನಿವೇಶನ ರಹಿತ 438 ಅರ್ಜಿದಾರರನ್ನು ಗ್ರಾಮ ಪಂಚಾಯತ್ ವಸತಿ ಸಮಿತಿಯ ತೀರ್ಮಾನದಂತೆ ನಿವೇಶನ ರಹಿತರ ಅಂತಿಮ ಪಟ್ಟಿ ಸಿದ್ದಪಡಿಸಿ ವರ್ಷ 2 ಕಳೆದರೂ ಈ ತನಕ ಸರಕಾರಿ ನಿವೇಶನ ಸ್ಥಳ ಮಂಜೂರು ಮಾಡದ ಸ್ಥಳೀಯ ಆಡಳಿತದ ಕ್ರಮವನ್ನು ಕ.ಪ್ರಾ.ಕೃ.ಕೂ. ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಖಂಡಿಸಿದರು.

ಕ.ಪ್ರಾ.ಕೃ.ಕೂ. ಸಂಘದ ನಾವುಂದ ಗ್ರಾಮ ಸಮಿತಿ ಆಶ್ರಯದಲ್ಲಿ ಜರಗಿದ ನಿವೇಶನ ರಹಿತ ಅರ್ಜಿದಾರರ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ವರದಿ : ವೆಂಕಟೇಶ ಕೋಣಿ

ಡಿ.ಸಿ., ಎ.ಸಿ., ಮೇಲೆ ಹಲ್ಲೆ

– ಸಿಪಿಐ(ಎಂ) ಜಿಲ್ಲಾ ಸಮಿತಿ ಖಂಡನೆ

ಅಕ್ರಮ ಮರಳುಗಾರಿಕೆ ವಿರುದ್ಧ ಧಾಳಿ ನಡೆಸಿದ್ದ ಉಡುಪಿ ಜಿಲ್ಲಾಧಿಕಾರಿ, ಕುಂದಾಪುರದ ಉಪ ವಿಭಾಗಾಧಿಕಾರಿ, ಅಂಪಾರು ಗ್ರಾಮ ಕರಣಿಕ ಹಾಗೂ ಇತರರ ಮೇಲೆ ನಡೆದ ಹಲ್ಲೆಯನ್ನು ಇಂದು ನಡೆದ ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಸಭೆ ತೀವ್ರವಾಗಿ ಖಂಡಿಸಿದೆ.

ಹಿಂದೆ ಬಳ್ಳಾರಿ ಜಿಲ್ಲೆಯ ಗಣಿ ಮಾಫಿಯಾದಂತೆ, ಕರಾವಳಿ ಜಿಲ್ಲೆಗಳಲ್ಲಿ ಮರಳು ಮಾಫಿಯಾ ಬೆಳೆಯುತ್ತಿದೆ ಕಳೆದ 2–3 ವರ್ಷಗಳಿಂದ ಉಸ್ತುವಾರಿ ಸಚಿವರ ಹಾಗೂ ಸರಕಾರದ ಗಮನಕ್ಕೆ ತರಲಾಗಿತ್ತು. ಮರಳು ಮಾಫಿಯಾವು ಕೃತಕ ಅಭಾವ ಸೃಷ್ಟಿಸಿ ಯುನಿಟ್‌ಗೆ ರೂ.1800 ಕ್ಕೆ ಮಾರಾಟವಾಗುತ್ತಿದ್ದ ಮರಳು ದರವನ್ನು ರೂ.5000 ಕ್ಕಿಂತ ಹೆಚ್ಚಿಗೆ ಹೋಗುವಂತೆ ಮಾಡಿದೆ. ಕರಾವಳಿ ಜಿಲ್ಲೆಗಳಿಗೆ ಪ್ರತ್ಯೇಕ ಮರಳು ನೀತಿ ಮಾಡುವುದಾಗಿ ಸರಕಾರ ಘೋಷಿಸಿದರೂ ಯಾವುದೇ ಕ್ರಮಕೈಗೊಂಡಿಲ್ಲ.

ಎರಡು ಪ್ರಮುಖ ರಾಜಕೀಯ ಪಕ್ಷಗಳ ಮುಖಂಡರು/ಕಾರ್ಯಕರ್ತರು ಅಕ್ರಮ ಮರಳುಗಾರಿಕೆಯಲ್ಲಿ ತೊಡಗಿದ್ದಾರೆ ಎಂಬ ಅಂಶವನ್ನು ಜನರು ಹೇಳುತ್ತಿದ್ದಾರೆ.

ಮರಳು ಮಾಫಿಯಾದ ಒತ್ತಡದಿಂದಾಗಿಯೇ ಹಿಂದಿನ ಜಿಲ್ಲಾಧಿಕಾರಿಗಳ ವರ್ಗಾವಣೆ ಆಗಿದೆ ಎಂಬ ಮಾತು ಕೇಳಿ ಬರುತ್ತಿದೆ. ವಿವಿಧ ಇಲಾಖೆಗಳಲ್ಲಿನ ಭ್ರಷ್ಟಾಚಾರವು ಈ ಪಿಡುಗು ಹೆಚ್ಚುವಂತೆ ಮಾಡಿದೆ. ಇಂತಹ ಸನ್ನಿವೇಶದಲ್ಲಿ ಅಧಿಕಾರಿಗಳು ತೋರಿದ ಧೈರ್ಯ ಮೆಚ್ಚುವಂತಾದ್ದು.

ಈ ಕೂಡಲೇ ಅಕ್ರಮ ಮರಳುಗಾರಿಕೆಗೆ ಕಡಿವಾಣ ಹಾಕಲು ರಾಜ್ಯ ಸರಕಾರ ತುರ್ತುಕ್ರಮ ಕೈಗೊಳ್ಳಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ. ಅದೇ ಸಂದರ್ಭದಲ್ಲಿ ಸುಲಭದರದಲ್ಲಿ ಮರಳು ದೊರೆಯುವಂತೆ ವ್ಯವಸ್ಥೆ ಮಾಡಬೇಕೆಂದು ಸಿಪಿಐ(ಎಂ) ಆಗ್ರಹಿಸುತ್ತದೆ.

'ಜಿಲ್ಲಾ ಶಿಕ್ಷಣ ರೆಗ್ಯುಲೇಟಿಂಗ್ ಪ್ರಾಧಿಕಾರ' ಕ್ರೀಯಾಶೀಲಗೊಳಿಸಲು

ಡೊನೇಷನ್ ನಿಯಂತ್ರಣಕ್ಕಾಗಿ ಒತ್ತಾಯಿಸಿ ಎಸ್‌ಎಫ್ಐ ಪ್ರತಿಭಟನೆ ಮನವಿ

ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್‌ಎಫ್ಐ) ಹಾವೇರಿ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಎಸ್‌ಎಫ್ಐ ಕಾರ್ಯಕರ್ತರು ನಗರದ ಹೊಸಮನಿ ಸಿದ್ದಪ್ಪ ವೃತ್ತದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಡೊನೇಷನ್ ಹಾವಳಿ ವಿರುದ್ಧ ಪ್ರತಿಭಟನೆ ನಡೆಸಿ ತಹಶೀಲ್ದಾರರ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಎಸ್‌ಎಫ್ಐ ಜಿಲ್ಲಾ ಅಧ್ಯಕ್ಷರ ಸುಭಾಸ ಎಂ ಮಾತನಾಡಿ ಜಿಲ್ಲೆಯಾದ್ಯಂತ ಈಗಾಗಲೇ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ. 2017–18 ನೇ ಸಾಲಿನಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಪ್ರವೇಶಾತಿಯ ದಿನಾಂಕವನ್ನು ರಾಜ್ಯ ಸರಕಾರ ಇನ್ನೂ ನಿಗದಿ ಪಡಿಸಿಲ್ಲ. ಹೀಗಿರುವಾಗಲೇ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪ್ರಕ್ರಿಯೆಗಳು ನಡೆಯುತ್ತಿವೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಸಕಾರದ ನೀತಿ–ನಿಯಮಗಳನ್ನು ಮೀರಿ ಡೊನೇಷನ್ ವಸೂಲಿಯಲ್ಲಿ ತೊಡಗಿವೆ. ಸೀಟುಗಳ ಲಭ್ಯತೆ, ಸಂಗ್ರಹಿಸಬೇಕಾದ ಶುಲ್ಕ, ಪಾಲಿಸಬೇಕಾದ ಮೀಸಲಾತಿ, ನಿಯಮಗಳ ಕುರಿತು ಶಿಕ್ಷಣ ಇಲಾಖೆ ಅನೇಕ ಸುತ್ತೋಲೆ ಹೊರಡಿಸಿದರೂ ಖಾಸಗಿ ಶಾಲೆಗಳು ಎಗ್ಗಿಲ್ಲದೆ ವಸೂಲಿಯಲ್ಲಿ ತೊಡಗುವ ಮೂಲಕ ನಿಯಮಗಳನ್ನು ಉಲ್ಲಂಘಿಸಿ ಆದೇಶಗಳಿಗೆ ಬೆಲೆ ನೀಡದೆ ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿವೆ. ಈ ಬಗ್ಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಹಾವೇರಿ ಜಿಲ್ಲಾ ಉಪನಿರ್ದೇಶಕರಿಗೆ ಮಾಹಿತಿ ಇದ್ದರೂ ಕೂಡಾ ಯಾವುದೇ ರೀತಿಯ ಕ್ರಮ ಕೈಗೊಳ್ಳುತ್ತಿಲ್ಲ, ಕಾಳ ಸಂತೆಯಲ್ಲಿ ಶಿಕ್ಷಣ ಮಾರಾಟವಾಗುತ್ತಿದ್ದರೂ ಅದನ್ನು ನಿಯಂತ್ರಿಸಬೇಕಾದ ಸರಕಾರ ಮತ್ತು ಅಧಿಕಾರಿಗಳ ನಿರ್ಲಕ್ಷ್ಯ



ಖಂಡನೀಯ ಎಂದರು.

1983 ರ ಕರ್ನಾಟಕ ಶಿಕ್ಷಣ ಕಾಯಿದೆ ಅನ್ವಯ ಮತ್ತು 1995 ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಲಾಸಿಫಿಕೇಶನ್, ರೆಗ್ಯುಲೇಶನ್ ಮತ್ತು ಪ್ರಿಸ್ಕಿಪೇಶನ್ ಕರಿಕ್ಯುಲಂ) ರ ಕಾಯಿದೆಯ ನಿಯಮಗಳು 28.10.1999 ರಂದು ಜಾರಿಗೆ ಬರುವ ಮೂಲಕ ಶಿಕ್ಷಣದ ವ್ಯಾಪಾರೀಕರಣಕ್ಕೆ ಕಡಿವಾಣ ಹಾಕಲು ಉದ್ದೇಶಿಸಲಾಗಿತ್ತು. 1983ರ ಕರ್ನಾಟಕ ಶಿಕ್ಷಣ ಕಾಯಿದೆ ವಿಧಾನ ಸಭೆಯ ಅಧಿವೇಶನದಲ್ಲಿ ಇತ್ತೀಚೆಗೆ ಕೆಲವು ತಿದ್ದುಪಡಿಗಳಾಗಿವೆ ಆ ತಿದ್ದುಪಡಿಯ ಅಂಶಗಳ ಆದೇಶ ಇನ್ನೂ ಬಂದಿಲ್ಲ ಆದರೂ ಕೂಡಾ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆಯಯನ್ನು ಆರಮಭಿಸಿವೆ ಹಾಗೂ ಇಲಾಖೆಯ ಹಲವು ನಿಯಮಗಳನ್ನು ಗಾಳಿಗೆ ತೂರಿವೆ ಎಂದು ಆರೋಪಿಸಿದರು.

ಪುಟ 7 ಕ್ಕೆ



ಪತ್ರಕರ್ತ ವಿಶ್ವ ಕುಂದಾಪುರರವರ "ಯುದ್ಧವೆಂದರೆ ಹುಡುಗಾಟವಲ್ಲ" ಎಂಬ ಪುಸ್ತಕ ಬಿಡುಗಡೆ ಕೋಲಾರದಲ್ಲಿ ನಡೆಯಿತು.

ಬರದಿಂದ ತತ್ತರಿಸಿರುವ ಜನ ಜಾನುವಾರುಗಳ ರಕ್ಷಿಸುವವರಾರು?

ರಾಜ್ಯದಲ್ಲಿ ಆವರಿಸಿರುವ ಬರದ ಛಾಯೆ ಮಂಡ್ಯ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ಅಪ್ಪಳಿಸಿ ಜನ ಪರಿತಪಿಸುವಂತಾಗಿದೆ. ಸುಡು ಸುಡು ಬಿಸಿಲಿನ ಜಳಕ್ಕೆ ಭೂಮಿ ಸುಡುಗಾಡಾಗಿದೆ. ಕುಡಿಯುವ ನೀರಿಗೂ ಹಾಹಾಕಾರ ಬಂದಿದೆ. ಅಂತರ್ ಜಲ ಕುಸಿತವಾಗಿ ಶೇಕಡ 75 ರಷ್ಟು ಬೋರ್‌ವೆಲ್‌ಗಳು ನಿಂತು ಹೋಗಿವೆ. ಮೊದಲು 200 ರಿಂದ 250 ಅಡಿಗೆ ನೀರು ಬರುತ್ತಿತ್ತು. ಈಗ 600 ರಿಂದ 700 ಅಡಿ ಬೋರ್ ಕೊರೆದರು ನೀರು ಬರುತ್ತಿಲ್ಲ. ಅಪ್ಪಿತಪ್ಪಿ 1 ರಿಂದು 2 ಇಂಚು ನೀರು ಬಂದರೂ ಒಂದು ತಿಂಗಳೊಳಗೆ ಆ ನೀರು ನಿಂತು ಹೋಗುತ್ತಿದೆ. ಹಳೇ ಬೋರ್‌ವೆಲ್‌ಗಳಿಗೆ ಮತ್ತೆ ರೀ ಬೋರ್ ವ್ಯಾಪಕವಾಗಿ ಮಾಡಿಸುತ್ತಿದ್ದಾರೆ. ಬೋರ್‌ವೆಲ್ ಡ್ರಿಲ್ ಮಾಡುವವರಿಗೆ ಸುಗ್ಗಿಯೋ ಸುಗ್ಗಿ. ಮೊದಲು ಒಂದು ಟ್ಯಾಂಕ್ ನೀರಿಗೆ 400 ರಿಂದ 450 ರೂಪಾಯಿ ಇದ್ದದ್ದು ಇವಾಗ 700 ರಿಂದ 800 ರೂಪಾಯಿ ಆಗಿದೆ. ಕುಡಿಯುವ ನೀರಿನ ಸಮಸ್ಯೆ ನೀಗಿಸಲು ಕೆಲವು ಕಡೆ ಬೋರ್ ಕೊರೆಸಿ 1 ಇಂಚು ನೀರು ಬಂದರೂ ಇನ್ನೊಂದು ಟ್ಯಾಂಕರ್‌ಗಳ ಮೂಲಕ ನೀರನ್ನು ಒಳಗಡೆ ಬಿಟ್ಟು ನೀರು ಬಂತು ಎಂದು ಕೇಸಿಂಗ್ ಪೈಪ್ ಅಳವಡಿಸಿ ಬಿಲ್ ಪಡೆದುಕೊಳ್ಳುತ್ತಿದ್ದಾರೆ. ಕೆಲವು ಕಡೆ ಅದೇ ಡ್ರಿಲ್‌ಗೆ ಹಳೇ ಮೋಟರ್‌ಗಳಿಗೆ ಬಣ್ಣ ಹೊಡೆದು ಬಿಲ್ ಪೆದುಕೊಳ್ಳುತ್ತಿದ್ದಾರೆ. ಹಾಗಾಗಿ ಬರ ಎಂಬುದು ಕೆಲವರಿಗೆ ಸುಗ್ಗಿಯೋ ಸುಗ್ಗಿ. ಕೆಲವು ಅಧಿಕಾರಿಗಳು ನಾವು ಪ್ರಯತ್ನ ಮಾಡುತ್ತಿದ್ದೇವೆ ನೀರು ಬರುತ್ತಿಲ್ಲ, ನಾವೇನು ಮಾಡುವುದು ಎಂದು ಕೈಚೆಲ್ಲಿ ಕುಳಿತ್ತಿದ್ದಾರೆ. ಆದರೆ ಶಾಶ್ವತ ಪರಿಹಾರವಾಗಲಿ, ತಾತ್ಕಾಲಿಕ ಪರಿಹಾರವಾಗಲಿ ಕಾಣುತ್ತಿಲ್ಲ. ಈ ರೀತಿಯ ಬರ ನಮ್ಮ ಜೀವಿತದ ಅವಧಿಯಲ್ಲಿ ನಾವು ಕಂಡಿರಲಿಲ್ಲ. ಮಂಡ್ಯ ಜಿಲ್ಲೆ ಕಾವೇರಿ ಕೊಳದ ಪ್ರದೇಶವಾಗಿದ್ದು ಅಲ್ಲಿ ಸಮೃದ್ಧತೆ ಇದೆ ಎನ್ನುವ ಮನೋಭಾವ ಎಲ್ಲೆಡೆ ಇದೆ. ಆದರೆ ವಾಸ್ತವನೇ ತದ್ವಿರುದ್ಧವಾಗಿದೆ. ಈ ಬರದ ಛಾಯೆಗೆ ತುತ್ತಾಗಿರುವ ಜನ ಜಾನುವಾರುಗಳ ಪರಿಸ್ಥಿತಿ ಹೇಳತೀರದಾಗಿದೆ. ಕುಡಿಯುವ ನೀರು ಜಾನುವಾರುಗಳಿಗೆ ಮೇವಿನ ಹಾಹಾಕಾರ ಶುರುವಾಗಿದೆ. ಪ್ರಾಣಿ ಪಕ್ಷಿಗಳು ನೀರನ್ನು ಹುಡುಕಿಕೊಂಡು ಕಾಡಿನಿಂದ ನಾಡಿಗೆ ಬರುತ್ತಿವೆ. ಆನೆಗಳು ಗ್ರಾಮ ಪ್ರವೇಶ ಮಾಡಿ ತೊಂದರೆಗಳಾಗಿರುವ ಉದಾಹರಣೆಗಳುಂಟು. ನವಿಲು ಮುಂತಾದ ಪಕ್ಷಿಗಳು ಸಹಾ ಗ್ರಾಮದೊಳಗೆ ಬರವುದು ವಿಶೇಷವಾಗಿದೆ. ಎಲ್ಲಾ ಹೊಲಗದ್ದೆಗಳಲ್ಲಿ ಹಸಿರೇ ಕಾಣುತ್ತಿಲ್ಲ. ಭತ್ತದ ಹುಲ್ಲು, ರಾಗಿ ಹುಲ್ಲು, ಜೋಳದ ಕಡ್ಡಿಗಳು , ಸೀಮೆ ಹುಲ್ಲು ಕಾಣುತ್ತಿಲ್ಲ. ಅದೇ ರೀತಿ ಗೋಮಾಳಗಳು ಕೆರೆಗಳು, ಸರ್ಕಾರಿ ಖಾಲಿ ಜಾಗಗಳು ಸ್ವಲ್ಪ ಒತ್ತುವರಿಯಾಗಿದ್ದರೂ ಉಳಿದ ಕಡೆ ಮಳೆ, ನೀರು ಇಲ್ಲದೇ ಇಡುವಳಿಯಲ್ಲಾಗಲೀ, ಸರ್ಕಾರಿ ಭೂಮಿಗಳಲ್ಲಾಗಲಿ ಅಥವಾ ರಸ್ತೆ ಬದಿಯಲ್ಲಾಗಲಿ ಹಸಿರೇ ಕಾಣುತ್ತಿಲ್ಲ. ಅಲ್ಪ ಸ್ವಲ್ಪ ಬೋರ್‌ವೆಲ್ ನೀರಿನ ಮೂಲಕ ಬೆಳೆದಿರುವ ಮೆಕ್ಕೆ ಜೋಳದ ಕಡ್ಡಿಗೆ ಎಲ್ಲಿಲ್ಲದ ಬೇಡಿಕೆ ಬಂದಿದೆ. ಸರ್ಕಾರವೇ ಕೊಂಡುಕೊಳ್ಳುವಾಗ ಟನ್ ಒಂದಕ್ಕೆ 3000ರೂ ಕೊಟ್ಟು ಕೊಂಡುಕೊಳ್ಳುತ್ತಿದ್ದಾರೆ.. ರೈತರು ಸಹ ತಮ್ಮ ಜಾನುವಾರಗಳನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಅದರಲ್ಲೂ ಹಾಲು ಕರೆಯುವ ಹಸುಗಳು ಮತ್ತು ಎತ್ತುಗಳಿಗಾಗಿ ದುಬಾರಿ ಬೆಲೆಯನ್ನು ಕೊಟ್ಟು ಒಂದು ಎಕರೆಗೆ 60–70ಸಾವಿರ ಕೊಟ್ಟು ಕೊಂಡುಕೊಳ್ಳತ್ತಿದ್ದಾರೆ. ಐದಾರು ಮಂದಿ ಸೇರಿ ಕೊಂಡುಕೊಂಡು ಭಾಗ ಮಾಡಿಕೊಳ್ಳುತ್ತಾರೆ. ಜನ ಪ್ರತಿನಿಧಿಗಳು, ಅಧಿಕಾರಿಗಳು ತಲೆಕೆಡಿಸಿಕೊಳ್ಳುತ್ತಿಲ್ಲ. ಈಗಾಗಲೇ ಫಸಲನ್ನು ಒಡ್ಡಿರುವುದರಿಂದ ಅವುಗಳನ್ನು ಉಳಿಸಿಕೊಳ್ಳಲು ಸಾಲ ಮಾಡಿ ಬೋರ್ ಕೊರೆಸುತ್ತ ಸಾಲದ ಮೇಲೆ ಸಾಲ ಮಾಡಿ ಸಾಲದ ಸುಳಿಗೆ ಸಿಕ್ಕಿ ಹಾಕಿಕೊಳ್ಳುತ್ತಿದ್ದಾರೆ. ಮುಂದೊಂದು ದಿನ ಈ ಬಲೆಯೊಳಗಿಂದ ವಾಪಸ್ ಬರಲಾಗದೆ ಆತ್ಮಹತ್ಯೆ ದಾರಿಹಿಡಿಯುವ ಆಲೋಚನೆಗಳು ರೈತರಲ್ಲಿ ಕಂಡು ಬರುವ ಮೂನ್ಸೂಚನೆಗಳಿವೆ.

ಕಬ್ಬಿನ ತೊಂಡೆಗಾಗಿ ಬಿಟ್ಟಿ ಚಾಕರಿ

ಜಾನುವಾರುಗಳಿಗೆ ಮೇವಿನ ಅಭಾವದಿಂದ ಕಬ್ಬು ಕಡಿಸುವ ರೈತನ ಜಮೀನಿನಲ್ಲಿ ಉಚಿತವಾಗಿ ಕಬ್ಬು ಕಡಿದು ಕಂತೆಕಟ್ಟಿ ಗಾಡಿಗ ತುಂಬುವ ಕೆಲಸವನ್ನು ಉಚಿತವಾಗಿ ಮಾಡುತ್ತಿದ್ದಾರೆ. ಈ ಕೆಲಸಕ್ಕಾಗಿ ಬರಬೇಡಿ ಎಂದು ರೈತ ಹೇಳಿದರೂ ಕೇಳದೆ ಒಂದೊಂದು ಗದ್ದೆಗೆ 40–50 ಮಂದಿ ಮುಗಿಬೀಳುತ್ತಿದ್ದಾರೆ. ಮೊದಲು ರೈತ ಒಂದು ಟನ್ ಕಬ್ಬು ಕಡಿಸಲು 500–700 ತನಕ ಹಣ ನೀಡಬೇಕಾಗಿತ್ತು. ಈಗ ಕೂಲಿ ಇಲ್ಲದೇ ಕಬ್ಬು ಕಡಿಯುತ್ತಿದ್ದಾರೆ. ಮತ್ತೆ ಕೆಲವರು ಸ್ಕೂಟರ್ ಗಳಲ್ಲಿ 20–30 ಕಿ.ಮೀ ಗಳ ತನಕ ಕಬ್ಬು ಕಡಿಯುವ ಗದ್ದೆಗಳನ್ನ ಹುಡುಕಿಕೊಂಡು ಹೋಗಿ ಕೂಲಿ ರಹಿತವಾಗಿ ಕಬ್ಬು ಕಡಿದು ತೊಂಡೆಯನ್ನು ತರುವಂತಾಗಿದೆ. ಮೊದಲು 13–15 ತಿಂಗಳಾದರೂ ಕಬ್ಬನ್ನು ಕಟಾವು ಮಾಡುತ್ತಿರಲಿಲ್ಲ. ಆದರೆ ಇತ್ತೀಚಿಗೆ ಕಬ್ಬಿನ ಅಭಾವದಿಂದ ಮತ್ತು ನೀರಿನ ಕೊರತೆಯಿಂದ ಕಬ್ಬಿಗೆ 8–10 ತಿಂಗಳಗಿದ್ದರೂ ಕಟಾವೂ ಮಾಡಿಸುತ್ತಿದ್ದಾರೆ. ಮತ್ತು ಕಾರ್ಖಾನೆಗಳು ಕಬ್ಬು ಅರಿಯುವುದನ್ನು ನಿಲ್ಲಿಸಿರುವುದರಿಂದ ತೊಂಡೆಯು ಸಹ ಸಿಗದಂತಾಗಿದೆ. ಜಾನುವಾರುಗಳ ಮಾರಾಟ ಮಾಡೋಣವೆಂದರೆ ಬಹಳ ಅಗ್ಗದ ಬೆಲೆಗೆ ಕೇಳುತ್ತಾರೆ. ಅವರಿಗೂ ಸಹ ಜಾನುವಾರುಗಳನ್ನು ಸಾಕುವುದು ತುಂಬ ತ್ರಾಸದಾಯಕ ಕೆಲಸವಾಗಿದೆ. ಒಂದು ಬಾರಿಗೆ ಗೆ 8–10 ಲೀ ಹಾಲು ಕರೆಯುವ ಹಸುವಿನ ಬೆಲೆ 60–70ಸಾವಿರ ಬೆಲೆಯಿದ್ದದ್ದು ಈಗ 30–40 ಸಾವಿರಕ್ಕಿಳಿದಿದೆ. ಗೊಡ್ಡು ಹಸುಗಳನ್ನು ಮಾರಾಟ ಮಾಡಲು ಗೋಹತ್ಯೆ ನಿಷೇಧ ಹೆಸರಿನಲ್ಲಿ ಗಲಟೆಗಳು ನಡೆಯುತ್ತಿರುವುದರಿಂದ ಕೊಳ್ಳವವರು ಯಾರು ಬರುತ್ತಿಲ್ಲ. ಸರ್ಕಾರಗಳು ಜಾನುವಾರುಗಳಿಗೆ ಸಮರ್ಪಕವಾಗಿ ಮೇವು ಒದಗಿಸಲು ಕೆಲಸ ಮಾಡುತ್ತಿಲ್ಲ. ಜನರ ತುಟಿಗೆ ತುಪ್ಪ ಸವರಿದ ಹಾಗೆ ಮೇವು ಸಂಗ್ರಹಗಳು, ಗೋಶಾಲೆಗಳೆಲ್ಲವು ನಾಟಕವಾಗಿದೆ.

ಮಳವಳ್ಳಿ ತಾಲ್ಲೂಕಿನಲ್ಲಿ 50,515 ಹಸುಗಳು, 4,352 ಎತ್ತುಗಳು, 15,423 ಎಮ್ಮೆಗಳು, 611 ಕೋಣಗಳು, 35,360 ಕುರಿ ಟಗರುಗಳು, 23,069 ಮೇಕೆಗಳು ಒಟ್ಟಾರೆಯಾಗಿ 1,68,213 ಜಾನುವಾರುಗಳ ರಕ್ಷಣೆ ಬಗ್ಗೆ ಸಮರ್ಪಕವಾದ ಯೋಜನೆ ಇಲ್ಲ. ಆದರೆ ಮಳವಳ್ಳಿ ತಾಲ್ಲೂಕು ಆಡಳಿತ 91 ಟನ್ ಮೇವು ಖರೀದಿ ಮಾಡಿದೆ. ಅಂದರೆ 91 ಸಾವಿರ ಕೆ.ಜಿ. ಮೇವನ್ನ 70,901 ಹಸು ಎಮ್ಮೆಗಳಿಗೆ ಹಂಚಿದರೆ ತಲಾ ಒಂದೂವರೆ ಕೆ.ಜಿ ಮೇವು ಹಂಚಿಕೆಯಾಗುತ್ತದೆ. ಈ ಮೇವನ್ನು ಪೂರಿಗಾಲಿಯಲ್ಲಿ ಮತ್ತು ಮಳವಳ್ಳಿ ಟೌನ್‌ನಲ್ಲಿ ಶೇಖರಣೆ ಮಾಡಿರುತ್ತಾರೆ. ಇದನ್ನು ತೆಗೆದು–ಕೊಂಡು ಹೋಗಲು ಕನಿಷ್ಟ 20 ಕಿಮೀ ದೂರದಿಂದ ಬರಬೇಕಾಗುತ್ತದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದರೆ ಜಾನುವಾರುಗಳ ರಕ್ಷಣೆ ಮತ್ತು ಮೇವು ಖರೀದಿ ಎನ್ನುವುದು ಕಣ್ಣು ಒರೆಸುವ ತಂತ್ರವಾಗಿದೆ. ಈ ತಂತ್ರಗಳನ್ನು ಕೈ ಬಿಟ್ಟು ಪ್ರಾಮಾಣಿಕವಾಗಿ ಜಾನುವಾರುಗಳ ಸಂಖ್ಯೆಗೆ ಅನುಗುಣವಾಗಿ ಮೇವನ್ನು ಖರೀದಿ ಮಾಡಿ ಅಗತ್ಯಕ್ಕನುಗುಣವಾಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ವಿತರಣೆ ಮಾಡಬೇಕು. ಕೆ.ಜಿ.ಗೆ 2 ರೂ ನಂತೆ ಮಾರಾಟ ಮಾಡುವುದೆಂದೂ ತಾಲ್ಲೂಕು ಆಡಳಿತ ತಿಳಿಸಿದಂತೆ ವಿತರಿಸಲು ಮುಂದಾಗಬೇಕು. ನೀರಿನ ಅಭಾವದಿಂದ ಜಾನುವಾರುಗಳಿಗೆ ಸಂಪೂರ್ಣವಾಗಿ ಕುಡಿಯಲಿಕ್ಕೂ ನೀರು ಸಹ ಸಿಗುತ್ತಿಲ್ಲ. ಮತ್ತು ಮೈ ತೊಳೆಯುವ ಮಾತಂತೂ ದೂರವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಜಾನುವಾರುಗಳಿಗೆ ರೋಗ ಬರುವ ಮುನ್ಸೂಚನೆ ಕಂಡು ಬರುತ್ತಿದೆ. ಕೆಲವು ಕಡೆ ಈಗಾಗಲೇ ಕಾಲು ಬಾಯಿ ಜ್ವರ, ಭೇದಿ ಕಾಣಿಸಿಕೊಳ್ಳತ್ತಿದೆ. ಇವುಗಳನ್ನು ತಡೆಗಟ್ಟಲು ಗ್ರಾಮಗಳಲ್ಲಿರುವ ತೊಟ್ಟಿಗಳಿಗೆ ನೀರು ತುಂಬಿಸಿ ಜಾನುವಾರುಗಳು ಕುಡಿಯಲಿಕ್ಕೆ ವ್ಯವಸ್ಥೆ ಮಾಡಬೇಕು. ಹಾಲು ಕರೆಯುವ ಹಸುವಿಗೆ ದಿನಕ್ಕೆ 10–15 ಕೆ.ಜಿ ಮೇವು ಬೇಕಾಗುತ್ತದೆ. ಅದನ್ನು ಗಮನದಲ್ಲಿಟ್ಟುಕೊಂಡು ಮೇವು ವಿತರಿಸಬೇಕಾಗಿದೆ. ಈ ಪರಿಸ್ಥಿತಿಯಿಂದ ಬೇಸತ್ತ ಜನರು ನಗರ ಪ್ರದೇಶಗಳಿಗೆ ವಲಸೆ ಹೋಗಿ ಮನೆಗೆಲಸ, ಗಾರ್ಮೆಂಟ್ಸ್, ಸೆಕ್ಯೂರಿಟಿಗಾರ್ಡ್‌ಗಳಾಗಿ, ಕಟ್ಟಡ ಕಾರ್ಮಿಕರಾಗಿ ನರ್ಸರಿಗಳಲ್ಲಿ ಅಭದ್ರತೆಯಿಂದ ಕಡಿಮೆ ಕೂಲಿಗೆ ಕೆಲಸ ಮಾಡುತ್ತಿದ್ದಾರೆ ಮತ್ತೆ ಲೈಂಗಿಕ ಶೋಷಣೆಗೆ ಒಳಗಾಗಿ ಮತ್ತೆ ಕೆಲವರು ಬದುಕಲಿಕ್ಕಾಗಿ ಅನೈತಿಕ ಮಾರ್ಗ ಹಿಡಿದು ಬದುಕುವಂತಾಗಿದೆ.

ಎನ್.ಎಲ್. ಭರತ್ ರಾಜ್

ಅರಬ್ ರಾಷ್ಟ್ರಗಳಿಗೆ ತೆರಳುವ ಪ್ರವಾಸಿಗರಿಗೆ ಕಿರುಕುಳ – ಪ್ರತಿಭಟನೆ

ಮಂಗಳೂರು ಅಂತರ‍್ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅರಬ್ ರಾಷ್ಟ್ರಗಳಿಗೆ ತೆರಳುವ ಪ್ರವಾಸಿಗರಿಗೆ ಕಿರುಕುಳ ನೀಡುವುದು, ಅವಮಾನಿಸುವುದು ವ್ಯಾಪಕವಾಗಿ ನಡೆಯುತ್ತಿದೆ ಎಂಬ ಆರೋಪಗಳು ವ್ಯಾಪಕವಾಗಿ ಕೇಳಿಬರುತ್ತಿದೆ. ಮುಖ್ಯವಾಗಿ ಪಾಸ್ ಪೋರ್ಟ್ ಗಳಲ್ಲಿ ದೋಷವಿದೆ ಎಂದು ಪಾಸ್ ಪೋರ್ಟ್ ಕಿತ್ತುಕೊಳ್ಳುವುದು, ನಿಧಾನ ತನಿಖೆಯಿಂದ ವಿಮಾನ ತಪ್ಪಿಸುವುದು, ಅನಗತ್ಯ ಪ್ರಶ್ನೆಗಳ ಮೂಲಕ ಮುಜುಗರಕ್ಕೊಳಪಡಿಸುವುದು, ಕಟುಂಬ ಸಮೇತ ಪ್ರಯಣಿಸುವಾಗ ಓರ್ವ ಸದಸ್ಯನ ಪ್ರಯಾಣದಲ್ಲಿ ತಪ್ಪುಗಳನ್ನು ಹುಡುಕಿ ಕುಟುಂಬಗಳನ್ನೇ ಆತಂಕಕ್ಕೊಳಪಡಿಸುವುದು, ವಿದೇಶದಿಂದ ಆಗಮಿಸುವ ಕಾರ್ಮಿಕರ ಲಗೇಜ್ ಗಳನ್ನು ತನಿಖೆಯ ನೆಪದಲ್ಲಿ ಚಲ್ಲಾಪಿಲ್ಲಿಗೊಳಿಸುವುದು, ಅನಗತ್ಯ ದಂಡವಿಧಿಸುವುದು, ಹಣಕ್ಕಾಗಿ ಪೀಡಿಸುವುದು ನಡೆಯುತ್ತಿದೆ. ಅದರಲ್ಲೂ ಗಡ್ಡ, ಟೊಪ್ಪಿ ಧರಿಸಿದ ಮುಸ್ಲಿಮರನ್ನು ತೀರಾ ಗುಮಾನಿಯಿಂದ ನೋಡುವುದು, ಮಾನಸಿಕ ಕಿರುಕುಳ ನೀಡುವುದು ನಡೆಯುತ್ತಿದೆ. ಇದರ ವಿರುದ್ದ **dyfi** ಸಂಘಟನೆಯ ವತಿಯಿಂದ ಮಂಗಳೂರು ವಿಮಾನ ನಿಲ್ದಾಣದ ಮುಂಭಾಗ ಪ್ರತಿಭಟನೆ ನಡೆಸಲಾಯಿತು. ವಿಮಾನ ನಿಲ್ದಾಣ ಪ್ರಾಧಿಕಾರದ ನಿರ್ದೇಶಕರಾದ ರಾಧಾಕೃಷ್ಣರವರು ಸಂಘಟನೆಯ ಪದಾಧಿಕಾರಿಗಳೊಂದಿಗೆ ಮಾತುಕತೆ ನಡೆಸಿದರು. ಮುಂದಕ್ಕೆ ಇಂತಹ ಘಟನೆಗಳು ಪುನರಾವರ್ತನೆಯಾಗದಂತೆ ಎಚ್ಚರವಹಿಸುವುದಾಗಿ ಭರವಸೆ ನೀಡಿದರು.

– ಮುನೀರ್ ಕಾಟಿಪಳ್ಳ



ಕೇಳಿಸಿದ್ದು

ಇಂತಹ ಸನ್ನಿವೇಶದಲ್ಲಿ ಮುಕ್ತವಾಗಿ ಬರೆಯುವ, ವಿಚಾರ ವ್ಯಕ್ತಪಡಿಸುವ, ಚರ್ಚಿಸುವ, ಸಿನಿಮಾ–ನಾಟಕ ಮಾಡುವ ಅಭಿವ್ಯಕ್ತಿಗಳಿಗೆ ಮಾತ್ರ ತೊಡಕಲ್ಲ; ಜನ ತಮ್ಮಿಚ್ಛೆಯಂತೆ ಕಲೆಯುವ, ಕಲಿಯುವ, ಉಣ್ಣುವ, ಉಡುವ, ಆಚರಿಸುವ ದೈನಿಕ ಚಟುವಟಿಕೆಗಳೂ ಕಷ್ಟವಾಗುತ್ತ ಹೋಗುತ್ತವೆ. ಆಗ ಬೀದಿಗಳೇ ವಿಚಾರಣೆ ಮಾಡುವ, ತೀರ್ಪು ಕೊಡುವ ಹಾಗೂ ಶಿಕ್ಷೆ ವಿಧಿಸುವ ಜಾಗಗಳಾಗುತ್ತವೆ.

ತಾವೊಪ್ಪದ ವಿಚಾರವುಳ್ಳ ಅಥವಾ ಆಹಾರ ಸೇವಿಸುವ ಮಂದಿಯ ಕೈಕಾಲು ಕತ್ತರಿಸುವ, ತಲೆ ಕಡಿಯುವ ಹೇಳಿಕೆಗಳು ಎಗ್ಗಿಲ್ಲದೆ ಹುಟ್ಟುತ್ತವೆ. ದೋಷವನ್ನು ಬಲಿಪಶುಗಳಲ್ಲೇ ಹುಡುಕಲಾಗುತ್ತದೆ.

ಇಲ್ಲೀಗ ಎದ್ದು ಕಾಣುತ್ತಿರುವ ಎರಡು ವಿದ್ಯಮಾನಗಳೆಂದರೆ? ದುಡಿದು ತಿನ್ನುವ ಜನಸಾಮಾನ್ಯರ ಮೇಲೆ ದಿನಕ್ಕೊಂದು ನಿಯಮ ಬಿಗಿಯುತ್ತಿರುವುದು ಹಾಗೂ ನಾಡಿಗೆ ಸೇರಿದ ಸಂಪತ್ತನ್ನು ದೋಚುವ ಮಾರುಕಟ್ಟೆ ಶಕ್ತಿಗಳಿಗೆ ನಿಯಮ ಸಡಿಲ ಗೊಳಿಸುತ್ತಿರುವುದು. ಇದರಿಂದ ಅಪಾರ ಮಾನವ ಚೈತನ್ಯ, ಆರ್ಥಿಕ ಸಂಪತ್ತು ಹಾಗೂ ಬೆಳವಣಿಗೆಯ ಸಾಧ್ಯತೆ ಇರುವ ನಮ್ಮೀ ನಾಡು, ಕೂಡಿ ಬದುಕುವ, ಹಂಚಿಕೊಂಡು ತಿನ್ನುವ ವಿವೇಕ ಕಳೆದುಕೊಂಡು ಅಂತರ್‌ಯುದ್ಧದಲ್ಲಿ ಸಿಲುಕಿದಂತೆ ನಲುಗುತ್ತಿದೆ.

ಲೇಖಕರು–ಕಲಾವಿದರು ತಮ್ಮ ಮಿತಿಗಳನ್ನು ಕಂಡುಕೊಳ್ಳುವ, ಸಮುದಾಯಗಳ ಆಶೋತ್ತರಗಳ ಜೊತೆಗೆ ಮಿಡಿಯುತ್ತ, ಅವರೊಡನೆ ಸಂವಾದ ಮಾಡುವ ಹೊಸ ನುಡಿಗಟ್ಟನ್ನು ಕಂಡುಕೊಳ್ಳುವ ಯತ್ನವನ್ನೂ ಮಾಡುತ್ತದೆ. ಸಮಾನ ಮನಸ್ಕರು ಹೊಸ ಹದುಳದ ನಾಡನ್ನು ಕಟ್ಟುವ ಕನಸಿಗಾಗಿ ಒಗ್ಗೂಡುವುದಕ್ಕೆ ವೇದಿಕೆ ನಿರ್ಮಿಸುತ್ತದೆ.

‘ದಕ್ಷಿಣಾಯನ’ ಎಂದರೆ ಕತ್ತಲಿನ ರಾತ್ರಿ ದೀರ್ಘವಾಗಿರುವ ಕಾಲ; ಕತ್ತಲ ಕೊನೆಗೆ ಬೆಳಕಿರುತ್ತದೆ ಎಂದು ನಂಬಿ ಕೈಕೈ ಹಿಡಿದು ನಡೆವ ಕಾಲ ಕೂಡ. ಇದೊಂದು ಸಂಸ್ಥೆಯಲ್ಲ, ಸಂಘಟನೆಯಲ್ಲ.

ಪಂಪನ ಮಾನವೀಯ ತುಡಿತ, ಬಸವಣ್ಣನ ಪ್ರತಿರೋಧ ಪ್ರಜ್ಞೆ, ಅಂಬೇಡ್ಕರರ ಸಾಮಾಜಿಕ ಎಚ್ಚರ, ಕುವೆಂಪುರ ವಿಶ್ವಮಾನವತೆ, ಕಾರಂತರ ವೈಚಾರಿಕತೆ, ತೇಜಸ್ವಿ–ಲಂಕೇಶರ ಜೀವನಪ್ರೀತಿ ‘ದಕ್ಷಿಣಾಯನ’ದ ಬೆನ್ನಿಗಿದೆ. ಇದರಲ್ಲಿ ಎಲ್ಲ ತಲೆಮಾರಿಗೆ ಸೇರಿದ ನೂರಾರು ಲೇಖಕರು–ಕಲಾವಿದರು–ಸಾಂಸ್ಕೃತಿಕ ಕಾರ್ಯಕರ್ತರು ಪಾಲ್ಗೊಳ್ಳುತ್ತಿರುವರು.

ಹಿಂದೊಮ್ಮೆ ಸಮಾಜವಾದದ ಪ್ರಯೋಗಶಾಲೆಯಾಗಿದ್ದ ಹಾಗೂ ಈಗಲೂ ಜೀವಪರ ಸಾಂಸ್ಕೃತಿಕ ಚಟುವಟಿಕೆಗಳ ತಾಣವಾಗಿರುವ ಶಿವಮೊಗ್ಗೆಯಲ್ಲಿ, ಇದೇ 8ರಂದು ‘ದಕ್ಷಿಣಾಯನ–ಕರ್ನಾಟಕದ ಸಮಾವೇಶ’ ನಡೆಯಲಿದೆ. ದೇವನೂರರು ಚಾಲನೆ ನೀಡಲಿರುವ ಸಮಾವೇಶ, ಚಾರಿತ್ರಿಕ ಮಹತ್ವದ ಪಾತ್ರವನ್ನು ನಿರ್ವಹಿಸಬಹುದು.

– ರಹಮತ್ ತರೀಕೆರೆ

ಅತಿಥಿ ಅಂಕಣ



ಲಿಂಗ ಸಮಾನತೆ: ಗುಜರಾತ್ ಪ್ರಭುತ್ವ ಲೊಳಲೊಟ್ಟೆ!!!

ಪ್ರೊ. ಟಿ.ಆರ್. ಚಂದ್ರಶೇಖರ

ನಮ್ಮ ದೇಶದಲ್ಲಿ ಕಳೆದ ಹತ್ತಾರು ವರ್ಷಗಳಿಂದ ಅಭಿವೃದ್ಧಿಗೆ ಸಂಬಂಧಿಸಿದಂತೆ ಗುಜರಾತ್ ಮಾದರಿಯ ಬಗ್ಗೆ ತುಂಬಾ ಚರ್ಚೆ ಮಾಡಲಾಗುತ್ತಿದೆ. ಈ ಮಾದರಿಯನ್ನು ರಾಷ್ಟ್ರಮಟ್ಟದಲ್ಲಿ ಅಳವಡಿಸಿಕೊಳ್ಳಬೇಕು ಎಂದೂ ಒತ್ತಾಯ ಮಾಡಲಾಗುತ್ತಿದೆ. ಅದೊಂದು ಅತ್ಯುತ್ತಮ ಅಭಿವೃದ್ಧಿ ಮಾದರಿ ಅನ್ನುವ ಭ್ರಮೆಯನ್ನು ಸೃಷ್ಟಿಸಲಾಗುತ್ತಿದೆ. ಅಭಿವೃದ್ಧಿ ಅನ್ನುವುದು ಮಹಿಳೆಯರನ್ನು ಸೇರಿಸಿಕೊಂಡು ಜನರ ಬದುಕು ಸಮೃದ್ಧವಾಗುವ ಪರಿಯೇ ವಿನಾ ಅದು ಕೇವಲ ಆರ್ಥಿಕ ಸಮೃದ್ಧಿಗೆ ಸಂಬಂಧಿಸಿದ ಸಂಗತಿಯಲ್ಲ. ಈ ದೃಷ್ಟಿಯಿಂದ ನೋಡಿದಾಗ ಗುಜರಾತ್ ರಾಜ್ಯವು ಲಿಂಗ ಸಮಾನತೆಯಲ್ಲಿ ಬಹಳ ಕೆಳಮಟ್ಟದಲ್ಲಿರುವುದು ಅಚ್ಚರಿಯ ಸಂಗತಿಯಾಗಿದೆ. ಕೇರಳ, ತಮಿಳುನಾಡು, ಕರ್ನಾಟಕ ಮುಂತಾದ ರಾಜ್ಯಗಳು ಲಿಂಗ ಸಮಾನತೆಯಲ್ಲಿ ಗುಜರಾತ್ ರಾಜ್ಯಕ್ಕಿಂತ ಬಹಳ ಮುಂದುವರೆದಿವೆ. ಇಡೀ ದೇಶದಲ್ಲಿ ಮಾನವ ಅಭಿವೃದ್ಧಿಯಲ್ಲಿ ಕೇರಳ ಕಳೆದ ಎರಡು ಮೂರು ದಶಕಗಳಿಂದ ಮುಂಚೂಣಿಯಲ್ಲಿದೆ. ಆದರೂ ಕೇರಳ ರಾಜ್ಯದ ಅಭಿವೃದ್ಧಿ ಮಾದರಿಯನ್ನು ಹೀಗಳೆಯಲಾಗುತ್ತಿದೆ. ಇಂದು ಕೇರಳವು ಆರ್ಥಿಕ ಅಭಿವೃದ್ಧಿ ಮತ್ತು ಮಾನವ ಅಭಿವೃದ್ಧಿ – ಎರಡರಲ್ಲಿಯೂ ಗುಜರಾತಿಗಿಂತ ಬಹಳ ಉನ್ನತ ಸ್ಥಾನದಲ್ಲಿದೆ. ದೇಶದಲ್ಲಿಯೇ ಅದು ಮೊದಲ ಸ್ಥಾನದಲ್ಲಿದೆ. ನಮ್ಮ ಪ್ರಧಾನ ಆಳುವ ವರ್ಗವು ಕೇರಳ ಅಭಿವೃದ್ಧಿ ಮಾದರಿಯ ಬಗ್ಗೆ ಚಕಾರವೆತ್ತುತ್ತಿಲ್ಲ. ಅಂತರಾಷ್ಟ್ರೀಯ ಮಟ್ಟದಲ್ಲಿ ಕೇರಳ ಮಾದರಿಯನ್ನು ಗುರುತಿಸಲಾಗಿದೆ.

ಲಿಂಗ ಸಮಾನತೆ ಅನ್ನುವುದು ಅಭಿವೃದ್ಧಿಯ ಸಂಗತಿಯೇ ವಿನಾ ಅದು ಮಹಿಳೆಯರಿಗೆ ಮಾತ್ರ ಸಂಬಂಧಿಸಿದ ಸಂಗತಿಯಲ್ಲ. ಸಾಂಪ್ರದಾಯಿಕವಾಗಿ ಹರಿದುಕೊಂಡು ಬರುತ್ತಿರುವ ಪುರುಷಶಾಹಿಯನ್ನು, ಲಿಂಗ ತಾರತಮ್ಯ ಮೌಲ್ಯಗಳನ್ನು ಮತ್ತು ಮಹಿಳೆಯರ ದುಸ್ಥಿತಿಯನ್ನು ಕೇರಳ, ಕರ್ನಾಟಕ, ತಮಿಳುನಾಡು ಮುಂತಾದವು ತಹಬಂದಿಗೆ ತಂದು ಲಿಂಗ ಸಮಾನತೆಯ ದಾರಿಯಲ್ಲಿ ಮುನ್ನಡೆದಿವೆ. ಆದರೆ ಗುಜರಾತಿಗೆ ಇಂತಹ ಸಾಂಪ್ರದಾಯಿಕ ಪುರುಷಶಾಹಿ ಚೌಕಟ್ಟಿನಿಂದ ಪ್ರಜ್ಞಾಪೂರ್ವಕವಾಗಿ ಹೊರಬರುವುದು ಸಾಧ್ಯವಾಗಿಲ್ಲ. ಅಲ್ಲಿ ಲಿಂಗ ಅಸಮಾನತೆಯು ಮಹಿಳೆಯರ ಬದುಕನ್ನು ದುಸ್ಥಿತಿಗೆ ತಳ್ಳಿದೆ ಮತ್ತು ರಾಜ್ಯದ ಅಭಿವೃದ್ಧಿಯನ್ನು ಕುಂಠಿತಗೊಳಿಸಿದೆ. ಗುಜರಾತ್ ಪ್ರಧಾನವಾಗಿ ವ್ಯಾಪಾರಿಗಳ–ವಾಣಿಜ್ಯೋದ್ಯಮಿಗಳ ನಾಡು. ಲಾಗಾಯ್ತಿನಿಂದಲೂ ಅದು ಮಾರುಕಟ್ಟೆ ಶಕ್ತಿಗಳನ್ನು ಪೋಷಿಸುತ್ತಾ ಬಂದಿರುವ ರಾಜ್ಯ. ಇಲ್ಲಿ ಪುರುಷಶಾಹಿಯ ವಿಜೃಂಭಣೆಯನ್ನು ಕಾಣಬಹುದು.

ಸಾಮಾನ್ಯವಾಗಿ ಎಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣ ಉತ್ತಮವಾಗಿರುತ್ತದೊ, ಮಹಿಳೆಯರ ಸ್ಥಿತಿಗತಿ ಉನ್ನತಮಟ್ಟದಲ್ಲಿರುತ್ತದೊ, ಲಿಂಗ ಅನುಪಾತ ಸಾವಿರಕ್ಕೆ ಹತ್ತಿರ ಅಥವಾ ಸಾವಿರಕ್ಕಿಂತ ಅಧಿಕವಿರುತ್ತದೋ, ಮಹಿಳೆಯರು ಘನತೆಯಿಂದ ಬದುಕುವುದು ಸಾಧ್ಯವಾಗುತ್ತದೋ ಅಲ್ಲಿ ಅಭಿವೃದ್ಧಿಯ ಮಟ್ಟ ಮತ್ತು ನಡೆಯು ಉತ್ತಮವಾಗಿರುತ್ತದೆ. ಕರ್ನಾಟಕ, ಕೇರಳ ಮತ್ತು ಗುಜರಾತ್ ರಾಜ್ಯಗಳ ಪೈಕಿ ಮೊದಲ ಎರಡು ರಾಜ್ಯಗಳಲ್ಲಿನ ಮಹಿಳೆಯರ ಸ್ಥಿತಿಗತಿಯು ಯಾವುದೇ ಅಭಿವೃದ್ಧಿ ಸೂಚಿಗಳನ್ನು ತೆಗೆದುಕೊಂಡರೂ ಉತ್ತಮವಾಗಿದೆ. ಆದರೆ ಇವೆರಡು ರಾಜ್ಯಗಳಿಗೆ ಹೋಲಿಸಿದರೆ ಗುಜರಾತ್ ರಾಜ್ಯದ ಸ್ಥಿತಿಗತಿಯು ಕೆಳಮಟ್ಟದಲ್ಲಿದೆ. ಈ ಕಾರಣದಿಂದ ಕೇರಳ ಮತ್ತು ಕರ್ನಾಟಕ ರಾಜ್ಯಗಳಲ್ಲಿನ ತಲಾ

ಇಂದು ನಮ್ಮ ನಾಡು ಭ್ರಮೆಗಳಲ್ಲಿ ಬದುಕುತ್ತಿದೆ. ಮಾತಿನ ಭ್ರಮೆಗಳು, ಭಾಷಣಗಳ ಭ್ರಮೆಗಳು, ಪ್ರಚಾರದ ಭ್ರಮೆಗಳು–– ಹೀಗೆ ಎಲ್ಲ ಬಗೆಯ ಭ್ರಮೆಗಳು ನಮ್ಮ ಮಧ್ಯದಲ್ಲಿವೆ. ಸಟೆಗಳನ್ನೇ ದಿಟವೆಂದು ನಂಬಿಸುವ ಪ್ರಚಾರ– ಎಲೆಕ್ಟ್ರಾನಿಕ್ಸ್, ಫೇಸ್ ಬುಕ್, ಟ್ವಿಟರ್ ಎಲ್ಲ ಮಾಧ್ಯಮಗಳಲ್ಲಿಯೂ ನಡೆಯುತ್ತಿದೆ. ಮಾಧ್ಯಮಗಳು ರೂಪಿಸಿದ ಗುಜರಾತ್ ಮಾದರಿಯ ನಿಜ ಸ್ವರೂಪ ಏನು ಎಂಬುದನ್ನು ಇಲ್ಲಿ ತೋರಿಸಲಾಗಿದೆ. ಗುಜರಾತ್ ರಾಜ್ಯವು ಲಿಂಗ ಸಮಾನತೆಯಲ್ಲಿ ಬಹಳ ಕೆಳಮಟ್ಟದಲ್ಲಿರುವುದು ಅಚ್ಚರಿಯ ಸಂಗತಿಯಾಗಿದೆ. ಕೇರಳ, ತಮಿಳುನಾಡು, ಕರ್ನಾಟಕ ಮುಂತಾದ ರಾಜ್ಯಗಳು ಲಿಂಗ ಸಮಾನತೆಯಲ್ಲಿ ಗುಜರಾತ್ ರಾಜ್ಯಕ್ಕಿಂತ ಬಹಳ ಮುಂದುವರೆದಿವೆ.

ವರಮಾನ (2014–15: ಚಾಲ್ತಿ ಬೆಲೆಗಳಲ್ಲಿ) ಗುಜರಾತ್ ರಾಜ್ಯದಲ್ಲಿನ ತಲಾ ವರಮಾನಕ್ಕಿಂತ ಉತ್ತಮವಾಗಿದೆ. ಗುಜರಾತ್ ಅಭಿವೃದ್ಧಿ ಮಾದರಿಯ ಬಗ್ಗೆ ಹೆಚ್ಚು ಮಾತನಾಡಲಾಗುತ್ತಿದೆ. ವಸ್ತುಸ್ಥಿತಿಯೇನೆಂದರೆ ಅಲ್ಲಿನ ಜನರ ಬದುಕು ಆರ್ಥಿಕವಾಗಿ ಮತ್ತು ಧಾರಣಾ ಸಾಮರ್ಥ್ಯದ ದೃಷ್ಟಿಯಿಂದ ಕರ್ನಾಟಕ ಮತ್ತು ಕೇರಳ ರಾಜ್ಯಗಳಿಗಿಂತ ಉತ್ತಮವಾಗೇನಿಲ್ಲ.



ಕೃಪೆ: ಸತೀಶ್ ಆಚಾರ್ಯ

- ❖ ಜನಸಂಖ್ಯೆಯ ಬೆಳವಣಿಗೆ ಪ್ರಮಾಣ 2001 ರಿಂದ 2011ರ ಅವಧಿಯಲ್ಲಿ ಕೇರಳದಲ್ಲಿ ಶೇ. 4.9ರಷ್ಟಿದ್ದರೆ ಗುಜರಾತಿನಲ್ಲಿ ಅದು ಶೇ. 19.3ರಷ್ಟಿದೆ. ಕರ್ನಾಟಕದಲ್ಲಿ ಅದರ ಪ್ರಮಾಣ ಶೇ. 15.6.
- ❖ ಚಾಲ್ತಿ ಬೆಲೆಗಳಲ್ಲಿ 2014–15ರ ತಲಾ ವರಮಾನ ಕೇರಳದಲ್ಲಿ ರೂ. 138390 ರಷ್ಟಿದ್ದರೆ ಗುಜರಾತಿನಲ್ಲಿ ಇದು ರೂ. 124358ರಷ್ಟಿದ್ದರೆ ಕರ್ನಾಟಕದಲ್ಲಿ ಇದು ರೂ. 130897 ರಷ್ಟಿದೆ.
- ❖ ಕೇರಳ, ಕನಾಟಕ ಮತ್ತು ಗುಜರಾತ್ ರಾಜ್ಯಗಳಲ್ಲಿ 2011ರ ಮಹಿಳಾ ಸಾಕ್ಷರತಾ ಪ್ರಮಾಣ ಕ್ರಮವಾಗಿ ಶೇ100.00, ಶೇ 68.08 ಮತ್ತು ಶೇ 63.31(2011).
- ❖ ಪುರುಷರು ಮತ್ತು ಮಹಿಳೆಯರ ನಡುವಿನ ಸಾಕ್ಷರತೆಯಲ್ಲಿನ ಅಸಮಾನತೆ ಕೇರಳದಲ್ಲಿ ಶೂನ್ಯ, ಗುಜರಾತಿನಲ್ಲಿ ಶೇ. 22.44 ಅಂಶಗಳು ಮತ್ತು ಕರ್ನಾಟಕದಲ್ಲಿ ಅದು ಶೇ. 14.39 ಅಂಶಗಳಷ್ಟಿದೆ.
- ❖ ರಾಜ್ಯದ ಮಹಿಳೆಯರ ಸಂಖ್ಯೆಯಲ್ಲಿ ಕಾಣೆಯಾದ ಮಹಿಳೆಯರ ಪ್ರಮಾಣ ಕೇರಳಲ್ಲಿ ಶೂನ್ಯವಿದ್ದರೆ ಗುಜರಾತಿನಲ್ಲಿ ಇದು ಶೇ. 8.78ರಷ್ಟು ಮತ್ತು ಕರ್ನಾಟಕದಲ್ಲಿ ಇದು ಶೇ. 2.78ರಷ್ಟಿದೆ. ಇದು ಲಿಂಗ ಅಸಮಾನತೆಯ ಪರಮೋಚ್ಛ ಸೂಚಿಯಾಗಿದೆ.
- ❖ ರಾಜ್ಯದ ಜನಸಂಖ್ಯೆಯಲ್ಲಿ ಮಹಿಳೆಯರ ಪ್ರಮಾಣ ಕೇರಳದಲ್ಲಿ ಶೇ. 52.02ರಷ್ಟು, ಗುಜರಾತಿನಲ್ಲಿ ಶೇ. 47.89 ಮತ್ತು ಕರ್ನಾಟಕದಲ್ಲಿ ಶೇ. 49.31ರಷ್ಟಿದೆ.
- ❖ ಶಿಶು ಮರಣ ಪ್ರಮಾಣ 2015–16ರಲ್ಲಿ ಗುಜರಾತಿನಲ್ಲಿ ಪ್ರತಿ ಸಾವಿರ ಜನನಗಳಿಗೆ 34, ಕೇರಳದಲ್ಲಿ 06 ಮತ್ತು ಕರ್ನಾಟಕದಲ್ಲಿ 28ರಷ್ಟಿದೆ(ಎನ್‌ಎಫ್‌ಎಚ್‌ಎಸ್–4)
- ❖ ಐದು ವರ್ಷಕ್ಕಿಂತ ಕಡಿಮೆ ವಯೋಮಾನದ ಮಕ್ಕಳ ಮರಣ ಪ್ರಮಾಣ ಪ್ರತಿ ಸಾವಿರ ಜನನಕ್ಕೆ ಗುಜರಾತಿನಲ್ಲಿ 43ರಷ್ಟಿದ್ದರೆ ಕರ್ನಾಟಕದಲ್ಲಿ 32 ಮತ್ತು ಕೇರಳಲ್ಲಿ 07 ರಷ್ಟಿದೆ (ಎನ್‌ಎಫ್‌ಎಚ್‌ಎಸ್–4)
- ❖ ಒಟ್ಟು 15 ರಿಂದ 49 ವರ್ಷಗಳ ವಯೋಮಾನದ ಮಹಿಳೆಯರಲ್ಲಿ ಅನಿಮಿಯ ಎದುರಿಸುತ್ತಿರುವ ಮಹಿಳೆಯರ ಪ್ರಮಾಣ ಗುಜರಾತಿನಲ್ಲಿ ಶೇ. 54.9ರಷ್ಟಿದ್ದರೆ ಕರ್ನಾಟಕ ಮತ್ತು ಕೇರಳಗಳಲ್ಲಿ ಕ್ರಮವಾಗಿ ಅದರ ಪ್ರಮಾಣ ಶೇ. 44.8 ಮತ್ತು ಶೇ. 34.2 (ಎನ್‌ಎಫ್‌ಎಚ್‌ಎಸ್–4)
- ❖ ಮಹಿಳೆಯರ ಜೀವನಾಯುಷ್ಯ (2002–2006) ಗುಜರಾತಿನಲ್ಲಿ 65.2 ವರ್ಷಗಳಾದರೆ ಕರ್ನಾಟಕದಲ್ಲಿ ಅದು 67.1 ವರ್ಷಗಳು ಮತ್ತು ಕೇರಳದಲ್ಲಿ ಅದು 76.3 ವರ್ಷಗಳು.

ಲಿಂಗ ಸಮಾನತೆ ವಿಷಯದಲ್ಲಿ ಕೇರಳದ ಸ್ಥಾನ ಉನ್ನತಮಟ್ಟದಲ್ಲಿದ್ದರೆ ಕರ್ನಾಟಕದ ಸ್ಥಾನ ಮಧ್ಯಮಗತಿಯದ್ದಾಗಿದೆ. ಆದರೆ ಈ ವಿಷಯದಲ್ಲಿ ಗುಜರಾತಿನ ಸ್ಥಾನ ಕೆಳಮಟ್ಟದಲ್ಲಿದೆ. ಕೇರಳದಲ್ಲಿ ಕಾಣೆಯಾದ ಮಹಿಳೆಯರ ಪ್ರಶ್ನೆ ಉದ್ಭವಿಸುವುದಿಲ್ಲ. ಏಕೆಂದರೆ ಅಲ್ಲಿ ಲಿಂಗ ಅನುಪಾತ ಸಾವಿರಕ್ಕಿಂತ ಅಧಿಕವಾಗಿದೆ. ಮಕ್ಕಳ ಮತ್ತು ಮಹಿಳೆಯರ ಆರೋಗ್ಯ ಸೂಚಿಗಳಲ್ಲಿಯೂ (ಶಿಶು ಮರಣ, ಮಕ್ಕಳಮರಣ ಪ್ರಮಾಣ, ಅಪೌಷ್ಟಿಕತೆ ಮಟ್ಟ) ಗುಜರಾತ್ ರಾಜ್ಯ ಕರ್ನಾಟಕ ಮತ್ತು ಕೇರಳಕ್ಕಿಂತ ಕೆಳಮಟ್ಟದಲ್ಲಿದೆ. ಒಂದು ಕಾಲಕ್ಕೆ ಕೇರಳವನ್ನು ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವುದಕ್ಕಾಗಿ ಆರ್ಥಿಕ ಅಭಿವೃದ್ಧಿಯನ್ನು ಬಲಿಕೊಡುತ್ತಿದೆ ಎಂದು ಟೀಕಿಸಲಾಗುತ್ತಿತ್ತು. ಇಂದು ಅದರ ತಲಾ ವರಮಾನವು ಗುಜರಾತಿಗಿಂತ ಅಧಿಕವಾಗಿದೆ ಮತ್ತು ಅದು ಕರ್ನಾಟಕದ ತಲಾ ವರಮಾನವನ್ನು ಮೀರಿಸಿದೆ. ಇದರಿಂದ ತಿಳಿದು ಬರುವ ಸಂಗತಿಯೆಂದರೆ ಗುಜರಾತ್ ಮಾದರಿ ಭಾಷಣಗಳಲ್ಲಿ ಮುಂದಿದೆಯೇ ವಿನಾ ಅಲ್ಲಿನ ಜನರ, ಅದರಲ್ಲೂ ಮಹಿಳೆಯರ ಬದುಕಿನ ಸ್ಥಿತಿಗತಿಯನ್ನು ಉತ್ತಮ ಪಡಿಸುವಲ್ಲಿ ಯಶಸ್ವಿಯಾಗಿಲ್ಲ.

ಲಿಂಗ ಸಮಾನತೆಯು ಆರ್ಥಿಕ ಅಭಿವೃದ್ಧಿ ಮತ್ತು ಮಾನವ ಅಭಿವೃದ್ಧಿ – ಎರಡೂ ದೃಷ್ಟಿಯಿಂದ ಅಗತ್ಯವಾದ ಒಂದು ಸಂಗತಿಯಾಗಿದೆ. ಈ ರಾಜ್ಯಗಳಲ್ಲಿ ಮಹಿಳೆಯರು ದುಡಿಮೆ ಸಹಭಾಗಿತ್ವ ಪ್ರಮಾಣ ಕೆಳಮಟ್ಟದಲ್ಲಿದೆ. ಇಲ್ಲಿ ಮಹಿಳೆಯರ ದುಡಿಮೆಯನ್ನು ಅತ್ಯಂತ ಸೀಮಿತವಾದ ಚೌಕಟ್ಟಿನಲ್ಲಿ ನಿರ್ವಚಿಸಲಾಗುತ್ತಿದೆ. ಅವರು ಮನೆಯ ಹೊರಗೆ ನಿರ್ವಹಿಸುವ ಸಂಭಾವನಾ ರಹಿತ ದುಡಿಮೆಯನ್ನು ಗಣನೆ ಮಾಡುತ್ತಿಲ್ಲ. ಮನೆಯ ಒಳಗಿನ ದುಡಿಮೆಯನ್ನು ರಾಷ್ಟ್ರೀಯ ವರಮಾನದ ಲೆಕ್ಕದಲ್ಲಿ ಪರಿಗಣಿಸುತ್ತಿಲ್ಲ.

ಮನೆಯ ಹೊರಗಿನ ಸಂಭಾವನಾ ರಹಿತ ದುಡಿಮೆ ಮತ್ತು ಮನೆಯೊಳಗಿನ ಕೆಲಸವನ್ನು (ಸಂತಾನೋತ್ಪತ್ತಿ ದುಡಿಮೆಯನ್ನು ಸೇರಿಸಿಕೊಂಡು) ಪರಿಗಣಿಸಿದ್ದಾದರೆ ಅವರ ದುಡಿಮೆ ಸಹಭಾಗಿತ್ವ ಪ್ರಮಾಣ ಉತ್ತಮವಾಗುವ ಸಾಧ್ಯತೆಯಿದೆ. ಮಹಿಳೆಯರ ದುಡಿಮೆ, ಅವರ ಜ್ಞಾನ, ಕೌಶಲ್ಯ ಆರ್ಥಿಕತೆಯ ಅಭಿವೃದ್ಧಿಗೆ ಪೂರ್ಣವಾಗಿ ಸಲ್ಲುತ್ತಿಲ್ಲ. ಲಿಂಗ ಅಸಮಾನತೆಯು ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತದೆ. ಲಿಂಗ ಅಸಮಾನತೆಗೂ ಮತ್ತು ಮಹಿಳೆಯರ ಜೈವಿಕ ಸಂಗತಿಗಳಿಗೂ ಸಂಬಂಧವಿಲ್ಲ. ಲಿಂಗ ಅಸಮಾನತೆಯು ಮೂಲತಃ ಸಾಮಾಜಿಕವಾಗಿ ರೂಪಿತವಾಗಿರುವ ಒಂದು ವಿಕೃತಿ. ಮಹಿಳೆಯರು ಮತ್ತು ಪುರುಷರ ನಡುವೆ ಜೈವಿಕ ಭಿನ್ನತೆಗಳಿವೆಯೆ ವಿನಾ ಅಲ್ಲಿ ಅಸಮಾನತೆಯಿಲ್ಲ. ಮಡಿ, ಮೈಲಿಗೆ, ಸೂತಕ ಮುಂತಾದ ವಿಕಾರಗಳ ಹೆಸರಿನಲ್ಲಿ ಇಂದಿಗೂ ಮಹಿಳೆಯರನ್ನು ಶೋಷಿಸಲಾಗುತ್ತಿದೆ. ಬಹುಶ್ರುತರೂ ಅನ್ನಿಸಿಕೊಂಡವರೂ ಇಂತಹ ವಿಕೃತಿಗಳನ್ನು ಸಮರ್ಥಿಸಿ ಮಾತನಾಡುತ್ತಿದ್ದಾರೆ. ಜನಸಂಖ್ಯಾಶಾಸ್ತ್ರ ಮತ್ತು ಆರೋಗ್ಯ ವಿಜ್ಞಾನದ ಪ್ರಕಾರ ಯಾವುದೇ ಸಮಾಜದಲ್ಲಿ ಮಹಿಳೆಯರ ಸಂಖ್ಯೆಯು ಪುರುಷರ ಸಂಖ್ಯೆಗಿಂತ ಅಧಿಕವಾಗಿರಬೇಕು. ಆದರೆ ಗುಜರಾತಿನಲ್ಲಿ ಅವರ ಪ್ರಮಾಣ ಶೇ. 47.89. ಅಲ್ಲಿನ ಲಿಂಗ ಅನುಪಾತ 919. ಕೇರಳದಲ್ಲಿ ಲಿಂಗ ಅನುಪಾತ 1084ರಷ್ಟಿದ್ದರೆ ಕರ್ನಾಟಕದಲ್ಲಿ ಲಿಂಗ ಅನುಪಾತ 973. ಮಹಿಳೆಯರ ಜೀವನಾಯುಷ್ಯದಲ್ಲಿಯೂ ಕೇರಳ ಮತ್ತು ಕರ್ನಾಟಕ ರಾಜ್ಯಗಳು ಗುಜರಾತಿಗಿಂತ ಮುಂದಿವೆ. ವರಮಾನವೇ ಬದುಕಿನ ಸಮಗ್ರ ಮೊತ್ತವಲ್ಲ ಎಂದು ಮೆಹಬೂಬ್ ಉಲ್ ಹಕ್ ನಮಗೆ 1990ರಲ್ಲಿಯೇ ಎಚ್ಚರಿಸಿದ್ದರು. ಆದರೂ ಇಂದಿಗೂ ಅಭಿವೃದ್ಧಿಯನ್ನು ಅದರ ಸಾಧನವಾದ ವರಮಾನದ ಆಧಾರದಲ್ಲಿ ಮಾಪನ ಮಾಡುವ ಕ್ರಮ ಮುಂದುವರಿದಿದೆ. ಅಭಿವೃದ್ಧಿ ಅನ್ನುವುದು ಮಹಿಳೆಯರನ್ನು ಸೇರಿಸಿಕೊಂಡು ಜನರ ಸಾಕ್ಷರತೆ, ಶಿಕ್ಷಣ, ಆರೋಗ್ಯ, ಆಹಾರ, ಸಮಾನತೆ, ಸಾಮಾಜಿಕ ನ್ಯಾಯ ಮುಂತಾದವುಗಳನ್ನು ಒಳಗೊಂಡ ಒಂದು ಪ್ರಕ್ರಿಯೆ. ಮಹಿಳೆಯರನ್ನು ಸೇರಿಸಿಕೊಂಡು ಜನರನ್ನು ಒಳಗೊಂಡ ಅಭಿವೃದ್ಧಿಯಲ್ಲಿ ಕೇರಳ ಮುಂಚೂಣಿಯಲ್ಲಿದೆ. ಕರ್ನಾಟಕವು ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಅಭಿವೃದ್ಧಿಗಳ ನಡುವೆ ಸಮತೋಲನವನ್ನು ಸಾಧಿಸಿಕೊಂಡು ಮುಂದುವರಿಯುತ್ತಿದೆ. ಗುಜರಾತ್ ಮಾದರಿ ಬಗ್ಗೆ ಕೇವಲ ಆವಾಜ್ ಹಾಕಲಾಗುತ್ತಿದೆ. ಅದರ ಅಭಿವೃದ್ಧಿಯಲ್ಲಿ ನಿಜವಾದ ಸತ್ವ ಇದ್ದಂತೆ ಕಾಣುವುದಿಲ್ಲ.

ಲಿಂಗ ಸಮಾನತೆ ಅನ್ನುವುದು ತನ್ನಷ್ಟಕ್ಕೆ ಮಹತ್ವವಾದ ಗುರಿಯಾಗಿದೆ. ಇದು ವರಮಾನದ ಏರಿಕೆಯಿಂದ, ಉತ್ಪಾದನೆಯಲ್ಲಿ ಏರಿಕೆಯಾಗಿ ಬಿಟ್ಟರೆ, ಬಂಡವಾಳ ಹೂಡಿಕೆಯು ಅಧಿಕಗೊಂಡರೆ ತನ್ನಷ್ಟಕ್ಕೆ ಸಾಧ್ಯವಾಗುತ್ತದೆ ಎಂಬ ನಂಬಿಕೆಯಿದೆ. ಇದು ಪೂರ್ಣ ಸತ್ಯವಲ್ಲ. ಆದ್ದರಿಂದ ಲಿಂಗ ಸಮಾನತೆಯನ್ನು ಪ್ರಜ್ಞಾಪೂರ್ವಕವಾಗಿ ಸಾಧಿಸಿಕೊಳ್ಳಬೇಕಾಗುತ್ತದೆ. ಲಿಂಗ ಸಮಾನತೆಯ ಉದ್ದೇಶವು ಕೇವಲ ಆರ್ಥಿಕ ಅಭಿವೃದ್ಧಿಗೆ ನಿಲ್ಲಬೇಕಾಗಿಲ್ಲ. ಮಹಿಳೆಯರ ಬದುಕನ್ನು ಉತ್ತಮ ಪಡಿಸುವ, ಅವರ ಶಿಕ್ಷಣದ ಮಟ್ಟವನ್ನು ಉತ್ತಮ ಪಡಿಸುವ, ಅವರ ಆರೋಗ್ಯವನ್ನು ಸುಧಾರಿಸುವ ಕ್ರಮಗಳು ಅಭಿವೃದ್ಧಿಯ ಮೂಲದಲ್ಲಿನ ಪ್ರೇರಕ ಶಕ್ತಿಯಾಗಿರಬೇಕು. ಲಿಂಗ ಸಮಾನತೆಯು ಮತ್ತಾವುದೋ ಗುರಿಯನ್ನು ಸಾಧಿಸಿಕೊಳ್ಳಲು ಒಂದು ಸಾಧನವಾಗಬಾರದು. ಅದು ತನ್ನಷ್ಟಕ್ಕೆ ತಾನು ಮಹತ್ವದ ಗುರಿಯಾಗಿದೆ.

ಇಂದು ನಮ್ಮ ನಾಡು ಭ್ರಮೆಗಳಲ್ಲಿ ಬದುಕುತ್ತಿದೆ. ಮಾತಿನ ಭ್ರಮೆಗಳು, ಭಾಷಣಗಳ ಭ್ರಮೆಗಳು, ಪ್ರಚಾರದ ಭ್ರಮೆಗಳು–– ಹೀಗೆ ಎಲ್ಲ ಬಗೆ–ಯ ಭ್ರಮೆಗಳು ನಮ್ಮ ಮಧ್ಯದಲ್ಲಿವೆ. ಸಟೆಗಳನ್ನೇ ದಿಟವೆಂದು ನಂಬಿಸುವ ಪ್ರಚಾರ– ಎಲೆಕ್ಟ್ರಾನಿಕ್ಸ್, ಫೇಸ್ ಬುಕ್, ಟಿಟ್ವರ್ ಎಲ್ಲ ಮಾಧ್ಯಮಗಳಲ್ಲಿಯೂ ನಡೆಯುತ್ತಿದೆ. ಮಾಧ್ಯಮಗಳು ರೂಪಿಸಿದ ಗುಜರಾತ್ ಮಾದರಿಯ ನಿಜ ಸ್ವರೂಪ ಏನು ಎಂಬುದನ್ನು ಇಲ್ಲಿ ತೋರಿಸಲಾಗಿದೆ. ಲಿಂಗ ಸಮಾನತೆಯಲ್ಲಿ ಯಾವ ರಾಜ್ಯಗಳು ಮುಂದಿವೆ ಮತ್ತು ಗುಜರಾತ್ ಎಲ್ಲಿದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಈ ಭ್ರಮೆಗಳು, ಭೀಷಣ ಭಾಷಣಗಳು ಪ್ರಜಾಪ್ರಭುತ್ವವನ್ನೇ ಅಪ್ರಸ್ತುತವನ್ನಾಗಿ ಮಾಡುತ್ತಿವೆ.

ಮಾನವ ಅಭಿವೃದ್ಧಿ ಮಾಪಕ	ಕೇರಳ	ಕರ್ನಾಟಕ	ಗುಜರಾತ್
ಜನಸಂಖ್ಯೆ ಬೆಳವಣಿಗೆ ಪ್ರಮಾಣ (2001–2011)	ಶೇ. 4.9	ಶೇ. 15.6	ಶೇ.19.3
ತಲಾ ವರಮಾನ 2014–15 (ಚಾಲ್ತಿ ಬೆಲೆಗಳಲ್ಲಿ)	1.38 ಲಕ್ಷ ರೂ.	1.31 ಲಕ್ಷ ರೂ.	1.24 ಲಕ್ಷ ರೂ.
ಮಹಿಳಾ ಸಾಕ್ಷರತಾ ಪ್ರಮಾಣ (2011)	ಶೇ. 100	ಶೇ. 68.08	ಶೇ. 63.31
ಪುರುಷ–ಮಹಿಳಾ ಸಾಕ್ಷರತಾ ಅಸಮಾನತೆ	ಶೇ. 0	ಶೇ. 14.39	ಶೇ. 22.44
ಕಾಣೆಯಾದ ಮಹಿಳೆಯರ ಪ್ರಮಾಣ	ಶೇ. 0	ಶೇ. 2.78	ಶೇ. 8.78
ಜನಸಂಖ್ಯೆಯಲ್ಲಿ ಮಹಿಳೆಯರ ಪ್ರಮಾಣ	ಶೇ. 52.02	ಶೇ. 49.31	ಶೇ. 47.89
ಶಿಶು ಮರಣ: ಪ್ರತಿ ಸಾವಿರ ಜನನಗಳಿಗೆ (2015–16) (NFHS-4)	6	28	34
5 ವರ್ಷದ ಒಳಗಿನ ಮಕ್ಕಳ ಮರಣ ಪ್ರಮಾಣ – ಪ್ರತಿ ಸಾವಿರ ಜನನಗಳಿಗೆ (NFHS-4)	7	32	43
ಮಹಿಳೆಯರಲ್ಲಿ (15 ರಿಂದ 49 ವರ್ಷ) ಅನಿಮಿಯ ಇರುವವರ ಪ್ರಮಾಣ (NFHS-4)	ಶೇ. 34.2	ಶೇ. 44.8	ಶೇ. 54.9
ಮಹಿಳೆಯರ ಜೀವನಾಯುಷ್ಯ (2002–2006)	76.3 ವರ್ಷ	67.1 ವರ್ಷ	65.2 ವರ್ಷ

ಪರಮಾಣು ಕಲ್ಪನಾ ವಿಲಾಸದ ಇತಿಶ್ರೀ



ಪ್ರಕಾಶ್ ಕಾರಟ್



ಮೋದಿ ಸರಕಾರ ಪರಮಾಣು ಒಪ್ಪಂದದ ವಿಚಾರದಲ್ಲಿ ಮನಮೋಹನ್ ಸಿಂಗ್ ಸರಕಾರದ ದಿವಾಳಿಕೋರ ಪರಂಪರೆಯನ್ನು ಸಂಪೂರ್ಣವಾಗಿ ಅಪ್ಪಿಕೊಂಡಿದೆ. ಆದರೆ ವೆಸ್ಟಿಂಗ್‌ಹೌಸ್ ಮತ್ತು ಅರೆವಾ ಕಂಪೆನಿಗಳು ಆರ್ಥಿಕ ದಿವಾಳಿ ಎದುರಿಸು ತ್ತಿರುವುದರಿಂದ ಕೊವ್ವಡ ಮತ್ತು ಜೈತಪುರ ಅಣು ಸ್ಥಾವರ ಒಪ್ಪಂದಗಳನ್ನು ರದ್ದು ಮಾಡದೆ ಸರಕಾರಕ್ಕೆ ಬೇರೆ ದಾರಿ ಇಲ್ಲ. ಹಾಗೆ ಮಾಡದಿದ್ದರೆ ಒಂದು ಪರಮಾಣು ಕಲ್ಪನಾ ವಿಲಾಸಕ್ಕಾಗಿ ಜನತೆಯನ್ನು ದರೋಡೆ ಮಾಡಿದಂತಾಗುತ್ತದೆ

ಭಾರತ–ಅಮೆರಿಕ ಪರಮಾಣು ಒಪ್ಪಂದದ ಫಲಶೃತಿ ಇದೀಗ ಅಸ್ತವ್ಯಸ್ತಗೊಂಡಿದೆ. ಭಾರತ–ಅಮೆರಿಕ ನಡುವಿನ ಸಾಮರಿಕ ಸಂಬಂಧವನ್ನು ಬೆಸೆಯಲೆಂದು ಪರಮಾಣು ಒಪ್ಪಂದವನ್ನು ಮಾಡಿಕೊಳ್ಳಲಾಗಿತ್ತು. ಭಾರತಕ್ಕೆ ಪೂರ್ಣ ಪ್ರಮಾಣದ ನಾಗರಿಕ ಪರಮಾಣು ಸಹಕಾರವನ್ನು ನೀಡುವುದು ಈ ಒಡಂಬಡಿಕೆಯ ತಿರುಳು ಹಾಗೂ ಅದಕ್ಕೆ ಪ್ರತಿಯಾಗಿ ಅಮೆರಿಕದ ಶಸ್ತ್ರಾಸ್ತ್ರ ಖರೀದಿಯೂ ಒಳಗೊಂಡಂತೆ ಅಮೆರಿಕದೊಂದಿಗೆ ಮಿಲಿಟರಿ ಸಂಬಂಧ ಬೆಳೆಸುವುದು ಈ ಒಪ್ಪಂದದ ಸಾರಾಂಶವಾಗಿತ್ತು. ಇದರಲ್ಲಿ ಭಾರತದ ವಿದೇಶಾಂಗ ಧೋರಣೆಯನ್ನು ಇರಾನ್ ನ್ನು ಏಕಾಂಗಿಯಾಗಿಸುವುದು ಮುಂತಾದ ಅಮೆರಿಕದ ಸಾಮರಿಕ ಹಿತಗಳಿಗೆ ಅಡಕಗೊಳಿಸುವ ಒಂದು ಒಟ್ಟಾರೆ ಚೌಕಟ್ಟು ಕೂಡ ಇತ್ತು.

ಮನಮೋಹನ ಸಿಂಗ್ ಸರಕಾರವು ಈ ಅಸಮತ್ವದ ಒಪ್ಪಂದದ ಮಾತುಕತೆ ನಡೆಯುವ ವೇಳೆ ಅಮೆರಿಕದ ಪರಮಾಣು ಶಕ್ತಿ ಕಂಪೆನಿಗಳಿಂದ 10,000 ಮೆಗಾವ್ಯಾಟ್ ಪರಮಾಣು ರಿಯಾಕ್ಟರ್‌ಗಳನ್ನು ಖರೀದಿಸುವುದಕ್ಕೂ ಬದ್ಧಗೊಳಿಸಿಕೊಂಡಿತು.

ಈ ಪರಮಾಣು ಒಡಂಬಡಿಕೆಯ ನೆಲೆಗಳು ಎಷ್ಟು ಪೊಳ್ಳು ಎಂಬುದು ಹತ್ತು ವರ್ಷಗಳ ನಂತರ ಬಯಲಾಯಿತು. ಪರಮಾಣು ಸರಬರಾಜು ಗುಂಪಿನ (ಎನ್‌ಎಸ್‌ಜಿ) ಪರಿಪೂರಣ ಮತ್ತು ಮರುಸಂಸ್ಕರಣಾ ತಂತ್ರಜ್ಞಾನ ಭಾರತಕ್ಕೆ ಲಭ್ಯವಾಗದಂತೆ ಮಾಡಲಾಗಿದೆ. ಅಮೆರಿಕ ಮತ್ತು ಫ್ರಾನ್ಸ್‌ನಿಂದ ದೊಡ್ಡ ಸಂಖ್ಯೆಯಲ್ಲಿ ಪರಮಾಣು ರಿಯಾಕ್ಟರ್‌ಗಳನ್ನು ಆಮದು ಮಾಡಿಕೊಳ್ಳುವ ಯೋಜನೆಗೆ ಗಂಡಾಂತರ ಒದಗಿದೆ.

ತೋಷಿಬಾ ಕಂಪೆನಿಯ ಮಾಲಿಕತ್ವದ ಅಮೆರಿಕದ ಪರಮಾಣು ಕಂಪೆನಿಯಾದ ವೆಸ್ಟಿಂಗ್‌ಹೌಸ್ ತಾನು ದಿವಾಳಿಯಾಗಿರುವುದಾಗಿ ಘೋಷಿಸಿದೆ. ಭಾರತದಲ್ಲಿ ಆರು ಎಪಿ1000 ಪರಮಾಣು ರಿಯಾಕ್ಟರ್‌ಗಳನ್ನು ಸ್ಥಾಪಿಸಲು ಯುಪಿಎ ಸರಕಾರ ಒಪ್ಪಿತ್ತು. ಆಂಧ್ರಪ್ರದೇಶದ ಕೊವ್ವಡದಲ್ಲಿ ಎರಡು ರಿಯಾಕ್ಟರ್‌ಗಳನ್ನು ಸ್ಥಾಪಿಸುವ ಬಗ್ಗೆ ಮೋದಿ ಸರಕಾರದ ಅಡಿಯಲ್ಲಿ ಭಾರತ ಪರಮಾಣು ಇಂಧನ ನಿಗಮ ಮತ್ತು ವೆಸ್ಟಿಂಗ್‌ಹೌಸ್ ನಡುವೆ ಪ್ರಾಥಮಿಕ ಕಾಮಗಾರಿ ಒಪ್ಪಂದಕ್ಕೆ ಸಹಿ ಮಾಡಲಾಗಿತ್ತು. ಕೊವ್ವಡದಲ್ಲಿ ಒಟ್ಟು ಆರು ರಿಯಾಕ್ಟರ್‌ಗಳು ಸ್ಥಾಪನೆಯಾಗಬೇಕಿತ್ತು.

ಇದೀಗ ವೆಸ್ಟಿಂಗ್‌ಹೌಸ್ ದಿವಾಳಿಯೆದ್ದಿದೆ ಎಂದು ಘೋಷಿಸಿರುವುದರಿಂದ ಕೊವ್ವಡ ಯೋಜನೆಯ ಭವಿಷ್ಯ ಸಂದೇಹಾಸ್ಪದವಾಗಿದೆ. ಯೋಜನೆ ಯಾವುದೇ ಕಾರಣಕ್ಕೂ ನಿಲ್ಲುವುದಿಲ್ಲ ಎಂದು ಭಾರತದಲ್ಲಿರುವ ಅಮೆರಿಕ ರಾಯಭಾರ ಕಚೇರಿ ಮತ್ತು ಕಂಪೆನಿಯು ಹೇಳಿವೆಯಾದರೂ ವೆಸ್ಟಿಂಗ್‌ಹೌಸ್ ಕಂಪೆನಿಯು ಅಮರಿಕ ಮತ್ತು ಚೀನಾದಲ್ಲಿ ಸ್ಥಾಪಿಸುತ್ತಿರುವ ಎಪಿ1000 ಸರಣಿಯ ರಿಯಾಕ್ಟರ್‌ಗಳು ಭಾರಿ ಸಮಸ್ಯೆಗಳಿಂದ ಕೂಡಿವೆ ಎಂಬುದು ವಾಸ್ತವವಾಗಿದೆ. ಸದ್ಯಕ್ಕೆ ಜಗತ್ತಿನ ಯಾವುದೇ ಭಾಗದಲ್ಲಿಯೂ ಈ ರೀತಿಯ ರಿಯಾಕ್ಟರ್ ಕೆಲಸ ಮಾಡುತ್ತಿಲ್ಲ. ದಿವಾಳಿಯೆದ್ದಿರುವ ಕಂಪೆನಿಯೊಂದರ ಜೊತೆ ಬಿಲಿಯಾಂತರ ಡಾಲರ್ ಮೊತ್ತದ ವ್ಯವಹಾರವನ್ನು ಮುಂದುವರಿಸಿಕೊಂಡು ಹೋಗುವುದು ಮೋದಿ ಸರಕಾರಕ್ಕೆ ಹುಚ್ಚು ಸಾಹಸವಾಗುತ್ತದೆ.

ಗಂಡಾಂತರಕ್ಕೆ ಸಿಲುಕಿರುವುದು ಕೊವ್ವಡ ಯೋಜನೆ ಮಾತ್ರವೇ ಅಲ್ಲ. ಮಹಾರಾಷ್ಟ್ರದ ಜೈತಪುರ ಯೋಜನೆ ಕೂಡ ತುಂಬಾ ಗಂಭೀರ ಕಷ್ಟಕ್ಕೆ ಸಿಲುಕಿದೆ. ಅಲ್ಲಿ ತಲಾ 1650 ಮೆಗಾವ್ಯಾಟ್ ಸಾಮರ್ಥ್ಯದ ಆರು ಇಪಿಆರ್ ರಿಯಾಕ್ಟರ್‌ಗಳನ್ನು ಸ್ಥಾಪಿಸುವಂತೆ ಫ್ರಾನ್ಸ್‌ನ ಅರೆವಾ ಕಂಪೆನಿಗೆ ಗುತ್ತಿಗೆ ನೀಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ 2015 ಎಪ್ರಿಲ್‌ನಲ್ಲಿ ಫ್ರಾನ್ಸ್‌ಗೆ ಭೇಟಿ ನೀಡಿದ್ದ ವೇಳೆ, ಈ ರಿಯಾಕ್ಟರ್‌ಗಳ ಸ್ಥಾಪನೆಗೆ ಸಂಬಂಧಿಸಿದಂತೆ ಅನುಕ್ರಮವಾಗಿ ಅರೆವಾ ಮತ್ತು ಎನ್‌ಪಿಸಿಎಲ್ ಹಾಗೂ ಲಾರ್ಸನ್ ಅಂಡ್ ಟುಬ್ರೊ ನಡುವೆ ಎರಡು ಒಪ್ಪಂದಗಳಿಗೆ ಸಹಿ ಹಾಕಲಾಗಿತ್ತು.

ಆದರೆ, ಒಪ್ಪಂದಗಳಿಗೆ ಸಹಿ ಹಾಕಿದ ಕೆಲವೇ ತಿಂಗಳಲ್ಲಿ 4.8 ಬಿಲಿಯನ್ ಯೂರೋಗಳಷ್ಟು ದೊಡ್ಡ ನಷ್ಟವಾಗಿದೆ ಎಂದು ಅರೆವಾ ಘೋಷಿಸಿತು. ಕಂಪೆನಿಯನ್ನು ವಿಭಜಿಸಿ ಪರಮಾಣು ವಿಭಾಗವನ್ನು ಇನ್ನೊಂದು ಫ್ರೆಂಚ್ ಇಂಧನ ಕಂಪೆನಿಯಾದ ಇಡಿಪಿಗೆ ಮಾರುವುದಾಗಿ ಅರೆವಾದ ಮಾಲಿಕತ್ವ ಹೊಂದಿರುವ ಫ್ರಾನ್ಸ್ ಸರಕಾರ ಘೋಷಿಸಿದೆ. ಇಡಿಪಿ ಕೂಡ ಫ್ರಾನ್ಸ್‌ನ ಸರಕಾರಿ ಸ್ವಾಮ್ಯದ್ದೇ ಕಂಪೆನಿ. ಫಿನ್‌ಲ್ಯಾಂಡ್ ಮತ್ತು ಫ್ರಾನ್ಸ್‌ನಲ್ಲಿ ರಿಯಾಕ್ಟರ್‌ಗಳನ್ನು ಸ್ಥಾಪಿಸಲು ಕೂಡ ಅರೆವಾ ಒದ್ದಾಡುತ್ತಿದೆ. ಇದ–ರಿಂದಾಗಿ ಭಾರಿ ವಿಳಂಬವಾಗಿ ವೆಚ್ಚವೂ ಸಿಕ್ಕಾಪಟ್ಟೆ ಹೆಚ್ಚಾಗುತ್ತಿದೆ.

ಆಮದು ಮಾಡಿಕೊಳ್ಳಲಾಗುವ ಪರಮಾಣು ರಿಯಾಕ್ಟರ್‌ಗಳು ತೀರಾ ವೆಚ್ಚದಾಯಕ. ಅದು ಮೂರ್ಖತನದ್ದು ಎಂದು ಪರಮಾಣು ವ್ಯವಹಾರ ನಡೆಸುತ್ತಿದ್ದ ವೇಳೆಯೇ ಸಿಪಿಐ (ಎಂ) ಹೇಳಿತ್ತು. ಆದರೆ 2020ರ ವೇಳೆಗೆ 20,000 ಮೆಗಾವ್ಯಾಟ್ ಪರಮಾಣು ಇಂಧನ ಸೃಜಿಸುವ ಭ್ರಮಾತ್ಮಕ ಯೋಜನೆಯನ್ನು ಮನಮೋಹನ್ ಸಿಂಗ್ ಸರಕಾರ ಘೋಷಿಸಿತು.

ಪರಮಾಣು ಕ್ಷೇತ್ರದಲ್ಲಿ ಇಂತಹ ಅಧ್ವಾನವಾಗುತ್ತಿದ್ದರೂ, ಭಾರತವನ್ನು ಈ ವ್ಯವಹಾರದಲ್ಲಿ ಸಿಲುಕಿಸುವ ಅಮೆರಿಕದ ಮೂಲ ಉದ್ದೇಶ ಈಡೇರಿದೆ. ಅಮೆರಿಕವು ಈಗ ಭಾರತಕ್ಕೆ ಶಸ್ತ್ರಾಸ್ತ್ರ ಮತ್ತು ರಕ್ಷಣಾ ಸಲಕರಣೆಗಳನ್ನು ಸರಬರಾಜು ಮಾಡುವ ಅತಿ ದೊಡ್ಡ ದೇಶವಾಗಿ ಬಿಟ್ಟಿದೆ. ಮಿಲಿಟರಿ ಮೈತ್ರಿ ಬೆಳೆದಿದೆ. ಲಾಜಿಸ್ಟಿಕ್ಸ್ ಎಕ್ಸಚೇಂಜ್ ಮೆಮೊರಾಂಡಮ್ ಆಫ್ ಅಗ್ರೀಮೆಂಟ್ (ಮಿಲಿಟರಿ ಸಾಗಾಣೀಕೆ ಒಪ್ಪಂದ–ಎಲ್‌ಇಎಂಒಎ)ಗೆ ಸಹಿ ಹಾಕುವ ಮೂಲಕ ಈ ಮಿಲಿಟರಿ ಶಾಮೀಲನ್ನು ಮೋದಿ ಸರಕಾರ ಮುಂದುವರಿಸಿದೆ. ಇರಾನ್ ಪರಮಾಣು ವಿಚಾರದಲ್ಲಿ ಭಾರತದ ನಿಲುವಿಗೆ ಏನಾಯಿತು ಎಂಬುದು ಈಗ ಈ ಒಪ್ಪಂದದ ನಾಚಿಕೆಗೇಡಿನ ಇತಿಹಾಸದ ಭಾಗವಾಗಿದೆ.

ಮೋದಿ ಸರಕಾರ ಪರಮಾಣು ಒಪ್ಪಂದದ ವಿಚಾರದಲ್ಲಿ ಮನಮೋಹನ್ ಸಿಂಗ್ ಸರಕಾರದ ದಿವಾಳಿಕೋರ ಪರಂಪರೆಯನ್ನು ಸಂಪೂರ್ಣವಾಗಿ ಅಪ್ಪಿಕೊಂಡಿದೆ. ವೆಸ್ಟಿಂಗ್‌ಹೌಸ್ ಮತ್ತು ಅರೆವಾ ಕಂಪೆನಿಗಳು ಆರ್ಥಿಕ ದಿವಾಳಿ ಎದುರಿಸು ತ್ತಿರುವುದರಿಂದ ಕೊವ್ವಡ ಮತ್ತು ಜೈತಪುರ ಒಪ್ಪಂದಗಳನ್ನು ರದ್ದು ಮಾಡದೆ ಸರಕಾರಕ್ಕೆ ಬೇರೆ ದಾರಿ ಇಲ್ಲ. ಹಾಗೆ ಮಾಡದಿದ್ದರೆ ಒಂದು ಪರಮಾಣು ಕಲ್ಪನಾ ವಿಲಾಸಕ್ಕಾಗಿ ಜನತೆಯನ್ನು ದರೋಡೆ ಮಾಡಿದಂತಾಗುತ್ತದೆ.

ಅನು: ವಿಶ್ವ

ಡೊನೇಷನ್ ನಿಯಂತ್ರಣಕ್ಕಾಗಿ ಒತ್ತಾಯಿಸಿ..........

ಪುಟ 4 ರಿಂದ

1983ರ ಕರ್ನಾಟಕ ಶಿಕ್ಷಣ ಕಾಯಿದೆಯ ನಿಯಮಗಳ ಪ್ರಕಾರವೇ ಸರ್ಕಾರ ನಿಗದಿಪಡಿಸಿದಂತೆ ಅನುದಾನಿತ ಶಿಕ್ಷಣ ಸಂಸ್ಥೆಗಳು ಮತ್ತು ಅನುದಾನರಹಿತ ಶಿಕ್ಷಣ ಸಂಸ್ಥೆಗಳು ಸರ್ಕಾರ ನಿಗದಿಪಡಿಸಿದಷ್ಟು ಅಭಿವೃದ್ಧಿ ಶುಲ್ಕ (ಡೆವಲಪ್‌ಮೆಂಟ್ ಫೀ)ವನ್ನು ಸಂಗ್ರಹಿಸಲು ಅವಕಾಶವಿದೆ. ಈ ಹಣವನ್ನು ಒತ್ತಾಯದ ಮೂಲಕ ಸಂಗ್ರಹಿಸುವಂತಿಲ್ಲ. ಇದಕ್ಕೂ ಹೆಚ್ಚು ಸಂಗ್ರಹಿಸುವುದು ಕಾನೂನಿನ ಪ್ರಕಾರ ಅಪರಾಧ. ಹಾಗೂ ಪ್ರತಿ ವರ್ಷವೂ ಕೂಡಾ ಖಾಸಗಿ ಶಿಕ್ಷಣ ಸಂಸ್ಥೆಗಲು ತನ್ನ ಖರ್ಚು ವೆಚ್ಚದ ಆಧಾರದ ಮೇಲೆ ಶೇ 30ರಷ್ಟು ಶುಲ್ಕವನ್ನು ಹೆಚ್ಚಳ ಮಾಡುವುದಕ್ಕೆ ಅವಕಾಶವಿದೆ. ಶಿಕ್ಷಣ ಕಾಯಿದೆ ಅನ್ವಯ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿ ಪ್ರತಿನಿಧಿಗಳು, ಪೋಷಕರು, ಶಿಕ್ಷಣ ತಜ್ಞರನ್ನೊಳಗೊಂಡಂತೆ ಸಮಿತಿ ರಚಿಸಿ ಅಲ್ಲಿ ಈ ಕುರಿತು ಚರ್ಚಿಸಬೇಕು. ಆದರೆ ಅದು ಎಲ್ಲಿಯೂ ಜಾರಿಯಾಗುತ್ತಿಲ್ಲ. ಡೊನೇಷನ್ (ವಂತಿಗೆ) ವಸೂಲಿಯನ್ನು ನಿಯಂತ್ರಿಸಲು ಜಿಲ್ಲಾ ಶಿಕ್ಷಣ ರೆಗ್ಯುಲೇಟಿಂಗ್ ಪ್ರಾಧಿಕಾರವನ್ನು ರಚಿಸಬೇಕೆಂದು ನಿಯಮವಿದ್ದರೂ ಕೂಡಾ ಪ್ರತಿ ವರ್ಷದ ಶೈಕ್ಷಣಿಕ ಆರಂಭದಲ್ಲಿ ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರದ ಒಂದು ಸಭೆ ನಡೆಯುವುದು ಬಿಟ್ಟರೆ ಅದು ಹೋರಾಟ ನಡೆಸಿ ಜಿಲ್ಲಾಡಳಿತವನ್ನು ಎಚ್ಚರಿಸದಾಗ ಮಾತ್ರ ಸಭೆ ನಡೆಸುವುದನ್ನು ಬಿಟ್ಟರೆ ಅದು ಕಾರ್ಯ ಸಾಧ್ಯವಾಗಿಲ್ಲ.

ಪ್ರಗತಿಪರ ಪಾಲಕರ ಒಕ್ಕೂಟದ ಜಿಲ್ಲಾ ಸಂಚಾಲಕರಾದ ಜಿ.ಎ.ಹಿರೇಮಠ ಮಾತನಾಡಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಈ ಪ್ರಾಧಿಕಾರಕ್ಕೆ ಡಿ.ಡಿ.ಪಿ.ಐ, ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ, ಡಿ.ಡಿ.ಪಿ.ಯು. ಜಿಲ್ಲಾ ಮುಖ್ಯ ಇಂಜಿನೀಯರ್, ಸೇರಿದಂತೆ ಪೋಷಕರು, ಶಿಕ್ಷಣ ಆಸಕ್ತರು, ವಿದ್ಯಾರ್ಥಿ ಪ್ರತಿನಿಧಿಗಳು ಸದಸ್ಯರುಗಳಾಗಿರುವರು. ಈ ಸಮಿತಿಯು ಅಕ್ರಮವಾಗಿ ಡೊನೇಷನ್ ವಸೂಲಿ, ಪ್ರವೇಶ ಮೀಸಲಾತಿಯಲ್ಲಿ ಅನ್ಯಾಯ ಆಗದಂತೆ ಕ್ರಮವಹಿಸಲು ಮುಂದಾಗಬೇಕೆಂಬ ನಿಯಮವಿದ್ದರೂ ಬಹುತೇಕ ಜಿಲ್ಲೆಗಳಲ್ಲಿ ಈ ಸಮಿತಿಯೇ ರಚನೆಯಾಗಿಲ್ಲ. ಹೀಗಾಗಿ ಎಲ್ಲೆ ಇಲ್ಲದೇ ಡೊನೇಷನ್ ವಸೂಲಿ ನಡೆಯುತ್ತಿದೆ. ಪ್ರಾಧಿಕಾರವು ಹಲ್ಲು ಕಿತ್ತ ಹಾವಿನಂತಾಗಿರುವ ಕಾರಣ ಕೆಲವು ಶಿಕ್ಷಣ ಸಂಸ್ಥೆಗಳು ಲಕ್ಷ ರೂ. ವರೆಗೆ ಡೊನೇಷನ್ ವಸೂಲಿ ಮಾಡುತ್ತಿವೆ. ಸರ್ಕಾರ ಇದರ ನಿಯಂತ್ರಣಕ್ಕೆ ಮುಂದಾಗುವುದರ ಬದಲು, ಪರೋಕ್ಷವಾಗಿ ಶಿಕ್ಷಣ ವ್ಯಾಪಾರೀಕರಣಕ್ಕೆ ಮುಂದಾಗುತ್ತಿದೆ ಎಂದು ದೂರಿದರು.

ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರಾರಂಭಿಕ ತರಗತಿಗೆ ಪ್ರವೇಶ ಪರೀಕ್ಷೆಗಳನ್ನು ನಡೆಸಬಾರದು ಎಂದು ಶಿಕ್ಷಣ ಹಕ್ಕು ಕಾಯ್ದೆ 2009 ರ ಸೆಕ್ಷನ್ 13(2)(ಬಿ) ಹೇಳುತ್ತದೆ. ಪ್ರವೇಶ ಪರೀಕ್ಷೆ ನಡೆಸುವ ಶಾಲೆಗಳಿಗೆ 25 ಸಾವಿರ ರೂ ದಂಡ ಹಾಕಬೇಕೆಂದು ಹೇಳಿದೆ. ವಿದ್ಯಾರ್ಥಿಗಳ ಸಂಖ್ಯೆ, ಕಲಿಕಾ ಮಾಧ್ಯಮ, ಶುಲ್ಕದ ವಿವರ, ಕ್ರೀಡಾಂಗಣ, ಶೌಚಾಲಯ, ಶಿಕ್ಷಕರ ಸಂಖ್ಯೆ, ಮುಂತಾದ ಮಾಹಿತಿಯನ್ನು ಶಾಲಾ ಆವರಣದಲ್ಲಿ 10*8 ಸೈಜಿನಲ್ಲಿ ಫೆಕ್ಸ್ ಹಾಕುವುದು ಮತ್ತು ಶಿಕ್ಷಣ ಸಂಸ್ಥೆಯ ನೋಟಿಸ್ ಬೋರ್ಡನಲ್ಲಿ ಪ್ರಕಟಿಸಬೇಕೆಂದು ಹಾಗೂ ಇದೇ ಮಾಹಿತಿಯನ್ನು ಇಲಾಖೆಯ ವೆಬ್ ಸೈಟ್‌ನಲ್ಲಿ ಪ್ರಕಟಿಸಬೇಕೆಂದು ಶಿಕ್ಷಣ ಇಲಾಖೆ ಆದೇಶಿಸಿದೆ ಆದರೆ ಇದನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ಜಾರಿ ಮಾಡಿಲ್ಲ. ಕ್ಷೇತ್ರ ಶಿಕ್ಷಣಾಧಿಕಾರಿಗಳು ಇದನ್ನು ಪರೀಶಿಲಿಸಬೇಕೆಂದು ಹೇಳಿದ್ದರೂ ಕೂಡಾ ಅಧಿಕಾರಿಗಳು ಮೌನ ತಾಳಿದ್ದಾರೆ.

ಡೊನೇಷನ್ ನಿಯಂತ್ರಣಕ್ಕೆ ಜಿಲ್ಲಾ ಮಟ್ಟದಲ್ಲಿ "ಜಿಲ್ಲಾ ಶಿಕ್ಷಣ ರೆಗ್ಯುಲೇಟಿಂಗ್ ಪ್ರಾಧಿಕಾರ' ಹಾಗೂ ತಾಲೂಕಾ ಮಟ್ಟದಲ್ಲಿ "ತಾಲೂಕಾ ಶಿಕ್ಷಣ ರೆಗ್ಯುಲೇಟಿಂಗ್ ಪ್ರಾಧಿಕಾರ" ಗಳನ್ನು ತಕ್ಷಣ ರಚಿಸಬೇಕು. ವಂತಿಗೆ ವಸೂಲಿ ಮಾಡುತ್ತಿರುವ ಶಿಕ್ಷಣ ಸಂಸ್ಥೆಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಜಿಲ್ಲಾಧಿಕಾರಿ, ತಹಶೀಲ್ದಾರರ ನೇತೃತ್ವದಲ್ಲಿ ಶಿಕ್ಷಣ ಸಂಸ್ಥೆ ಮುಖ್ಯಸ್ಥರು, ಶಿಕ್ಷಣ ಇಲಾಖೆ ಮುಖ್ಯಸ್ಥರು, ಪಾಲಕರು ಹಾಗೂ ವಿದ್ಯಾರ್ಥಿ ಸಂಘಟನೆಗಳ ಪ್ರತಿನಿಧಿಗಳ ಜಂಟಿ ಸಭೆಗಳನ್ನು ಕರೆಯಬೇಕು. ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿರುವ "ಕೇಂದ್ರೀಯ ಶಾಸನ" ಜಾರಿಗೆ ತರಬೇಕು. ಸರ್ಕಾರ ನಿಗದಿಗೊಳಿಸಿರುವ ಪ್ರವೇಶ ಶುಲ್ಕದ ವಿವರವನ್ನು ಶಾಲೆಯ ನೋಟಿಸ್ ಬೋರ್ಡಿನಲ್ಲಿ, ಶಾಲೆಯ ಮುಂದೆ 10*8 ಫ್ಲೆಕ್ಸ್ ಹಾಕುವ ಮೂಲಕ, ಮಾಧ್ಯಮಗಳ ಮೂಲಕ ಮತ್ತು ಬಿತ್ತಿಪತ್ರ, ಕರಪತ್ರಗಳ ಮೂಲಕ ಪ್ರಚಾರಪಡಿಸಬೇಕು. ಶಿಕ್ಷಣ ಸಂಸ್ಥೆಗಳು ಪ್ರತಿ ತಿಂಗಳಿಗೊಮ್ಮೆ ಪಾಲಕರ ಸಭೆ ಕರೆದು ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚಿಸುವಂತೆ ನಿರ್ದೇಶಿಸಬೇಕು. ಸರಕಾರಿ ನಿಯಮದಂತೆ ಖಾಸಗಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುವ ಶಿಕ್ಷಕರಿಗೆ ವೇತನ ನೀಡಬೇಕು. ಸರ್ಕಾರದ ನಿಯಮಗಳನ್ನು ಉಲ್ಲಂಘಿಸುವ ಶಿಕ್ಷಣ ಸಂಸ್ಥೆಗಳ ವಿರುದ್ಧ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಜಿಲ್ಲಾಧಿಕಾರಿಗಳು ಕೂಡಲೆ ಖಾಸಗಿ ಶಾಲೆಗಳಲ್ಲಿನ ಮೋಸತನ, ವಂಚನೆಯನ್ನು ಬಯಲಿಗೆಳೆಯಲು ಅಧಿಕಾರಿಗಳ ತಂಡವನ್ನು ರಚಿಸಬೇಕು ಈ ಕುರಿತು ಚರ್ಚಿಸಲು ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿ ಹಾಗೂ ವಿದ್ಯಾರ್ಥಿ ಸಂಗಟನೆಗಳ ಮುಖಂಡರು, ಪೋಷಕರ ಸಂಘಟನೆಗಳ ಮುಖಂಡರ ಜಂಟಿ ಸಭೆಯನ್ನು ಕರೆಯಬೇಕು ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ತೀವತೆರನಾದ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಈ ಮೂಲಕ ಎಚ್ಚರಿಸುತ್ತದೆ ಎಂದರು.

ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ಶಶಿಧರ ನಾಯಕ್, ಜಿಲ್ಲಾ ಮುಖಂಡರಾದ ವಿನಾಯಕ ಯಲಗಚ್ಚ, ವಿರೇಶ ಆನವೇರಿ, ಮಾಲತೇಶ ಕಹಾರ, ಆಕಾಶ ಹಾವನೂರು, ಹಜರತ್ ಅಲಿ ಸವಣೂರು, ಸಚೀನ್, ಕಿರಣ್, ಸುನೀಲ, ಆನಂದ ಪಿ.ಎಚ್, ಮಲ್ಲನಗೌಡ ಪಿ, ಸಚಿನ್ ಹಾಗೂ ನೂರಾರು ವಿದ್ಯಾರ್ಥಿಗಳು ಬಾಗವಹಿಸಿದ್ದರು.

– ಸುಭಾಸ ಎಂ

ಕಾಂಗ್ರೆಸ್‌ನ ತಾತ್ವಿಕ ದಿವಾಳಿಕೋರತನ

ಜಿ.ವಿ. ಶ್ರೀರಾಮರೆಡ್ಡಿ

ಕಳೆದ 3 ತಿಂಗಳಿನಿಂದ ಕರ್ನಾಟಕ ರಾಜ್ಯದಲ್ಲಿನ ಮತ್ತು ವಿಶೇಷವಾಗಿ ಪಂಚರಾಜ್ಯಗಳ ಚುನಾವಣಾ ಫಲಿತಾಂಶಗಳ ನಂತರದ ಬೆಳವಣಿಗೆಗಳನ್ನು ನೋಡಿದರೆ ಕಾಂಗ್ರೆಸ್ ಪಕ್ಷದ ಸೈದ್ಧಾಂತಿಕ ದಿವಾಳಿಕೋರತನದ ನಗ್ನ ಪ್ರದರ್ಶನವಾಗುತ್ತಿದೆ. ಏಪ್ರಿಲ್ 2ರ ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿಯಂತೂ ಕಾಂಗ್ರೆಸ್ಸಿನ ಸೈದ್ಧಾಂತಿಕ ದಿವಾಳಿ ಕೋರತನದ ಪರಮಾವಧಿಯನ್ನು ತೋರಿಸಿದೆ. ಹಿರಿಯ ಕಾಂಗ್ರೆಸ್ ನಾಯಕ ಜಾಫರ್ ಷರೀಫ್ ಅವರು ಆರ್.ಎಸ್.ಎಸ್.ನ ಮುಖ್ಯಸ್ಥ ಮೋಹನ್ ಭಾಗವತ್ ರವರನ್ನು ದೇಶದ ಅಧ್ಯಕ್ಷ ಸ್ಥಾನಕ್ಕೆ ಅತ್ಯಂತ ಅರ್ಹ ವ್ಯಕ್ತಿ ಎಂದು ಬಣ್ಣಿಸಿ ಅವರನ್ನು ರಾಷ್ಟ್ರಪತಿ ಮಾಡಬೇಕೆಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಒಂದು ಪತ್ರವನ್ನು ಬರೆದಿದ್ದಾರೆ. ಇದಕ್ಕೆ ಎರಡು ದಿವಸ ಮೊದಲು ಮತ್ತೊಬ್ಬ ಹಿರಿಯ ಕಾಂಗ್ರೆಸ್ ಮುಖಂಡ ರಾಜಶೇಖರ ಮೂರ್ತಿಯವರು ಪ್ರಧಾನಿ ನರೇಂದ್ರ ಮೋದಿಯವರನ್ನು ಪ್ರಶಂಸಿಸಿ ಬರೆದಿದ್ದ ಒಂದು ಪತ್ರಕ್ಕೆ ಉತ್ತರವಾಗಿ ಅವರನ್ನು ಅಭಿನಂದಿಸಿ ಧನ್ಯವಾದದ ಪತ್ರವನ್ನು ಮೋದಿಯವರು ಬರೆದಿದ್ದಾರೆಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ. ಇದಕ್ಕೆ ಕೆಲವು ದಿವಸಗಳ ಮೊದಲು ಮಾಜಿ ಕೇಂದ್ರ ಮಂತ್ರಿ ಹಿರಿಯ ಕಾಂಗ್ರೆಸ್ ಮುಖಂಡ ಪಿ.ಚಿದಂಬರಂ ಅವರು ನರೇಂದ್ರ ಮೋದಿಯವರು ಅತ್ಯಂತ ಜನಪ್ರಿಯ ಮುಖಂಡರಾಗಿ ಹೊರ ಹೊಮ್ಮಿದ್ದಾರೆಂದು ಹೇಳಿಕೆಯನ್ನು ಕೊಟ್ಟಿದ್ದಾರೆ.

ಕೃಷ್ಣ, ಷರೀಫ್ ಪ್ರಕರಣಗಳು

ಕಳೆದ ತಿಂಗಳ ಪ್ರಾರಂಭದಲ್ಲಿ ಕಾಂಗ್ರೆಸ್ಸಿನ ಹಿರಿಯ ಮುಖಂಡರು 84 ವರ್ಷದ ವಯೋವೃದ್ಧರು ಆದ ಎಸ್.ಎಂ. ಕೃಷ್ಣರವರು ಬಿಜೆಪಿ ಪಕ್ಷದ ತೀರ್ಥವನ್ನು ಪಡೆದು ಆ ಪಕ್ಷಕ್ಕೆ ಸೇರ್ಪಡೆ ಆದರು. ಈ ಎಲ್ಲಾ ಬೆಳವಣಿಗೆಗಳು ಕೇವಲ ರಾಜಕೀಯ ಅಧಿಕಾರವನ್ನು ಪಡೆಯುವುದಕ್ಕಾಗಿ ಮಾತ್ರ ನಡೆಯುತ್ತಿದೆ ಎಂದು ಯಾರಾದರು ಭಾವಿಸಿದರೆ ಅದು ಅರ್ಧ ಸತ್ಯವಾಗುತ್ತದೆ.
ಕಾಂಗ್ರೆಸ್ ಪಕ್ಷದ ಇತಿಹಾಸವನ್ನು ಅಭ್ಯಾಸ ಮಾಡಿದ ಯಾರಿಗಾದರೂ ಕಾಂಗ್ರೆಸ್ಸ್‌ನಲ್ಲಿನ ಈ ಬೆಳವಣಿಗೆಗಳು ಅಶ್ಚರ್ಯವನ್ನೇನು ಉಂಟು ಮಾಡುವುದಿಲ್ಲ. ಬದಲಿಗೆ, ಇದರ ಅಧಃಪತನದ ಮಟ್ಟವು ಯಾವ ಪ್ರಮಾಣಕ್ಕೆ ಇಳಿದಿದೆ ಎಂಬುದು ಅರ್ಥವಾಗುತ್ತದೆ. ಅದರಲ್ಲೂ 1930ರ ನಂತರ ಕಾಂಗ್ರೆಸ್ಸ್‌ನಲ್ಲಿನ ಬೆಳವಣಿಗೆಗಳನ್ನು ಗಮನಿಸಿದರೆ, ಕಾಂಗ್ರೆಸ್ ಎಂದೂ ಜಾತ್ಯತೀತತೆಯ ಬಗೆಗೆ ಕೂಡಾ ಒಂದು ನಿರ್ದಿಷ್ಟ ಸೈದ್ಧಾಂತಿಕ ಸ್ಪಷ್ಟತೆಯನ್ನು ಪಡೆದಿರಲಿಲ್ಲ. ಬದಲಿಗೆ ನಿರಂತರವಾಗಿ ತನ್ನ ಸೈದ್ಧಾಂತಿಕ ಗೊಂದಲಗಳನ್ನು ಮತ್ತು ದಿವಾಳಿಕೋರತನವನ್ನು ಪ್ರದರ್ಶಿಸುತ್ತಾ ಬಂದಿದೆ. ಕನಿಷ್ಟ 1930ರ ನಂತರದ ಅದರ ಇತಿಹಾಸವನ್ನು ಅಭ್ಯಾಸ ಮಾಡಿದರೆ, ಇಂದಿನ ಕಾಂಗ್ರೆಸ್‌ನ ಬೆಳವಣಿಗೆಗಳು ಆಶ್ಚರ್ಯವನ್ನೇನೂ ಉಂಟುಮಾಡುವುದಿಲ್ಲ. ಬದಲಿಗೆ ಅದು ಬಂದು ಮುಟ್ಟಿರುವ ಸೈದ್ಧಾಂತಿಕ ದಿವಾಳಿತನದ, ಅಧಃಪತನದ ಮಟ್ಟವು ಅರ್ಥವಾಗುತ್ತಿದೆ.

ಕಾಂಗ್ರೆಸ್ ತನ್ನ ಇತಿಹಾಸದ ಉದ್ದಕ್ಕೂ ತನ್ನ ಪ್ರತಿಗಾಮಿತನದ ಸೈದ್ಧಾಂತಿಕ ದಿವಾಳಿಕೋರತನವನ್ನು ಪ್ರದರ್ಶಿಸುತ್ತಾ ಬಂದಿದೆ. 1929ರಲ್ಲಿ ಲಾಹೋರ್‌ನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಭಗತ್‌ಸಿಂಗ್ ಮತ್ತು ಆತನ ಸಂಗಾತಿಗಳಿಗೆ ಬ್ರಿಟಿಷ್ ಸರ್ಕಾರ ವಿಧಿಸಿದ್ದ ಗಲ್ಲು ಶಿಕ್ಷೆಯನ್ನು ರದ್ದು ಪಡಿಸಬೇಕೆಂದು ನೆಹರು ಮುಂತಾದವರು ನಿರ್ಣಯವನ್ನು ಮಂಡಿಸಿದಾಗ ಸ್ವತಃ ಗಾಂಧಿಯವರೇ ವಿರೋ ಧ ಮಾಡಿದರು. ಅದೇ ರೀತಿಯಲ್ಲಿ ಸ್ವಾತಂತ್ರ ಪೂರ್ವದಲ್ಲಿ ವಿಶೇಷವಾಗಿ 1930ರ ನಂತರ (ಆರ್.ಎಸ್.ಎಸ್ ಸ್ಥಾಪನೆ ಆಗಿದ್ದು 1925, ಹಿಂದೂ ಮಹಾಸಭಾ ಪ್ರಾರಂಭವಾಗಿದ್ದು 1915) ದೇಶದಲ್ಲಿ ಹಿಂದು ಕೋಮುವಾದ ಬೆಳೆಯಲು ಸ್ವತಃ ಕಾಂಗ್ರೆಸ್ ಯಾವ ರೀತಿಯಲ್ಲಿ ಸಹಾಯ ಮಾಡಿದೆ ಎಂಬುದಕ್ಕೆ ಕೆಲವು ಘಟನೆಗಳು ಉದಾಹರಣೆಯಾಗಿ ತೆಗೆದುಕೊಂಡರೆ ಕಾಂಗ್ರೆಸ್ಸಿನ ಸೈದ್ಧಾಂತಿಕ ಸೋಗಲಾಡಿತನ ಅರ್ಥವಾಗುತ್ತದೆ.

ಬಿಹಾರ, ಬಾಂಬೆ ಮುಖ್ಯಮಂತ್ರಿ ಆಯ್ಕೆ

1935ರ ಬ್ರಿಟಿಷ್ ಕಾಯ್ದೆಯ ಅನ್ವಯ ಮೊದಲ ಬಾರಿಗೆ ದೇಶದಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಬಹುತೇಕ ಪ್ರಾಂತಗಳಲ್ಲಿ ಸ್ಪಷ್ಟ ಬಹುಮತ ಬಂದಿತ್ತು. ಅದರಲ್ಲಿ ಬಹಳ ಮುಖ್ಯವಾಗಿ ಬಾಂಬೆ ಮತ್ತು ಬಿಹಾರ ಪ್ರಾಂತಗಳಲ್ಲಿ ಬಹುಮತ ಪಡೆದ ಕಾಂಗ್ರೆಸ್ ಪಕ್ಷ, ಮುಖ್ಯಮಂತ್ರಿಗಳ ಆಯ್ಕೆಯ ವಿಚಾರದಲ್ಲಿ ತಾನೊಂದು ರಾಷ್ಟ್ರೀಯ ಮತ್ತು ಜಾತ್ಯಾತೀತ ಪಕ್ಷವೆಂದು ತೋರಿಸಿಕೊಡುವುದರಲ್ಲಿ ಸಂಪೂರ್ಣವಾಗಿ ವಿಫಲವಾಯಿತೆಂದು ಸ್ವತಃ ಕಾಂಗ್ರೆಸಿನ ಅತ್ಯಂತ ಹಿರಿಯ ಗೌರವಾನ್ವಿತ ನಾಯಕರಾದ ಮೌಲಾನ ಆಬುಲ್ ಕಲಾಂ ಅಜಾದ್ ಅವರು ಬರೆದಿರುವ "ಇಂಡಿಯಾ ವಿನ್ಸ್ ದಿ ಫ್ರೀಡಂ" ಪುಸ್ತಕದಲ್ಲಿ ಅತ್ಯಂತ ಕಳವಳ ಮತ್ತು ಬೇಸರವನ್ನು ವ್ಯಕ್ತಪಡಿಸಿದ್ದಾರೆ. ಎರಡೂ ಪ್ರಾಂತದಲ್ಲಿ ಮುಖ್ಯಮಂತ್ರಿಗಳ ಆಯ್ಕೆ ಪ್ರಶ್ನೆ ಬಂದಾಗ ಬಾಂಬೆ ಪ್ರಾಂತದ ಎಲ್ಲರ ನಿರೀಕ್ಷೆ ಇದ್ದದ್ದು ಆ ಪ್ರದೇಶದ ಅತ್ಯಂತ ಪ್ರಭಾವಶಾಲಿಯಾಗಿದ್ದಂತಹ ಖುರ್ಷಿದ್ ನಾರಿಮನ್ ಅವರು ಮುಖ್ಯಮಂತ್ರಿಯಾಗುತ್ತಾರೆಂದು. ಆದರೆ ಕಾಂಗ್ರೆಸ್ಸಿನಲ್ಲಿ ಇದ್ದ ಬಹುಸಂಖ್ಯಾತ ಹಿಂದು ಶಾಸಕರು ಮತ್ತು ಸರ್ದಾರ್ ವಲ್ಲಬಾಯಿ ಪಟೇಲರು ಹಿಂದುಗಳ ಭಾವನೆಗೆ ದಕ್ಕೆಯಾಗುತ್ತದೆ ಎಂದು ಹೇಳಿ ನಾರಿಮನ್ ಬದಲಿಗೆ ಬಿ.ಜಿ. ಖೇರ್‌ರವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲಾಯ್ತು. ಅದೇ ರೀತಿಯಲ್ಲಿ ಬಿಹಾರ ಪ್ರಾಂತದ ಮುಖ್ಯ ಮಂತ್ರಿ ಆಯ್ಕೆ ಮಾಡುವ ಪ್ರಶ್ನೆಯಲ್ಲಿ ಆ ಪ್ರದೇಶದ ಅತ್ಯಂತ ಪ್ರಭಾವ ಶಾಲಿ ಮುಖಂಡರಾಗಿದ್ದ ಡಾ॥ ಸೈಯದ್ ಮಹ್ಮದ್ ಅವರು ಮುಖ್ಯಮಂತ್ರಿ ಆಗುತ್ತಾರೆ- ಂದು ಜನರ ನಿರೀಕ್ಷೆ ಇತ್ತು. ಆದರೆ ಅಲ್ಲೂ ಸಹ ಬಹುಸಂಖ್ಯಾತ ಹಿಂದುಗಳಿಗೆ ನೋವಾಗ ಬಾರದೆಂದು ಆಗಿನ ಕೇಂದ್ರ ಶಾಸನ ಸಭೆಯಲ್ಲಿ ಸದಸ್ಯರಾಗಿದ್ದ ಕೃಷ್ಣ ಸಿನ್ಹಾ ಮತ್ತು ಅನುರಾಗ ನಾರಾಯಣ ಸಿನ್ಹ ಅವರನ್ನು ಕರೆತರಲಾಯ್ತು. ಬಾಂಬೆ ಪ್ರಾಂತದಲ್ಲಿ ಸರ್ದಾರ್ ಪಟೇಲ್ ಅವರು ವಹಿಸಿದಂತಹ ಪಾತ್ರವನ್ನು, ಬಿಹಾರದಲ್ಲಿ ಬಾಬು ರಾಜೇಂದ್ರಪ್ರಸಾದ್ ಅವರು ವಹಿಸಿದ್ದರು. ಆದರೆ ಒಂದೇ ವ್ಯತ್ಯಾಸವೆಂದರೆ ಬಿಹಾರದಲ್ಲಿ ರಚನೆ ಆದ ಕೃಷ್ಣ ಸಿನ್ಹರ ಮಂತ್ರಿ ಮಂಡಲದಲ್ಲಿ ಡಾ। ಸೈಯದ್ ಮಹ್ಮದ್ ರನ್ನು ಮಂತ್ರಿಯನ್ನಾಗಿ ಸೇರಿಸಿದರು. ಈ ಘಟನೆಗಳ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಆಜಾದರು ಕಾಂಗ್ರೆಸ್ ಒಂದು ಜಾತ್ಯಾತೀತ ರಾಷ್ಟ್ರೀಯತೆಯನ್ನು ಮೈಗೂಡಿಸಿಕೊಳ್ಳಲು ಸಾಧ್ಯವಾಗಲಿಲ್ಲವೆಂದು ವಿಷಾದವನ್ನು ವ್ಯಕ್ತಪಡಿಸಿದ್ದಾರೆ.

ಹಿಂದೂ ಮಹಾಸಭೆಯ ಮಿಲಿಟರಿ ತರಬೇತಿಗೆ ಕಾಂಗ್ರೆಸ್ ಕುಮ್ಮಕ್ಕು

1937 ರಲ್ಲಿ ಹಿಂದೂ ಮಹಾಸಭಾ ಬಾಂಬೆ ಪ್ರಾಂತದಲ್ಲಿ ಹಿಂದುಗಳಿಗೆ ಮಿಲಿಟರಿ ತರಭೇತಿಯನ್ನು ನೀಡುವ ಸಲುವಾಗಿ ಒಂದು ಶಾಲೆಯನ್ನು ತೆರೆಯಲು ಆಗಿನ ಸರ್ಕಾರದಿಂದ ಅನುಮತಿಯನ್ನು ಪಡೆದಿತ್ತು. ಮುಸ್ಲಿಮರ ವಿರುದ್ಧ ಯುದ್ಧ ಮಾಡಲು ಇಂತಹ ತರಬೇತಿ ಆವಶ್ಯ ಎಂಬುದು ಹಿಂದೂ ಮಹಾಸಭಾದ ಮುಖಂಡರ ತೀರ್ಮಾನವಾಗಿತು. (ಇದಕ್ಕೆ ಬ್ರಿಟಿಷರ ಅಂದಿನ ಸರ್ಕಾರದ ಬೆಂಬಲವಿತ್ತು ಎಂಬುದು ಪ್ರತ್ಯೇಕ) ಆದರೆ ಇದೇ ರೀತಿಯಲ್ಲಿ ಹಿಂದೂ ವಿದ್ಯಾರ್ಥಿಗಳಿಗೆ ಮಿಲಿಟರಿ ತರಭೇತಿಯನ್ನು ನೀಡಲು ಹಿಂದು ಶಾಲೆಗಳಿಗೆ ಅನುಮತಿ ನೀಡುವ ಕಾನೂನನ್ನು ಮಾಡಿದ್ದು 1937ರಲ್ಲಿ, ಕೇಂದ್ರ ಪ್ರಾಂತದ ಕಾಂಗ್ರೆಸ್‌ನ ಮುಖ್ಯಮಂತ್ರಿ ಆಗಿ ಎನ್.ಬಿ. ಖರೆ ಅವರು ಎನ್ನುವುದು ಇಲ್ಲಿ ಬಹಳ ಮುಖ್ಯ. ಇವರು ಅಧಿಕಾರ ವಹಿಸಿಕೊಂಡ ತಕ್ಷಣ ಮಾಡಿದ ಕೆಲಸವಿದು. ಇಂತಹ ಒಂದು ಶಾಲೆಯನ್ನು 1937 ಜೂನ್ ತಿಂಗಳ 21ನೇ ತಾರಿಖು ಕುರ್ತ-ಕೋಟೆ ಶಂಕರಾಚಾರ್ಯರು ಉದ್ಘಾಟನೆ ಮಾಡಿದರು. ಮುಖ್ಯಮಂತ್ರಿ ಖರೆ ಅವರು ಈ ನೀತಿಯನ್ನು ಬಹಳ ಪ್ರಬಲವಾಗಿ ಸಮರ್ಥಿಸಿಕೊಂಡರು. ಮಾತ್ರವಲ್ಲ, ಕಾಲೇಜುಗಳಲ್ಲೂ ಈ ರೀತಿ ತರಬೇತಿಗಳನ್ನು ನಡೆಸಲು ಅನುಮತಿ ನೀಡುವುದು ಕಷ್ಟವೇನಲ್ಲ ಎಂದು ಪ್ರಶ್ನೆ



ಕೃಪೆ: ಪಿ. ಮಹಮ್ಮದ್, ವಿಜಯ ಕರ್ನಾಟಕ

ಒಂದಕ್ಕೆ ಉತ್ತರಿಸಿದರು. ಮುಖ್ಯಮಂತ್ರಿ ಖೇರ್‌ರವರು ಮಿಲಿಟರಿ ತರಭೇತಿಗೆ ನೀಡಿದ ಪರವಾನಿಗೆಯನ್ನು ಸೆಪ್ಟಂಬರ್ 21, 1938 ರಲ್ಲಿ ಸಾವರ್ಕರ್‌ರವರು ಎಲ್ಲರಿಗೆ ಹಂಚಿದರು.

ಇದೇ ರೀತಿಯಲ್ಲಿ ಈಗಿನ ಉತ್ತರ ಪ್ರದೇಶ (ಆಗಿನ ಸಂಯುಕ್ತ ಪ್ರಾಂತ)ದ ಪಶ್ಚಿಮ ಜಿಲ್ಲೆಗಳಲ್ಲಿ ಮುಸ್ಲಿಮರ ಹತ್ಯಾಕಾಂಡವನ್ನು ಸ್ವತಃ ಎಂ.ಎಸ್. ಗೊಲ್ವಾಲಕರ್‌ರವರೇ ನಡೆಸಿದ್ದಾರೆಂದು ಆಗಿನ ಅಲ್ಲಿನ ಸರ್ಕಾರ ಗುಪ್ತಚರ ಇಲಾಖೆಯ ವರದಿಯ ಆದ-ಾರದ ಮೇಲೆ, ಆ ಪ್ರಾಂತದ ಅಂದಿನ ಮುಖ್ಯಮಂತ್ರಿ ಪಂಡಿತ ಗೋವಿಂದ ವಲ್ಲಭ ಪಂತ ಅವರಿಗೆ ಅವರದೇ ಸರ್ಕಾರದ ಗೃಹಖಾತೆ ಕಾರ್ಯದರ್ಶಿ ರಾಜೇಶ್ವರ ದಯಾಳ್ ಮತ್ತು ಹಿರಿಯ ಪೊಲೀಸ್ ಅಧಿಕಾರಿ ಬಿ.ಬಿ.ಎಲ್ ಜೈಟ್ಲೆ ಅವರು ವರದಿಯನ್ನೂ ಕೊಟ್ಟು ತಕ್ಷಣ ಗೊಲ್ವಾಲಕರ್‌ರನ್ನು ಬಂಧಿಸಲು ಅನುಮತಿ ಕೇಳಿದರು. ಆದರೆ ಪಂತ್ ಅವರು ಅವರಿಗೆ ಅನುಮತಿ ಕೊಡುವುದರ ಬದಲಿಗೆ ತನ್ನ ಮಂತ್ರಿಮಂಡಲದಲ್ಲಿ ದೀರ್ಘಕಾಲ ಚರ್ಚೆ ನಡೆಸಿ ಗೊಲ್ವಾಲಕರ್‌ಗೆ ವಿವರ ಕೇಳಿ ನೋಟಿಸ್ ನೀಡಲು ತೀರ್ಮಾನಿಸಿದರು.

ಅದೇ ರೀತಿಯಲ್ಲಿ ಆಳ್ವಾರದ ಪ್ರಾಂತದಲ್ಲಿ ಸುಮಾರು 82 ಸಾವಿರ ಮುಸ್ಲಿಮರ ಹತ್ಯಾಕಾಂಡಕ್ಕೆ ಆ ಪ್ರದೇಶಗಳ ಸೈನಿಕರನ್ನು ಮುಂದುಮಾಡಿ ಮುಖ್ಯಮಂತ್ರಿ (ಕೇಂದ್ರ ಪ್ರಾಂತದ ಕಾಂಗ್ರೆಸ್ ಮಾಜಿ ಮು.ಮಂ.) ಎನ್.ಬಿ. ಖರೆ ಅವರು ನಡೆಸಿರುವುದು ಒಂದು ಕ್ರೂರ ವಾಸ್ತವ. ಮತ್ತು ಆಗ ಕೇಂದ್ರದಲ್ಲಿದ್ದ ಮಧ್ಯಂತರ ಸರ್ಕಾರದ ಗೃಹಮಂತ್ರಿ ಸರ್ದಾರ್ ಪಟೇಲರು ಆಗಿದ್ದರು ಎಂಬುದು ವಿಪರ್ಯಾಸವಾಗಿದೆ. 1941ರ ಜುಲೈ 1 ರಂದು ಸಭೆ ಸೇರಿದ್ದ ಹಿಂದು ಮಹಾ ಸಭೆಯ ಅಧ್ಯಕ್ಷತೆಯನ್ನು ಹಿರಿಯ ಕಾಂಗ್ರೆಸ್ ಮುಖಂಡರಾಗಿದ್ದ ಮದನ್ ಮೋಹನ್ ಮಾಳವಿಯ ವಹಿಸಿದ್ದರು. ಆ ಸಭೆಯಲ್ಲಿ ಹಿಂದೂ ಮಹಾ ಸಭಾದ ಪ್ರಮುಖ ಮುಖಂಡರಾದ ಡಾ॥ ಶ್ಯಾಮ ಪ್ರಸಾದ ಮುಖರ್ಜಿ. ಡಾ। ಬಿ.ಎಸ್. ಮೂಂಜೆ ಮತ್ತು ಜೆ.ಪಿ. ಶ್ರೀವಾತ್ಸವ ಅವರು ಭಾಗವಹಿಸಿದ್ದರು. ಈ ಸಭೆಯಲ್ಲಿ ಚರ್ಚಿಸಲಾದ ಮುಖ್ಯ ವಿಷಯ ಬ್ರಿಟಿಷರ ಸೈನ್ಯದಲ್ಲಿ ಹೆಚ್ಚಿನ ಹಿಂದುಗಳನ್ನು ಸೇರಿಸುವುದರ ಮುಖಾಂತರ ಸ್ವಾತಂತ್ರವನ್ನು ಪಡೆಯಲು ಸಾದ-್ಯ ಎಂಬುದು, 1946–1948 ರಲ್ಲಿ ಭಾರತ ಪಾಕಿಸ್ತಾನ ಇಬ್ಭಾಗದ ಸಂದರ್ಭದಲ್ಲಿ ನಡೆದ ಹತ್ಯಾಕಾಂಡಕ್ಕೆ ಹಿಂದೂ ಮಹಾಸಭಾದ ಕಾರ್ಯಕರ್ತರಿಗೆ ಆಯುಧಗಳು ದೊರೆಯುವಂತಾಗಲು ಕಾಂಗ್ರೆಸ್ಸಿನಲ್ಲಿದ ಹಿಂದುಮಹಾಸಭಾದ ಸಹಾನುಭೂತಿಪರರು ಮತ್ತು ವಿವಿಧ ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿದ್ದ ರಾಜಮಹಾರಾಜರು ಎಂದು ಕಣ್ಣವನ್ ಶ್ರೀನಿವಾಸನ್‌ರವರು ತಮ್ಮ "ಜನಾಂಗೀಯ ಫ್ಯಾಸಿಸಂ" ಎಂಬ ಲೇಖನದಲ್ಲಿ ಸ್ಪಷ್ಟ ಪಡಿಸಿದ್ದಾರೆ.

ಹೀಗೆ ಕಾಂಗ್ರೆಸ್ ಪಕ್ಷ ಕೋಮುವಾದದ ಬಗ್ಗೆ ಮೃದು ಧೋರಣೆಯನ್ನು ಅನುಸರಿಸುತ್ತಾ ಬಂದಿದೆ ಮತ್ತು ಹಲವಾರು ಸಂದರ್ಭದಲ್ಲಿ ರಾಷ್ಟ್ರೀಯ ಮತ್ತು ಜಾತ್ಯಾತೀತ ತತ್ವಗಳಿಗೆ ತಿಲಾಂಜಲಿಯನ್ನು ಇಟ್ಟಿದೆ.

ಬಾಬ್ರಿ ಮಸೀದಿ ಧ್ವಂಸ ನೋಡುತ್ತಾ ಕುಳಿತ ಕಾಂಗ್ರೆಸ್


ಸ್ವಾತಂತ್ರ್ಯ ನಂತರ ಸಹ ಕೋಮುವಾದದ ವಿರುದ್ಧ ಅದರಲ್ಲು ಮುಖ್ಯವಾಗಿ ಆರ್.ಎಸ್.ಎಸ್. ಮತ್ತು ಸಂಘ ಪರಿವಾರದ ಹಿಂದುತ್ವವಾದವನ್ನು ನಿರ್ಣಾಯಕವಾಗಿ ಸೋಲಿಸಲು, ಸೈದ್ಧಾಂತಿಕ ಹೋರಾಟವನ್ನು ನಡೆಸಲಿಲ್ಲ. ಅಥವಾ ಅದು ಅಧಿಕಾರದಲಿದ್ದ ರಾಜ್ಯಗಳಲ್ಲಿ ಆಡಳಿತಾತ್ಮಕ ಕ್ರಮಗಳಿಂದಾಗಲೂ ಕೋಮುವಾದದ ಬೆಳವಣಿಗೆ ತಡೆಯಲಿಲ್ಲ. ಬದಲಿಗೆ ಹಲವಾರು ಸಂದರ್ಭಗಳಲ್ಲಿ ತಾನೇ ಕೋಮುವಾದಿಗಳ ಜೊತೆ ಕೈಜೋಡಿಸಿದೆ ಮತ್ತು ಹಿಂದು ಕೋಮುವಾದಕ್ಕೆ ಎಡೆಮಾಡಿ ಕೊಟ್ಟಿದೆ. ಉದಾರಣೆಗೆ, 1970 ರ ಲೋಕಸಭಾ ಚುನಾವಣೆಯಲ್ಲಿ ಮಹಾರಾಷ್ಟ್ರದಲ್ಲಿ ಶಿವಸೇನೆಯೊಂದಿಗೆ ಒಪ್ಪಂದವನ್ನು ಮಾಡಿಕೊಂಡಿದ್ದು. ಹಾಗೆ 1975 ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ದೆಹಲಿಯ ತುಘ್ಲಕ್‌ಮನ್ ಗೇಟ್ ಪ್ರದೇಶಧಲ್ಲಿ ಮುಸ್ಲಿಮರ ಮನೆಗಳ ಧ್ವಂಸ, ಬಲವಂತದ ಸಂತಾನಹರಣ ಶಸ್ತ್ರಚಿಕಿತ್ಸೆ ಕ್ರಮದಲ್ಲೂ ವಿಶೇಷವಾಗಿ ಮುಸ್ಲಿಮರ ಮೇಲೆ ಟಾರ್ಗೆಟ್ ಮಾಡಿದ್ದು ಕಾಂಗ್ರೆಸಿನ ಒಳಗನೇ ಹಿಂದೂ ಕೋಮುವಾದದ ವಿಷ ತುಂಬಿತ್ತು ಎಂದು ತೋರಿಸುತ್ತದೆ. ಅದು ಸಂಘಪರಿವಾರದ ಹಿಂದೂ ಕೋಮುವಾದಕ್ಕೂ ಇಂಬುಕೊಟ್ಟಿತ್ತು. ಅದೇ ರೀತಿಯಲ್ಲೇ ಇಂದಿನ ರಾಮಜನ್ಮ ಭೂಮಿಯ ವಿವಾದಕ್ಕೆ ಪ್ರಾರಂಭದಿಂದಲೂ ಕಾಂಗ್ರೆಸ್ ಅನುಸರಿಸಿ ಕೊಂಡು ಬಂದ ನೀತಿಗಳೇ ಕಾರಣ. ವಿವಾದ ಗ್ರಸ್ತ ರಾಮಮಂದಿರಕ್ಕೆ ಯಾರು ಪ್ರವೇಶ ಮಾಡಬಾರದೆಂದು, ಬ್ರಿಟಿಷ್ ಸರಕಾರ ಆದೇಶ ಹೊರಡಿಸಿ ಬೀಗ ಹಾಕಿಸಿತ್ತು. 1989 ರ ರಾಜೀವಗಾಂಧಿ ಪ್ರಧಾನ ಮಂತ್ರಿಯಾಗಿದ್ದಾಗ ಸಂದರ್ಭದಲ್ಲಿ ಆ ಆದೇಶವನ್ನು ತೆರವುಗೊಳಿಸಿದ್ದಷ್ಟೇ ಅಲ್ಲದೆ ತಮ್ಮ ಲೋಕಸಭಾ ಚುನಾವಣೆಯ ಪ್ರಚಾರವನ್ನು ಅಯೋಧ್ಯೆಯಿಂದಲೇ ಪ್ರಾರಂಭಿಸಿದರು. ಅಷ್ಟೇ ಅಲ್ಲದೆ ಅದೇ ಸಂದರ್ಭದಲ್ಲಿ ಮುಸ್ಲಿಂ ಸಮುದಾಯವನ್ನು ಸಂತೃಪ್ತಿಪಡಿಸಲು ಮುಸ್ಲಿಮರ ವಯಕ್ತಿಕ ಕಾನೂನು (ಶರಿಯತ್)ಗೆ ಸಂವಿಧಾನ ತಿದ್ದುಪಡಿಯನ್ನು ತಂದುದು ಹಿಂದು ಕೋಮುವಾದಕ್ಕೆ ಪ್ರೇರಣೆಯಾಯ್ತು.

ಕಾಂಗ್ರೆಸ್ಸಿನ ಅತಿ ದೊಡ್ಡ ದುರಂತವೆಂದರೆ, 1992ರಲ್ಲಿ ಎಲ್.ಕೆ. ಅದ್ವಾನಿಯವರ ನೇತೃತ್ವದ ರಥಯಾತ್ರೆ ಮೂಲಕ ಅಯೋಧ್ಯೆಗೆ ಬಂದು ಡಿಸೆಂಬರ್ 6 ರಂದು ಬಾಬ್ರಿ ಮಸೀದಿಯನ್ನು ಸಂಘಪರಿವಾರದ ಸಂಘಟನೆಗಳು ಧ್ವಂಸ ಮಾಡಿದಾಗ ಕಾಂಗ್ರೆಸ್ ನೇತೃತ್ವದ ನರಸಿಂಹರಾವ ಸರ್ಕಾರ ಕೇಂದ್ರದಲ್ಲಿ ಅಧಿಕಾರದಲ್ಲಿ ಇತ್ತು. ಆದರೆ ಪಿ.ವಿ. ನರಸಿಂಹರಾವ್ ಸರ್ಕಾರ ಬಾಬ್ರಿ ಮಸೀದಿ ನಾಶವನ್ನು ತಡೆಯುವ ಯಾವ ಪ್ರಯತ್ನವನ್ನೂ ಮಾಡಿಲ್ಲ. ಬದಲಿಗೆ ಬಾಬ್ರಿ ಮಸೀದಿಯನ್ನು ಕೆಡಹುವ ದೃಶ್ಯಗಳನ್ನು ದೂರದರ್ಶನದಲ್ಲಿ ನೋಡುತ್ತಾ ಕುಳಿತಿದ್ದರು. ಇದರ ಪರಿಣಾಮವಾಗಿಯೇ ಕೋಮುಶಕ್ತಿಗಳಿಗೆ ದೈತ್ಯ ರಾಜಕೀಯ ಶಕ್ತಿ ಬರಲು ಸಾಧ್ಯವಾಯ್ತು. ಬಿಜೆಪಿ ರಾಜಕೀಯ ಶಕ್ತಿ ವಿಜೃಂಬಿಸಿತು. ಇದು ಕಾಂಗ್ರೆಸ್

ಪುಟ 11 ಕ್ಕೆ

ವಿಧಾನಸಭಾ ಚುನಾವಣೆಗಳು 2017 ಮತ್ತು ನಂತರ

ಬಹುನಿರೀಕ್ಷಿತ 2017ರ ವಿಧಾನಸಭಾ ಚುನಾವಣೆಗಳ ಫಲಿತಾಂಶಗಳು ಬಂದು ಐದು ರಾಜ್ಯಗಳಲ್ಲಿ ಹೊಸ ಸರಕಾರಗಳು ರಚನೆಗೊಂಡಿವೆ. ಇವು ಎಲ್ಲರನ್ನು ಜತೆಗೊಯ್ಯುವ ಸರಕಾರಗಳು, ಈ ಮೂಲಕ ನವ ಭಾರತ ಮೂಡಿಬರುತ್ತಿದೆ ಎಂದಿದ್ದಾರೆ ಮಾನ್ಯ ಪ್ರಧಾನ ಮಂತ್ರಿಗಳು ಉತ್ತರಪ್ರದೇಶದಲ್ಲಿ 'ಅಭೂತಪೂರ್ವ' ಗೆಲುವು ಪಡೆದ ಹುರುಪಿನಲ್ಲಿ. ಈ ಸರಕಾರಗಳು ರಚನೆಗೊಂಡ ರೀತಿ ಮತ್ತು ನಂತರದ ಘಟನೆಗಳು ಇದನ್ನು ಸಮರ್ಥಿಸುತ್ತವೆಯೇ? ಕಳೆದ ವಾರ ಉತ್ತರಪ್ರದೇಶ, ಉತ್ತರಾಖಂಡ ಮತ್ತು ಪಂಜಾಬನನು ಕುರಿತು ಪರಿಶೀಲಿಸಲಾಗಿತ್ತು. ಉಳಿದೆರಡು ರಾಜ್ಯಗಳ ನೋಟ ಇಲ್ಲಿದೆ.



ಮಣಿಪುರ ಮತ್ತು ಗೋವ: ಮತದಾರರು ತಿರಸ್ಕರಿಸಿದರೂ ಬಿಜೆಪಿ ಸರಕಾರಗಳು

ಈಶಾನ್ಯ ರಾಜ್ಯ ಮಣಿಪುರದಲ್ಲಿ ಮತ್ತು ಪಶ್ಚಿಮ ತಟದ ಗೋವದಲ್ಲಿ ಸರಕಾರಗಳನ್ನು ರಚಿಸುವ ಬಿಜೆಪಿಯ ಆಶಯವನ್ನು ಅಲ್ಲಿನ ಜನತೆ ಸ್ಪಷ್ಟವಾಗಿ ತಿರಸ್ಕರಿಸಿದರು. ಆದರೂ ಎರಡೂ ಕಡೆ ಬಿಜೆಪಿ ಕೃಪೆಯಿಂದ ರಾಜ್ಯಪಾಲರಾಗಿ ನೇಮಕಗೊಂಡಿರುವ ರಾಜ್ಯಪಾಲರುಗಳ ನೆರವಿನಿಂದ ಕೊನೆಗೆ ಬಿಜೆಪಿ ಸರಕಾರಗಳೇ ಬಂದಿವೆ.

ಯಾವುದೇ ಪಕ್ಷದ ಬಹುಮತವನ್ನು ಸದನದಲ್ಲೇ ತೀರ್ಮಾನಿಸಬೇಕು ಎಂಬ ದೇಶದ ಸರ್ವೋಚ್ಚ ನ್ಯಾಯಾಲಯದ ತೀರ್ಪಿದ್ದರೂ ಲೆಕ್ಕಿಸದೆ ಈ ರಾಜ್ಯಪಾಲರುಗಳು ಜನತೆ ಆರಿಸಿದ ಅತಿದೊಡ್ಡ ಪಕ್ಷವನ್ನು ಸರಕಾರ ರಚಿಸಲು ಆಹ್ವಾನಿಸುವ ಬದಲು ತರಾತುರಿಯಿಂದ ಬೆಂಬಲಿಗರ ಪಟ್ಟಿ ಹಿಡಿದುಕೊಂಡು ಓಡೋಡಿ ಬಂದ ಬಿಜೆಪಿ ಮುಖಂಡರುಗಳನ್ನು ಮುಖ್ಯಮಂತ್ರಿಗಳಾಗಿ ನೇಮಿಸಿದರು. ಅಧಿಕಾರ ಇದ್ದವರ ಕಡೆಗೆ ವಾಲುವ ಶಾಸಕರ ಬೆಂಬಲದಿಂದ ಇಬ್ಬರೂ ನಿರೀಕ್ಷೆಯಂತೆಯೇ 'ವಿಶ್ವಾಸ ಮತ' ಗಳಿಸಿಕೊಂಡಿದ್ದಾರೆ. ಆದರೆ ಈ ಪ್ರಕ್ರಿಯೆಯಲ್ಲಿ ಬಿಜೆಪಿಯ ಗೋಸುಂಬೆತನ ಬಟ್ಟಬಯಲಾಗಿದೆ.

ಗೋವ: ಜನಾದೇಶವನ್ನೇ ತಿರಸ್ಕರಿಸಿದ ಸರಕಾರ



"ನನಗೆ ನನ್ನ ವೋಟ್ ವಾಪಾಸ್ ಮಾಡಿ", 'ಕುದುರೆ ವ್ಯಾಪಾರ ಬೇಡ' "ನನ್ನ ಮುಖ್ಯಮಂತ್ರಿ ಅಲ್ಲ" ,'ನನ್ನ ಸರಕಾರ ಅಲ್ಲ" 'ನಾಚಿಕೆಗೆಟ್ಟ ಗೋಸುಂಬೆಗಳು–ವಿಜಯ್ ಮತ್ತು ರೋಹನ್' ಇವು ಮಾರ್ಚ್ 14ರಂದು ಗೋವಾ ರಾಜಭವನದ ಎದುರು ಮೊಳಗಿದ ಘೋಷಣೆಗಳು. ದೇಶ ರಕ್ಷಿಸುವ ತನ್ನ ಕೆಲಸವನ್ನು ಬಿಟ್ಟು ಬಿಜೆಪಿ ರಕ್ಷಿಸಲು ಪಣಜಿಗೆ ಧಾವಿಸಿ ಬಂದಿದ್ದ ಕೇಂದ್ರ ರಕ್ಷಣಾ ಮಂತ್ರಿಗಳಿಗೆ ಸಿಕ್ಕ ಸ್ವಾಗತ.

ಮಣಿಪುರದಲ್ಲಿ ಜನಾದೇಶ ಪಡೆಯದಿದ್ದರೂ ಸರಕಾರ ರಚಿಸಿದರೆ ಇಲ್ಲಿ ಜನಾದೇಶವನ್ನು ತಿರಸ್ಕರಿಸಿ ಬಿಜೆಪಿ ಸರಕಾರ ರಚಿಸಿದ್ದೇ ಈ ಆಕ್ರೋಶಕ್ಕೆ ಕಾರಣ. ಗೋವಾದಲ್ಲಿ ಕಳೆದ ಬಾರಿ 40ರಲ್ಲಿ 21 ಸೀಟುಗಳನ್ನು ಗೆದ್ದು ಸರಕಾರ ರಚಿಸಿದ್ದ ಬಿಜೆಪಿ ಈ ಬಾರಿ 8 ಸ್ಥಾನಗಳನ್ನು ಕಳೆದುಕೊಂಡು 13ಕ್ಕೆ ಇಳಿಯಿತು. 83% ಮತದಾರರು ಮತದಾನದಲ್ಲಿ ಪಾಲ್ಗೊಂಡ ಈ ಚುನಾವಣೆಯಲ್ಲಿ ಬಿಜೆಪಿ ಮುಖ್ಯಮಂತ್ರಿಯೂ ಸೇರಿದಂತೆ ಐದು ಮಂತ್ರಿಗಳನ್ನು ಮತ್ತು ಇತರ ಪ್ರಮುಖ ಮುಖಂಡರನ್ನು ಗೋವನ್ನರು ತಿರಸ್ಕರಿಸಿದರು.

2012ರಲ್ಲಿ ತನ್ನ ದುರಾಡಳಿತದಿಂದಾಗಿ 9 ಸೀಟುಗಳನ್ನಷ್ಟೇ ಪಡೆದಿದ್ದ ಕಾಂಗ್ರೆಸ್ ಕಳೆದ ಬಾರಿಗಿಂತ ಉತ್ತಮ ದಾಖಲೆಯಿದ್ದ ಅಭ್ಯರ್ಥಿಗಳನ್ನು ನಿಲ್ಲಿಸಿ 17 ಸ್ಥಾನಗಳನ್ನು ಗಳಿಸಿ ಎಲ್ಲಕ್ಕಿಂತ ದೊಡ್ಡ ಪಕ್ಷವಾಗಿ ಮೂಡಿ ಬಂತು. ಬಿಜೆಪಿಯನ್ನು ಬಲವಾಗಿ ವಿರೋಧಿಸಿದ್ದ ಗೋವ ಫಾರ್ವರ್ಡ್ ಪಾರ್ಟಿ (ಜಿಎಫ್‌ಪಿ) 3 ಸೀಟುಗಳನ್ನು ಪಡೆಯಿತು. ಒಂದೊಮ್ಮೆ ಬಿಜೆಪಿಯ ಜತೆಗಿದ್ದು ಈ ಬಾರಿ ವಿರೋಧಿಸಿದ್ದ ಎಂಜಿಪಿ ಪಕ್ಷ ತನ್ನ 3 ಸ್ಥಾನಗಳನ್ನು ಉಳಿಸಿಕೊಂಡಿತು. ಕಳೆದ ಬಾರಿ 6 ಸ್ಥಾನಗಳನ್ನು ಪಡೆದಿದ್ದ ಎನ್‌ಸಿಪಿ ಈ ಬಾರಿ 1ಕ್ಕೇ ತೃಪ್ತಿ ಪಟ್ಟುಕೊಳ್ಳಬೇಕಾಯಿತು.

ಎಂಜಿಪಿ ಮತ್ತು ಈ ಎಲ್ಲ ಪಕ್ಷಗಳಿಗೆ ಮತ್ತು ಮೂವರು ಪಕ್ಷೇತರ ಶಾಸಕರಿಗೆ ಗಾಳ ಹಾಕುವಲ್ಲಿ ಬಿಜೆಪಿ ಯಶಸ್ವಿಯಾಯಿತು. ಬಿಜೆಪಿಯ ತೀವ್ರ ಪರಾಭವ ವಾಸ್ತವವಾಗಿ ಪಕ್ಷಕ್ಕೆ ಜನತೆ ತೋರಿದ ತಿರಸ್ಕಾರ ಅಲ್ಲ, ಹಿಂದಿನ ಬಿಜೆಪಿ ಮುಖ್ಯಮಂತ್ರಿ ಮನೋಹರ್ ಪಾರಿಕ್ಕರ್ ಕೇಂದ್ರಕ್ಕೆ ರಕ್ಷಣಾಮಂತ್ರಿಯಾಗಿ ಹೋದ ಮೇಲೆ ಮುಖ್ಯಮಂತ್ರಿಯಾದ ಪಾರ್ಸೆಕರ್ ಪರಾಭವ ಎಂದು ಬಿಂಬಿಸಲಾಯಿತು. ಪಾರಿಕ್ಕರ್ ಉತ್ತಮ ಮುಖಂಡ, ಅವರು ಮುಖ್ಯಮಂತ್ರಿಯಾಗುವುದಾದರೆ ತಮ್ಮ ಬೆಂಬಲ ಇದೆ ಎಂದು ಸಣ್ಣ ಪಕ್ಷಗಳು ಹೇಳಿರುವುದಾಗಿ ತಿಳಿಸಲಾಯಿತು. ಎನ್‌ಸಿಪಿ ಮತ್ತು ಒಬ್ಬ ಕಾಂಗ್ರೆಸ್ ಶಾಸಕ ಕೂಡ ಬಣ್ಣ ಬದಲಿಸಿದರು.

ಬಿಜೆಪಿ 4 ಕಡಿಮೆ ಸೀಟುಗಳನ್ನು ಪಡೆದರೂ ಕಾಂಗ್ರೆಸ್ ಪಡೆದ ಮತಗಳಿಗಿಂತ(28.4%) ಹೆಚ್ಚು(32,5%) ಮತ ಗಳಿಸಿದೆ ಎಂಬುದು ಸರಕಾರ ರಚಿಸಲು ಬಿಜೆಪಿ ಮುಖಂಡರು ಕೊಟ್ಟಿರುವ ಮತ್ತೊಂದು ವಿಲಕ್ಷಣ ಸಮರ್ಥನೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ತಲಾ 3 ಸಿಟುಗಳನ್ನು ಗೆದ್ದ ಎಂಜಿಪಿ ಮತ್ತು ಜಿಎಫ್‌ಪಿ ಪಡೆದ ಮತಗಳು ಅನುಕ್ರಮವಾಗಿ 11.3% ಮತ್ತು 3.5%. ಬಲವಾದ ಸ್ಪರ್ಧೆ ನೀಡಬಹುದೆಂದು ನಿರೀಕ್ಷಿಸಲಾಗಿದ್ದ ಆಮ್‌ಆದ್ಮಿ ಪಾರ್ಟಿ ಯಾವುದೇ ಸೀಟು ಗೆಲ್ಲಲ್ಲಿಲ್ಲ, ಆದರೆ ಜಿಎಫ್‌ಪಿಗಿಂತ ಹೆಚ್ಚು

ಪುಟ 10 ಕ್ಕೆ

ಮಣಿಪುರ: ಜನಾದೇಶವಿಲ್ಲದ ಸರಕಾರ

ಮಣಿಪುರ ವಿಧಾನಸಭೆಯ 60 ಸೀಟುಗಳಲ್ಲಿ ಬಿಜೆಪಿಗೆ ದಕ್ಕಿದ್ದು 21 ಮಾತ್ರ. ಈಶಾನ್ಯ ಭಾರತದಲ್ಲಿ ಅಸ್ಸಾಂ ವಿಜಯದ ಹಿನ್ನೆಲೆಯಲ್ಲಿ ಭಾರೀ ಬಹುಮತದ ಆಸೆ ಹೊತ್ತಿದ್ದ ಆ ಪಕ್ಷದ ನಿರೀಕ್ಷೆಯನ್ನು ಮತದಾರರು ಹುಸಿಗೊಳಿಸಿದರು. 15ವರ್ಷಗಳಿಂದ ಸರಕಾರದಲ್ಲಿದ್ದ ಕಾಂಗ್ರೆಸ್ ದುರಾಡಳಿತದಿಂದ ಜನ ಬೇಸತ್ತಿದ್ದರೂ ಅದು 28ನ್ನು ಪಡೆಯಿತು. ಆದರೆ ಸ್ಪಷ್ಟ ಬಹುಮತ ದಕ್ಕಲಿಲ್ಲ. ಸೋತ ಬಿಜೆಪಿ ಇದರ ಪೂರ್ಣ ದುರುಪಯೋಗವನ್ನು ಮಾಡಿಕೊಳ್ಳುವ ಕಾರ್ಯಾಚರಣೆಗಿಳಿಯಿತು.

ಎನ್‌ಡಿಎ ಭಾಗವಾಗಿದ್ದರೂ ಪ್ರತ್ಯೇಕವಾಗಿ ಸ್ಪರ್ಧಿಸಿದ್ದ ಎಲ್‌ಜೆಪಿ ಒಂದು ಸ್ಥಾನವನ್ನು ಪಡೆದಿದೆ. ಆದರೂ ಸರಕಾರ ರಚಿಸಲು ಇನ್ನೂ 9 ಬೇಕಿತ್ತು. ಎರಡು ಸ್ಥಳೀಯ ಪಕ್ಷಗಳಾದ ನಾಗ ಪೀಪಲ್ಸ್ ಫ್ರಂಟ್ (ಎನ್‌ಪಿಎಫ್) ಮತ್ತು ನ್ಯಾಶನಲ್ ಪೀಪಲ್ಸ್ ಪಾರ್ಟಿ(ಎನ್‌ಪಿಪಿ) ತಲಾ 4 ಸ್ಥಾನಗಳನ್ನು ಗಳಿಸಿದ್ದವು. ಇವೆರಡೂ ಎನ್‌ಡಿಎಯ ಈಶಾನ್ಯ ಅವತರಣಿಕೆಯಾದ ಎನ್‌ಇಡಿಎ ಅಂಗಪಕ್ಷ ಗಳಾಗಿದ್ದರೂ ಮಣಿಪುರದಲ್ಲಿ ಪರಸ್ಪರ ಸಂದೇಹದಿಂದ ಕಾಣುವ ವಿಭಾಗಗಳ ಹಿತರಕ್ಷಣೆಯ ಹೆಸರಲ್ಲಿ ಪರಸ್ಪರ ವಿರುದ್ಧ ಸ್ಪರ್ಧಿಸಿದ್ದವು, ಬಿಜೆಪಿಯ ವಿರುದ್ಧವೂ ಸ್ಪರ್ಧಿಸಿದ್ದವು. ಆದರೂ ಬಿಜೆಪಿಗೆ ಇವು ಸಹಯೋಗಿಗಳಾಗಿ ಕಂಡವು. ಇನ್ನೂ ಒಂದು ಸ್ಥಾನದ ಆವಶ್ಯಕತೆಯಿತ್ತು. ಈ ಹಿನ್ನೆಲೆಯಲ್ಲಿ ಒಬ್ಬ ಪಕ್ಷೇತರ ಶಾಸಕ ಅಸ್ಸದುದ್ದೀನ್ 'ಅಪಹರಣ'ದ ಘಟನೆಯೂ ನಡೆಯಿತು. ಈತ ಕಾಂಗ್ರೆಸಿಗೆ ಬೆಂಬಲ ನೀಡುವುದಾಗಿ ಹೇಳಿದ್ದರು ಎನ್ನುತ್ತಾರೆ ಕಾಂಗ್ರೆಸಿಗರು.

ಬಿಜೆಪಿ ನಿಯೋಗ ರಾಜಭವನಕ್ಕೆ ಧಾವಿಸಿ ಸರಕಾರ ರಚಿಸುವ ದಾವೆ ಇಟ್ಟಿತ್ತು. ಏಕೆಂದರೆ ಈ ನಡುವೆ ಒಬ್ಬ ಕಾಂಗ್ರೆಸ್ ಶಾಸಕ ತನ್ನ ಪಕ್ಷಕ್ಕೆ ಕೈಕೊಟ್ಟರು. ಎರಡು ಸ್ಥಳೀಯ ಪಕ್ಷಗಳ ಬೆಂಬಲ ಪಡೆಯುವಲ್ಲಿಯೂ ಅದು 'ಯಶಸ್ವಿ'ಯಾಯಿತು. ಕಾಂಗ್ರೆಸನ್ನು ಬೆಂಬಲಿಸುವ ನಿರೀಕ್ಷೆಯಿದ್ದ ಟಿಎಂಸಿ ಶಾಸಕರೂ ಕೈಕೊಟ್ಟರು.

ಹೀಗೆ ಎರಡು ದಿನಗಳ ತೀವ್ರ ನಾಟಕೀಯ ಕಾರ್ಯಾಚರಣೆ ಯಶಸ್ವಿಯಾಗಿ ಅಕ್ಟೋಬರ್ 2016 ರವರೆಗೂ ರಾಜ್ಯದ ಪ್ರಮುಖ ಕಾಂಗ್ರೆಸ್ ಮುಖಂಡನಾಗಿದ್ದ(ರಾಜ್ಯ ಉಪಾಧ್ಯಕ್ಷ) ಎನ್‌ಬಿರೇನ್ ಸಿಂಗ್‌ರಿಗೆ ರಾಜ್ಯಪಾಲೆ ನಜ್ಮಾ ಹೆಫ್ತುಲ್ಲ(ಇವರೂ ಕೇಂದ್ರದಲ್ಲಿ ಕಾಂಗ್ರೆಸ್ ಮಂತ್ರಿಗಳೂ, ನಂತರ ಬಿಜೆಪಿ ಮಂತ್ರಿಗಳೂ ಆಗಿದ್ದವರು!) ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಬೋಧಿಸಿದರು.

ಈಗ ಹೊಸ ಮುಖ್ಯಮಂತ್ರಿಗಳು 'ವಿಶ್ವಾಸ ಮತ' ಗಳಿಸಿದ್ದಾರೆ. ಆದರೆ ಇದರ ಮೊದಲು ಅವರಲ್ಲಿ ವಿಶ್ವಾಸವ್ಯಕ್ತಪಡಿಸಿದವರು ಮತ್ತು ಪಡಿಸದವರ ಪ್ರತ್ಯೇಕ 'ರೆಸಾರ್ಟ್ ವಾಸ'ದ ಪ್ರದರ್ಶನವೂ ನಡೆಯಿತು, ಇದು ಈಗ 'ಒಳ್ಳೆಯ ದಿನ'ಗಳಲ್ಲೂ ಬೂರ್ಜ್ವಾ ಅಧಿಕಾರ ರಾಜಕಾರಣದ ಅಭಿನ್ನ ಭಾಗವಾಗಿ ಬಿಟ್ಟಿದೆ ತಾನೇ.

ಕಾಂಗ್ರೆಸ್‌ನ ಬಲ ಹೆಚ್ಚುವ ಬದಲು 28ರಿಂದ 27ಕ್ಕೆ ಇಳಿದಿದೆ. ಇನ್ನೂ ಬಹಳ ಮಂದಿ ಬಿಜೆಪಿಯ ಕಾರ್ಯಾಚರಣೆಯ ಫಲವಾಗಿ ಬಿಜೆಪಿ ಕಡೆ ಬರುತ್ತಾರೆ ಎಂಬ ಸುದ್ದಿಗಳಿದ್ದವು. ಬಹುಶಃ ಈ 'ಆಶ್ವಾಸನೆ'ಯಿಂದಲೇ ಒಬ್ಬ ಕಾಂಗ್ರೆಸ್ ಶಾಸಕ ಥೌನವೊಜಾಮ್ ಶ್ಯಾಮ್‌ಕುಮಾರ್ ಬಿಜೆಪಿ ಸರಕಾರ ಸೇರಿರಬಹುದು. ಆತ ಈಗ ಶಾಸಕ ಸ್ಥಾನಕ್ಕೆ ಅನರ್ಹನಾಗುವ ಸ್ಥಿತಿಯಿದ್ದರೂ ಆತನನ್ನು ಮಂತ್ರಿಯಾಗಿ ಮಾಡಿರುವುದು. ಮೋದಿ–ಶಾ ಅಡಿಯಲ್ಲಿ ಈಗ ಅನಾವರಣಗೊಳ್ಳುತ್ತಿರುವ ಬಿಜೆಪಿಯ 'ಕಾಂಗ್ರೆಸ್–ಮುಕ್ತ' ರಾಜಕಾರಣದ ನಿಜಸ್ವರೂಪವನ್ನು ಪ್ರದರ್ಶಿಸುತ್ತಿದೆ. ಎನ್‌ಪಿಪಿ ಪಕ್ಷದ ಎಲ್ಲ ನಾಲ್ಕು ಶಾಸಕರೂ ಮಂತ್ರಿಗಳಾಗಿರುವುದು ಬಿಜೆಪಿ ತನ್ನ ಸರಕಾರ ರಚಿಸಲು ಕುದುರಿಸಿದ 'ಡೀಲ್'ನ ಪ್ರತೀಕ.ಎನ್ನಲಾಗುತ್ತಿದೆ.

ಈಗ ಅಧಿಕಾರ ವಹಿಸಿಕೊಂಡಿರುವ ಮಣಿಪುರದ ಬಿಜೆಪಿ ಮಂತ್ರಿ ಮಂಡಳದ ಸ್ವರೂಪ ಇದನ್ನು ಇನ್ನಷ್ಟು ಸ್ಫುಟಗೊಳಿಸಿದೆ.

* ಮುಖ್ಯಮಂತ್ರಿ ಬಿರೇನ್ ಸಿಂಗ್ ಈ ಮೇಲೆ ಹೇಳಿದಂತೆ ಚುನಾವಣೆಯ ಸ್ವಲ್ಪ ಮೊದಲಿನ ವರೆಗೆ ಕಾಂಗ್ರೆಸ್ ಮುಖಂಡರಾಗಿದ್ದವರು. ಅವರ ಸುಮಾರು ಒಂದೂವರೆ ದಶಕದ ರಾಜಕೀಯ ಜೀವನದಲ್ಲಿ ಇದು ಅವರಿಗೆ ಮೂರನೇ ಪಕ್ಷ. ಈ ಮೊದಲು ಫುಟ್‌ಬಾಲ್

ಪುಟ 10 ಕ್ಕೆ



ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ

ಮಣಿಪುರ: ಜನಾದೇಶವಿಲ್ಲದ ಸರಕಾರ

ಪುಟ 9 ರಿಂದ

ಆಟಗಾರರು ಮತ್ತು ಪತ್ರಕರ್ತರಾಗಿದ್ದ ಇವರನ್ನು 2000ದಲ್ಲಿ ಈಗ ಬಿಜೆಪಿಯ ಗೀಳಾಗಿ ಬಿಟ್ಟಿರುವ 'ರಾಜದ್ರೋಹ'ದ ಆಪಾದನೆಯ ಮೇಲೆ ಬಂಧಿಸಲಾಗಿತ್ತು ಎಂದು 'ದಿ ನಾರ್ತ್ ಈಸ್ಟ್ ಟುಡೆ" ವೆಬ್ ಪತ್ರಿಕೆ ವರದಿ ಮಾಡಿದೆ. ಆತನ ಪತ್ರಿಕೆ 'ನಹರೋಲ್ ಜಿ ಥೌಡಂಗ್'ನಲ್ಲಿ ಉಗ್ರಗಾಮಿಗಳ ಪರವಾದ ಲೇಖನ ಪ್ರಕಟಿಸಿದರು ಎಂಬುದು ಅವರ ಮೇಲಿನ ಆಪಾದನೆಯಂತೆ. ಆನಂತರ ಅವರು ದಾರಿ ಬದಲಿಸಿದರಂತೆ. ಅಂದರೆ 'ಹೃದಯ ಪರಿವರ್ತನೆ' ಇರಬಹುದೇನೋ.

* ಉಪಮುಖ್ಯಮಂತ್ರಿಯಾಗಿರುವ ಯುಮ್ನನ್ ಜೊಯ್‌ಕುಮಾರ್ ಇತ್ತೀಚಿನ ವರೆಗೆ ರಾಜ್ಯದ ಡಿಜಿಪಿಯಾಗಿದ್ದವರು. ಇವರು ಎನ್‌ಪಿಪಿ ಪಕ್ಷದವರು.
* ಟಿ. ಬಿಸ್ವಜಿತ್ ಸಿಂಗ್–ಮೊದಲು ಟಿಎಂಸಿಯಿಂದ ಗೆದ್ದ ಈತನಿಗೂ ಬಿಜೆಪಿ ಈಗ ಮೂರನೇ ಪಕ್ಷ.
* ಎಲ್.ಜಯಂತ ಕುಮಾರ್ 13 ವರ್ಷ ಮಣಿಪುರ ನ್ಯಾಯಾಂಗ ಸೇವೆಯಲ್ಲಿದ್ದವರು, 2000ದಲ್ಲಿ ರಾಜಕೀಯಕ್ಕೆ ಬಂದ ಇವರು ಮಣಿಪುರದ ಕಾಂಗ್ರೆಸ್ ಸರಕಾರಗಳಲ್ಲಿ ಮಂತ್ರಿಯಾಗಿದ್ದವರು. ಈ ಚುನಾವಣೆಗಳಲ್ಲಿ ಎನ್‌ಪಿಪಿ ಅಭ್ಯರ್ಥಿಯಾಗಿ ಗೆದ್ದರು.
* ಎನ್ ಕಾಯಿಸಿ–ಇವರು ಬಿಜೆಪಿ ಅಭ್ಯರ್ಥಿಯನ್ನೇ ಸೋಲಿಸಿ ಶಾಸಕರಾದ ಎನ್‌ಪಿಪಿ ಮುಖಂಡರು.
* ಲೆತ್ಪಾವೊ ಹವೊಕಿಪ್ ಮಂತ್ರಿ ಸ್ಥಾನ ಗಿಟ್ಟಿಸಿರುವ ನಾಲ್ಕನೇ ಎನ್‌ಪಿಪಿ ಶಾಸಕರು
* ಲೊಸಿ ದಿಖೋ ಸಂಪುಟದಲ್ಲಿ ನಾಗ ಬುಡಕಟ್ಟಿನ ಜನಗಳ ಎನ್‌ಪಿಎಫ್‌ನ ಪ್ರತಿನಿಧಿ
* ಲೋಕ ಜನಶಕ್ತಿ ಪಕ್ಷದ ಏಕೈಕ ಶಾಸಕ ಕರಮ್ ಶ್ಯಾಮ್ ಮಂತ್ರಿ ಸ್ಥಾನ ಗಿಟ್ಟಿಸಿದ ಮತ್ತೊಬ್ಬರು. ಈ ಪಕ್ಷ ಕೇಂದ್ರದಲ್ಲಿ ಎನ್‌ಡಿಎ ಭಾಗವಾಗಿದ್ದರೂ, ಈತ ಬಿಜೆಪಿ ಅಭ್ಯರ್ಥಿಯನ್ನೇ 2300 ಮತಗಳಿಂದ ಸೋಲಿಸಿ ಬಂದವರು.
* ಟಿ ಶ್ಯಾಮಕುಮಾರ್ ಕೂಡ ಕಾಂಗ್ರೆಸ್ ಅಭ್ಯರ್ಥಿಯಾಗಿ ನಿಕಟ ಬಿಜೆಪಿ ಅಭ್ಯರ್ಥಿಯನ್ನು 8000 ಮತಗಳಿಂದ ಸೋಲಿಸಿದರೂ ಈಗ ಪಕ್ಷಾಂತರ ಮಾಡಿ ಬಿಜೆಪಿ ಸರಕಾರದಲ್ಲಿ ಮಂತ್ರಿಗಳಾಗಿದ್ದಾರೆ, ಶಾಸಕ ಸ್ಥಾನಕ್ಕೆ ಅನರ್ಹರಾದರೂ ಆರು ತಿಂಗಳ ವರೆಗೆ ಮಂತ್ರಿಗಳಾಗಿ ಮುಂದುವರೆಯಬಹುದು. ಅಷ್ಟರೊಳಗೆ ತಮ್ಮನ್ನು ಆರಿಸಿದ ಮತದಾರರನ್ನೆ ಈ ಬಾರಿ ಬಿಜೆಪಿಯಿಂದ ಆರಿಸುವಂತೆ ಕೇಳುತ್ತಾರೆ!


ನಿಜ ಹೇಳಬೇಕೆಂದರೆ, ಹೇಗಾದರೂ ಅಧಿಕಾರ ಹಿಡಿಯುವ ಪ್ರಯತ್ನ ಮತದಾನದ ಮೊದಲೇ, ಮೊದಲ ಹಂತದ ಮತದಾನದ ಹಿಂದಿನ ದಿನವೇ ಆರಂಭವಾಗಿತ್ತು ಎಂಬುದು ಗಮನಾರ್ಹ. ನಿಯಮಗಳ ಪ್ರಕಾರ ಚುನಾವಣೆಯ ದಿನ ಮತ್ತು ಅದರ ಹಿಂದಿನ ದಿನ ಮಾಧ್ಯಮಗಳಲ್ಲಿ ಚುನಾವಣಾ ಜಾಹೀರಾತುಗಳನ್ನು ಪ್ರಕಟಿಸಬಾರದು, ಈ ಮೊದಲೇ ರಾಜ್ಯ ಚುನಾವಣಾ ಕಚೇರಿಯ ಮಾಧ್ಯಮ ಪ್ರಮಾಣ ಪತ್ರ ಮತ್ತು ಉಸ್ತುವಾರಿ ಸಮಿತಿ(ಎಂಸಿಎಂಸಿ)ಯ ಪ್ರಮಾಣಪತ್ರವನ್ನು ಪಡೆದಿರುವ ಜಾಹೀರಾತುಗಳನ್ನು ಮಾತ್ರ ಪ್ರಕಟಿಸಬಹುದು. ಮಣಿಪುರದ ರಾಜಧಾನಿಯ ಎಲ್ಲ ಪ್ರಮುಖ ಪತ್ರಿಕೆಗಳಿಗೆ ಮಾರ್ಚ್ 3 ಮತ್ತು 4ರಂದು ಎರಡು ಪೂರ್ಣಪುಟದ ವರ್ಣ ಜಾಹೀರಾತುಗಳನ್ನು ಬಿಜೆಪಿ ಕಳಿಸಿತು. ಅವು ಪ್ರಕಟಿಸಿದವು. ಏಕೆಂದರೆ ಅವುಗಳ ಜೊತೆಗೆ ಎಂಎಸಿಎಂಸಿ ಪ್ರಮಾಣ ಪತ್ರಗಳಿದ್ದವು. ಆದರೆ ವಾಸ್ತವವಾಗಿ ಒಂದು ಜಾಹೀರಾತಿಗೆ ಪಕ್ಷ ಪ್ರಮಾಣ ಪತ್ರ ಪಡೆದೇ ಇರಲಿಲ್ಲ. ಬೇರೊಂದು ಜಾಹೀರಾತಿನ ಪ್ರಮಾಣ ಪತ್ರವನ್ನು ಲಗತ್ತಿಸಿತ್ತಂತೆ. ಚುನಾವಣಾ ಕಚೇರಿ ಎಂಟು ದೊಡ್ಡ ಪತ್ರಿಕೆಗಳ ಸಂಪಾದಕರ ವಿರುದ್ಧ ಎಫ್‌ಐಆರ್ ಹಾಕಿತು. ಬಿಜೆಪಿಯನ್ನು ಪ್ರಶ್ನಿಸಲಿಲ್ಲ. ಈಗ ಅವರೇ ಸರಕಾರ ರಚಿಸಿರುವಾಗ ಈ ಎಫ್‌ಐಆರ್‌ಗಳ ಗತಿಯೇನು ಎಂದು ಊಹಿಸಬೇಕಷ್ಟೇ.

ಮತದಾನದ ಮೊದಲು ಮತ್ತು ಜನಾದೇಶದ ನಂತರದ ಈ ರೀತಿಯ ವರ್ತನೆಗಳಿಂದ ಸರಕಾರವೇನೋ ರಚನೆಗೊಂಡಿದೆ. 'ವಿಶ್ವಾಸಮತ'ವೂ ದೊರೆತಿದೆ. ಆದರೆ ಹೊಸ ಸರಕಾರದ ಸಮಸ್ಯೆಗಳೇನೂ ಮುಗಿದಿಲ್ಲ ಎನ್ನುತ್ತಾರೆ ವಿಶ್ಲೇಷಕರು. ಮುಖ್ಯವಾಗಿ 4 ಶಾಸಕರಿರುವ ಪಕ್ಷಕ್ಕೆ 4 ಮಂತ್ರಿ ಸ್ಥಾನಗಳು ದೊರೆತಿವೆ, ಏಕೈಕ ಶಾಸಕನಿದ್ದ ಪಕ್ಷಕ್ಕೂ ಸಂಪುಟದಲ್ಲಿ ಸ್ಥಾನ ಕೊಡಲಾಗಿದೆ. ಆದರೆ 21 ಶಾಸಕರಿರುವ ಆಳುವ ಪಕ್ಷಕ್ಕೆ ಮುಖ್ಯಮಂತ್ರಿ ಮತ್ತು ಮುಖ್ಯಮಂತ್ರಿಯಾಗುವ ಆಸೆಯಿಟ್ಟುಕೊಂಡಿದ್ದ ಇನ್ನೊಬ್ಬ ಶಾಸಕರಿಗೆ ಮಾತ್ರ. ಉಳಿದ 19 ಮಂದಿಯ ಆಸೆ–ಆಕಾಂಕ್ಷೆಗಳನ್ನು ತಾನೇ ಪೋಷಿಸಿರುವ ಪಕ್ಷಾಂತರದ ವಾತಾವರಣದಲ್ಲಿ ಹೇಗೆ ನಿಭಾಯಿಸಲಾಗುತ್ತದೆ ಎಂಬುದು ಕುತೂಹಲಕಾರಿ.

ಸುಮಾರು ನಾಲ್ಕು ತಿಂಗಳಿಂದ ನಡೆಯುತ್ತಿದ್ದ ನಾಗಾ ಸಂಘಟನೆಗಳ ದಿಗ್ಬಂಧನವನ್ನು ತೆರವುಗೊಳಿಸಲು ಹೊಸ ಮುಖ್ಯಮಂತ್ರಿಗಳಿಗೆ ಸಾಧ್ಯವಾಗಿದೆ. ಅದು ಆತನ ಕಾಂಗ್ರೆಸ್ ಅನುಭವದ ಸಹಾಯದಿಂದಲೋ, ಅಥವ ಈಗಿನ ಬಿಜೆಪಿ ತತ್ವದಿಂದಲೋ ಎಂಬ ಪ್ರಶ್ನೆಯಂತೂ ಇದ್ದೇ ಇದೆ.

ಕಣಿವೆ ಪ್ರದೇಶದ ಜನಗಳು ಮತ್ತು ಬೆಟ್ಟ ಪ್ರದೇಶದ ಜನಗಳ ನಡುವೆ ಬೆಳೆಸಿರುವ ವಿಭಜನೆಯನ್ನು ವಿಭಜಕ ಧೋರಣೆಯೇ ಜೀವಾಳವಾಗಿರುವ ಪಕ್ಷದ ನೇತೃತ್ವದ ಕಲಬೆರಕೆ ಕೂಟದ ಸರಕಾರ ಮೀರಿ ನಿಂತು ಉತ್ತಮ ಸರಕಾರ ನೀಡಬಲ್ಲುದೇ ಎಂಬುದು ಇನ್ನೊಂದು ಮುಖ್ಯ ಪ್ರಶ್ನೆ. ಎನ್‌ಪಿಎಫ್ ತನ್ನ ಪ್ರಣಾಳಿಕೆಯಲ್ಲಿ ಮಣಿಪುರದ ಕೆಲವು ಭಾಗಗಳನ್ನೂ ಸೇರಿಸಿ 'ಬೃಹತ್ ನಾಗಾಲ್ಯಾಂಡ್' ರಚಿಸುವ ವಚನ ನೀಡಿದೆ. ಆಗಸ್ಟ್ 2015ರಲ್ಲಿ ನಾಗಾ ಸಂಘಟನೆ ಎನ್‌ಎಸ್‌ಸಿಎನ್(ಎಂ) ನೊಂದಿಗೆ ಮಾಡಿಕೊಂಡ ಒಪ್ಪಂದದಲ್ಲಿ ಏನಿದೆ ಎಂದು ಇನ್ನೂ ಗುಟ್ಟಾಗಿಟ್ಟಿದೆ. ಚುನಾವಣಾ ಪ್ರಚಾರದ ವೇಳೆ ಈ ಪ್ರಶ್ನೆ ಎದ್ದಾಗ ಮಣಿಪುರದ ಹಿತಗಳ ವಿರುದ್ಧ ಅದರಲ್ಲಿ ಏನೂ ಇಲ್ಲ ಎಂದು ಹೇಳಲಾಯಿತಷ್ಟೇ. ಅದು ಕೂಡ 'ಬೃಹತ್ ನಾಗಾಲ್ಯಾಂಡ್' ಬೇಡಿಕೆಯ ಮೇಲೆ ನಿಂತಿದೆ. ಆದ್ದರಿಂದಲೇ ಎನ್‌ಪಿಎಫ್‌ನ 4 ಶಾಸಕರ ಬೆಂಬಲ ಎಷ್ಟು ದಿನ ಎಂದ ಪ್ರಶ್ನೆ ಅದರ ಮುಂದೆ ಸದಾ ಇರುವಂತದ್ದು. ಅದರಿಂದಾಗಿಯೇ ಈಶಾನ್ಯ ಭಾರತದ ಇತರ ರಾಜ್ಯಗಳಲ್ಲಿ ಇದುವರೆಗೆ ಯಶಸ್ವಿಯಾಗಿರುವ ಕಾಂಗ್ರೆಸ್‌ನೊಳಕ್ಕೆ ಗಾಳ ಹಾಕುವ ತಂತ್ರವನ್ನು ಇಲ್ಲೂ ಮುಂದುವರೆಸಬಹುದೆಂದು ರಾಜಕೀಯ ವೀಕ್ಷಕರ ನಿರೀಕ್ಷೆ.

ಈ ನಡುವೆ ಉತ್ತರಪ್ರದೇಶದ ಯೋಗಿ ಆಳ್ವಿಕೆಯಿಂದ ಗೋಮಾಂಸ–ವಿರೋಧಿ ಪ್ರಚಾರ ಬಲವಾಗುತ್ತಿರುವುದು ಈಶಾನ್ಯ ಭಾರತದಲ್ಲಿ ತಮ್ಮ ತಂತ್ರಕ್ಕೆ ಕುತ್ತು ತರಬಹುದೆಂಬ ಭಯ ಬಿಜೆಪಿಯ ಇಲ್ಲಿಯ ಮುಖಂಡರನ್ನು ಆವರಿಸಿದಂತಿದೆ. 2018ರಲ್ಲಿ ಮೇಘಾಲಯ, ಮಿಝೋರಾಂ ಮತ್ತು ನಾಗಾಲ್ಯಾಂಡಿನಲ್ಲಿ ಚುನಾವಣೆಗಳು ನಡೆಯಲಿವೆ, ಗೋಮಾಂಸ–ನಿಷೇಧದ ಬಿಜೆಪಿ ಧೋರಣೆ ಈಶಾನ್ಯ ಭಾರತಕ್ಕೆ ಅನ್ವಯವಾಗುವುದಿಲ್ಲ, ಪಕ್ಷದ ಕೇಂದ್ರ ಮುಖಂಡರಿಗೆ ಇಲ್ಲಿನ ವಾಸ್ತವತೆ ಬೇರೆ ಎಂಬ ಅರಿವಿದೆ ಎಂದು ಈ ರಾಜ್ಯಗಳ ಬಿಜೆಪಿ ಮುಖಂಡರು ತರಾತುರಿಯಲ್ಲಿ ಭರವಸೆ ನೀಡಿ ಗೋರಕ್ಷಣೆ ಕೇವಲ ಒಂದು ರಾಜಕೀಯ ತಂತ್ರ ಎಂಬುದನ್ನು ಬಯಲು ಮಾಡಿಕೊಂಡಿದ್ದಾರೆ. ○



ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಗೋವ: ಜನಾದೇಶವನ್ನೇ ತಿರಸ್ಕರಿಸಿದ ಸರಕಾರ

ಪುಟ 9 ರಿಂದ

6.5% ಮತ ಗಳಿಸಿತು.

ಮಣಿಪುರದಂತೆ ಇಲ್ಲಿಯೂ ರಾಜ್ಯಪಾಲರ ಪಾತ್ರ ನಿರ್ಣಾಯಕವಾಗಿತ್ತು. ಅವರು ಬಿಜೆಪಿಗೆ ಆಹ್ವಾನ ನೀಡಿದ್ದನ್ನು ಪ್ರಶ್ನಿಸಿ ಕಾಂಗ್ರೆಸ್ ಸುಪ್ರಿಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತು. ಅದು ಪರಿಕ್ಕರ್ ಅವರ ಪ್ರತಿಜ್ಞಾ ಸ್ವೀಕಾರಕ್ಕೆ ತಡೆಯಾಜ್ಞೆ ನೀಡಲು ನಿರಾಕರಿಸಿತು, ಆದರೆ ಮಾರ್ಚ್ 16ರೊಳಗೆ ವಿಶ್ವಾಸ ಮತ ಗಳಿಸಬೇಕು ಎಂದು ತಾಕೀತು ಮಾಡಿತು. ಮಣಿಪುರದಂತೆ ಸರಕಾರ ರಚಿಸಿದವರ ಕಡೆಗೆ ಶಾಸಕರು ವಾಲುವ ಸನ್ನಿವೇಶದಲ್ಲಿ ಇದರಿಂದ ಬಿಜೆಪಿಗೇನೂ ಅಡಚಣೆಯಾಗಲಿಲ್ಲ.

ಅತಿದೊಡ್ಡ ಪಕ್ಷಕ್ಕೆ ಸರಕಾರ ರಚಿಸಲು ರಾಜ್ಯಪಾಲರು ಆಹ್ವಾನ ಕೊಡದಿರಲು ಅವರು ಕೊಟ್ಟ ಕಾರಣ ಅವರು ತನ್ನ ಬಳಿ ಬರಲೇ ಇಲ್ಲ ಎಂಬುದು. ತನ್ನ ಕ್ರಮವನ್ನು ಸಮರ್ಥಿಸಿಕೊಳ್ಳುತ್ತ ಅವರು ಹೇಳಿರುವ ಸಂಗತಿ ಬಹಳಷ್ಟು ವಿವಾದ ಸೃಷ್ಟಿಸಿದೆ, ಮುಖ್ಯವಾಗಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಬಿಜೆಪಿ ಸಂಸದೀಯ ಪ್ರಜಾಪ್ರಭುತ್ವವನ್ನು ಯಾವ ಮಟ್ಟಕ್ಕೆ ಇಳಿಸಿದೆ ಎಂಬುದನ್ನು ತೋರಿಸಿಕೊಟ್ಟಿದೆ.

ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿಯ ಸದಸ್ಯರಾಗಿದ್ದ, ಸ್ವತಃ ಲೇಖಕಿಯಾದ ರಾಜ್ಯಪಾಲರು, ಮೃದುಲಾ ಸಿನ್ಹ ಬಿಜೆಪಿಯನ್ನು ಸರಕಾರ ರಚಿಸಲು ಆಹ್ವಾನಿಸುವ ಮೊದಲು ತಾನು ಕೇಂದ್ರ ಹಣಕಾಸು ಮಂತ್ರಿಗಳಿಗೆ ಕರೆ ಮಾಡಿದುದಾಗಿ ಯಾವ ಮುಜುಗರವೂ ಇಲ್ಲದೆ ಹೇಳಿಕೊಂಡಿದ್ದಾರೆ.

ಮುಂಬೈ ಮಿರರ್ ಪತ್ರಿಕೆಯೊಂದಿಗೆ ಸಂದರ್ಶನದಲ್ಲಿ ಅವರು ".. ಅರುಣ್ ಜೇಟ್ಲಿಯವರನ್ನು ಕೇಳಬೇಕೆನಿಸಿತು, ಸಾಯಂಕಾಲ 9.30ರ ವೇಳೆಗೆ ಫೋನ್ ಮಾಡಿ ಅವರೊಂದಿಗೆ ಪರಿಸ್ಥಿತಿಯನ್ನು ಚರ್ಚಿಸಿದೆ. ನಾನು ಸಂಖ್ಯೆಯನ್ನು ಪರೀಕ್ಷಿಸಿದೆ, ತೃಪ್ತಿಯಾಗಿದೆ, ಅಲ್ಲದೆ ಕಾಂಗ್ರೆಸ್ ಮುಖಂಡರು ಇನ್ನೂ ಆಗಮಿಸಿಲ್ಲ ಎಂದು ತಿಳಿಸಿದೆ. ಯಾವುದೇ ಪಕ್ಷ ಸಂಖ್ಯೆಯೊಂದಿಗೆ ಬಂದರೆ ಅದನ್ನು ಪರಿಶೀಲಿಸಬೇಕು ಎಂದರು. ಹೀಗೆ ಇತ್ಯರ್ಥವಾಯಿತು."!

ಇದಕ್ಕೆ ಮೊದಲು ಜೇಟ್ಲಿಯವರು 'ಕಾಂಗ್ರೆಸ್ ಪಕ್ಷ ಸ್ವಲ್ಪ ಹೆಚ್ಚೇ ದೂರುತ್ತಿದೆ. ಬಿಜೆಪಿ ಗೋವಾದಲ್ಲಿ ಜನಾದೇಶವನ್ನು ಕದ್ದುಕೊಂಡಿದೆ ಎಂದು ಆಪಾದಿಸಿದರು. ಸುಪ್ರಿಂ ಕೋರ್ಟ್‌ಗೆ ಅರ್ಜಿ ಹಾಕಿ ಅಯಶಸ್ವಿಯಾಯಿತು. ಲೋಕಸಭೆಯಲ್ಲೂ ಎತ್ತಲು ಪ್ರಯತ್ನಿಸಿತು. ಆದರೆ ವಾಸ್ತವಾಂಶಗಳೇನು?' ಎಂದು ತಮ್ಮ ಬ್ಲಾಗಿನಲ್ಲಿ ಬರೆದುದಾಗಿ ವರದಿಯಾಗಿತ್ತು.

ಗೋವಾದ ಮತದಾರರು ಮತ್ತು ದೇಶದ ಪ್ರಜಾಪ್ರಭುತ್ವವಾದಿಗಳೂ ಜೇಟ್ಲಿಯವರಂತವರನ್ನು ಕೇಳುವುದು ಇದೇ ಪ್ರಶ್ನೆಯನ್ನು. **ಪರಿಸರ ಕಾನೂನುಗಳನ್ನು ಬುಡಮೇಲು ಮಾಡಿ, ದಾರಿ ತಪ್ಪಿಸುವ ಮಾಹಿತಿಗಳನ್ನು ನೀಡಿ, ಪಾರಂಪರಿಕ ಮೀನುಗಾರರ ಅಭಿಪ್ರಾಯಗಳನ್ನು ಬದಿಗೊತ್ತಿ ಅದಾನಿ ಮತ್ತು ಜಿಂದಾಲ್ ಗುಂಪಿಗೆ ನೇರವಾಗಿ ಪ್ರಯೋಜನ ಒದಗಿಸುವ ಮರ್ಮಗೋವ ಬಂದರು ಪ್ರಾಜೆಕ್ಟನ್ನು ಮುಂದೊತ್ತಿದ್ದಾರೆ ಎಂಬ ಆಪಾದನೆಗೊಳಗಾದ ಕೆಲವು ರಾಷ್ಟ್ರೀಯ ಮಟ್ಟದ ಬಿಜೆಪಿ ಮುಖಂಡರು ಈ ಸರಕಾರ ರಚನೆಗಾಗಿ ನಿದ್ದೆಗೆಟ್ಟು ಪ್ರಯತ್ನಿಸಿದ್ದಾರೆ ಎಂದು ವಿಶ್ಲೇಷಕರೊಬ್ಬರು ಹೇಳಿರುವ ಸಂಗತಿಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು,** (ಫ್ರೆಡರಿಕ್ ನರೋನ್ಹ, ಇಪಿಡಬ್ಲ್ಯು, ಮಾರ್ಚ್ 18).

ಗೋವಾದ ಚುನಾವಣಾ ಫಲಿತಾಂಶ, ಮಣಿಪುರ ಮತ್ತು ಪಂಜಾಬಿನ ಫಲಿತಾಂಶಗಳಂತೆ ಮೋದಿ ಅಲೆ ಎಲ್ಲ ಕಡೆಯೂ ಕೆಲಸ ಮಾಡಲಿಲ್ಲ, ನೋಟುರದ್ಧತಿಗೆ ದೇಶದೆಲ್ಲೆಡೆಗಳಲ್ಲಿ ಅನುಮೋದನೆ ದೊರೆತಿದೆ ಎಂಬುದೂ ಬುರುಡೆ ಎಂಬುದನ್ನು ತೋರಿಸಿದೆ ಎನ್ನುತ್ತಾರೆ ರಾಜಕೀಯ ವಿಶ್ಲೇಷಕರು. ಗೋವಾದಲ್ಲಂತೂ ಹಲವಾರು ಭರವಸೆಗಳನ್ನು ಸುರಿದರೂ ತನ್ನ ಜನ ಬೆಂಬಲವನ್ನೂ ಅದಕ್ಕೆ ಉಳಿಸಿಕೊಳ್ಳುವುದೂ ಅದಕ್ಕೆ ಸಾಧ್ಯವಾಗಿಲ್ಲ, ಹಿಂದೂ ವೋಟ್‌ಬ್ಯಾಂಕ್ ಕೂಡ ಕೆಲಸ ಮಾಡಲಿಲ್ಲ ಎಂಬುದನ್ನು ಈ ಫಲಿತಾಂಶಗಳು ತೋರಿಸಿವೆ. ಇನ್ನೊಂದೆಡೆಯಲ್ಲಿ ಕಾಂಗ್ರೆಸ್‌ಗೆ ಕೂಡ ಇದರ ಪ್ರಯೋಜನ ಪಡೆಯಲು ಸಾಧ್ಯವಾಗಲಿಲ್ಲ, ಅವಳಿ–ಜವಳಿಗಳಂತಿರುವ ಈ ಎರಡು ಪಕ್ಷಗಳನ್ನು ಬದಿಗೊತ್ತಿ ಎದ್ದು ಬಂದ ಪ್ರತಿಭಟನೆಯ ರಾಜಕೀಯದಲ್ಲಿ ಮೂಡಿ ಬಂದವರತ್ತ ಕೆಲವರು ಮುಖ ಮಾಡಿದರೂ, ಅದು ಕೂಡ ಬಹುಕಾಲ ಉಳಿಯುವಂತೆ ಕಂಡಿಲ್ಲ, ರಾಜ್ಯಪಾಲರನ್ನು ಬಳಸಿಕೊಂಡು ಆಳುವ ಪಕ್ಷಗಳು ಹೇಗೆ ಇಂತಹ ಶಕ್ತಿಗಳನ್ನು ನುಂಗಿ ಹಾಕಬಲ್ಲವು ಎಂಬುದನ್ನು ಈ ಫಲಿತಾಂಶಗಳು ತೋರಿಸುತ್ತದೆ ಎಂದು ಅವರು ಹೇಳುತ್ತಾರೆ.

ಇದು ಬಿಜೆಪಿಯ ರಾಜಕೀಯ ಮಾಫಿಯಾ ರಾಜ್ಯಭಾರದ ಕೆಲಸ ಎಂದು ಗೋವಾ ಫಾರ್ವರ್ಡ್ ಪಕ್ಷದ ಅಧ್ಯಕ್ಷರಾಗಿದ್ದ ಪ್ರಭಾಕರ ತಿಂಬ್ಲೆ ಹೇಳುತ್ತಾರೆ. ಚುನಾವಣೆಯಲ್ಲಿ ಬಿಜೆಪಿಯನ್ನು ಬಲವಾಗಿ ವಿರೋಧಿಸಿದ್ದ, ಮೂವರು ಶಾಸಕರನ್ನು ಹೊಂದಿರುವ ಈ ಪಕ್ಷ ಬಿಜೆಪಿ ಕ್ಯಾಂಪ್‌ಗೆ ಸೇರಿದ ಕೂಡಲೇ ಈತ ತನ್ನಸ್ಥಾನಕ್ಕೆ ಮತ್ತು ಪಕ್ಷಕ್ಕೆ ರಾಜೀನಾಮೆ ನೀಡಿದರು.

ಇಷ್ಟೆಲ್ಲ ಮಾಡಿಯೂ ಇಂತಹ ಸರಕಾರ ಗೋವನ್ನರ ಆಕಾಂಕ್ಷೆಗಳನ್ನು ಈಡೇರಿಸಬಲ್ಲದೇ ಎಂಬ ಪ್ರಮುಖ ಪ್ರಶ್ನೆ ಇಲ್ಲಿಯೂ ಉಳಿದಿದೆ.

ಎಚ್.ಆರ್.ನವೀನ್‌ಕುಮಾರ್, ಹಾಸನ

ಕಲ್ಪವೃಕ್ಷದ ನಾಡು ಬರಡಾಗುತ್ತಿದೆ



ತೆಂಗನ್ನು ಬೆಳೆಯುವ ಕಲ್ಪವೃಕ್ಷದ ನಾಡು ಇಂದು ಬರಡಾಗಿ ಪರಿಣಮಿಸುತ್ತಿದೆ. ಕಳೆದ 4–5 ವರ್ಷಗಳ ನಿರಂತರ ಬರಗಾಲದಿಂದಾಗಿ ಅಂತರ್ಜಲದ ಮಟ್ಟ ತೀವ್ರ ಕುಸಿತವನ್ನು ಕಂಡು ತೆಂಗು ಸಂಪೂರ್ಣ ನಾಶದ ಹಂಚಿಗೆ ತಲುಪುತ್ತಿದೆ. ರಾಜ್ಯದಲ್ಲಿ ತೆಂಗು ಬೆಳೆಯುವ ಪ್ರಮುಖ ಜಿಲ್ಲೆಗಳಲ್ಲಿ ಹಾಸನ ಜಿಲ್ಲೆಯೂ ಒಂದು. ಜಿಲ್ಲೆಯ ಅರಸೀಕೆರೆ, ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ತೆಂಗನ್ನು ಪ್ರಮುಖ ತೋಟಗಾರಿಕಾ ಬೆಳೆಯಾಗಿ ಬೆಳೆಯಲಾಗುತ್ತದೆ. ಇದನ್ನೇ ನಂಬಿ ಜೀವನ ಸಾಗಿಸುತ್ತಿರುವ ರೈತರು ಇಂದು ಅತ್ಯಂತ ಸಂಕಷ್ಟದಲ್ಲಿದ್ದಾರೆ. ಬೆಳೆ ಮೇಲೆ ಮಾಡಿದ ಸಾಲಗಳನ್ನು ತೀರಿಸಲಾಗದೆ ಆತ್ಮಹತ್ಯೆಯ ದಾರಿಯನ್ನು ತುಳಿಯುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ತೆಂಗು ಬೆಳೆಗಾರರನ್ನು ಸಂಘಟಿಸಿ ಚಳುವಳಿ ರೂಪಿಸುವ ಸಂದರ್ಭದಲ್ಲಿ ಬೆಳಕಿಗೆ ಬಂದ ಕೆಲವು ಅಂಶಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುವ ಪ್ರಯತ್ನ ಇದಾಗಿದೆ.

ತೆಂಗು ಬೆಳೆಯುವ ರೈತರ ಸಂಕಷ್ಟಗಳು:

ತೆಂಗು ತೋಟಗಾರಿಕಾ ಬೆಳೆಯಾಗಿದ್ದು ಇದು ಬಹುವಾರ್ಷಿಕ ಬೆಳೆಯಾಗಿದೆ. ಒಂದು ಭಾರಿ ತೆಂಗಿನ ಸಸಿಯನ್ನು ನೆಟ್ಟರೆ ಅದು ಫಲ ಕೊಡಲು ಕನಿಷ್ಠ 8 ವರ್ಷಗಳು ಬೇಕಾಗುತ್ತದೆ. ಮಾತ್ರವಲ್ಲ ಒಮ್ಮೆ ತೆಂಗಿನ ತೋಟವನ್ನು ಪ್ರಾರಂಭಿಸಿದರೆ ಅದು ಬೇರೆ ಬೆಳೆಗಳ ರೀತಿ ನಷ್ಟವಾಯಿತು ಎನ್ನುವ ಕಾರಣಕ್ಕಾಗಿ ಬದಲಾಯಿಸಲು ಸಾಧ್ಯವಿಲ್ಲ. ತೆಂಗು, ಅಡಿಕೆ ಬೆಳೆಯುವ ರೈತರಿಗೆ ಅಥವಾ ಬಹುತೇಕ ತೋಟಗಾರಿಕಾ ಬೆಳೆ ಬೆಳೆಯುವ ರೈತರಿಗೆ ಇರುವ ಮೂಲಭೂತ ಸಮಸ್ಯೆಯಾಗಿದೆ. ತೆಂಗಿಗೆ ನೀರಿನ ಪೂರೈಕೆ ಬಹಳ ಮುಖ್ಯವಾಗಿದೆ. ಆದರೆ ಕಳೆದ 4–5 ವರ್ಷಗಳಿಂದ ಮಳೆ ಇಲ್ಲದೆ ತೀವ್ರ ಬರಗಾರವಿರುವುದರಿಂದ ಕೆರೆಗಳಲ್ಲಿ ನೀರಿಲ್ಲದಾಗಿದೆ ಮಾತ್ರವಲ್ಲ ಅಂತರ್ಜಲ ಬತ್ತಿ ಹೋಗಿರುವುದರಿಂದ ಕೊಳವೆ ಬಾವಿಗಳಲ್ಲೂ ನೀರು ಸಂಪೂರ್ಣ ನಿಂತು ಹೋಗಿದೆ. ಇವೆಲ್ಲವುಗಳ ನಡುವೆ ತೆಂಗಿಗೆ ಅದರದೇ ಆದ ಕೆಲವು ವಿಶೇಷ ರೋಗಗಳಾದ ನುಸಿರೋಗ, ಕಾಂಡ ಕೊರೆತ, ಕೆಂಪು ದ್ರಾವಣ ಸೂಸುವುದು ಈ ರೀತಿಯ ರೋಗಗಳಿಂದ ಮರಗಳನ್ನು ಆರೈಕೆ ಮಾಡುವುದು ರೈತರಿಗೆ ಒಂದು ಸವಾಲಿನ ಪ್ರಶ್ನೆಯಾಗಿದೆ.



ಮಾರುಕಟ್ಟೆಯ ಸಮಸ್ಯೆ :

ಇವೆಲ್ಲಾ ಸಮಸ್ಯೆಗಳ ನಡುವೆ ಬೆಳೆದ ಅಲ್ಪಸ್ವಲ್ಪ ಫಸಲು ಕೈಗೆ ಬಂದರೆ ಅದಕ್ಕೆ ಸರಿಯಾದ ಮಾರುಕಟ್ಟೆಯಾಗಲೀ ಅಥವಾ ನ್ಯಾಯಯುತ ಬೆಲೆಯಾಗಲಿ ಸಿಗುತ್ತಿಲ್ಲ. ಎಳನೀರು, ತೆಂಗಿನ ಕಾಯಿ ಮತ್ತು ಕೊಬ್ಬರಿ ಇವುಗಳು ಪ್ರಮುಖವಾಗಿ ಮಾರುಕಟ್ಟೆಗೆ ಬರುವ ತೆಂಗಿನ ಉತ್ಪನ್ನಗಳಾಗಿದ್ದು ಪ್ರಸ್ತುತ ಮಾರುಕಟ್ಟೆಯಲ್ಲಿ ಕೊಬ್ಬರಿ ದರ ಒಂದು ಕ್ವಿಂಟಾಲ್‌ಗೆ 6000 ದಿಂದ 6500 ರೂಗಳು ಮಾತ್ರವಾಗಿದೆ. ಕೃಷಿ ತಜ್ಞರಾದ ಡಾ.ಎಂ.ಎಸ್.ಸ್ವಾಮಿನಾಥನ್ ನವರ ಆಯೋಗವು ಕೃಷಿ ಉತ್ಪನ್ನಗಳಿಗೆ ಬೆಲೆ ನಿಗದಿ ಮಾಡುವಾಗ ಉತ್ಪಾದನಾ ವೆಚ್ಚದ ಜೊತೆಗೆ ಶೇ 50 ರಷ್ಟನ್ನು ಸೇರಿಸಿ ಬೆಲೆ ನಿಗದಿ ಮಾಡಬೇಕೆಂದು ಶಿಫಾರಸ್ಸು ನೀಡಿದ್ದಾರೆ. ಭಾತರದ ಕೃಷಿ ಉತ್ಪನ್ನಗಳ ವೆಚ್ಚವನ್ನು ಅಂದಾಜು ಮಾಡುವ ಕಮಿಷನ್ ಫಾರ್ ಅಗ್ರಿಕಲ್ಚರಲ್ ಕಾಸ್ಟ್ ಅಂಡ್ ಪ್ರೈಸ್‌ನ ಶಿಫಾರಸ್ಸು ಕರ್ನಾಟಕದಲ್ಲಿ ಸರಾಸರಿ ಅಂದಾಜು ಒಂದು ಕ್ವಿಂಟಾಲ್ ಕೊಬ್ಬರಿಯನ್ನು ಉತ್ಪಾದಿಸಲು 7,858 ರೂ ವೆಚ್ಚವಾಗುತ್ತದೆ. ಇದಕ್ಕೆ ಶೇಕಡ 50 ರಷ್ಟು ಅಂದರೆ 3,929 ನ್ನು ಸೇರಿಸಿದರೆ ಒಂದು ಕ್ವಿಂಟಾಲ್‌ಗೆ ಕೊಬ್ಬರಿಗೆ ಕನಿಷ್ಠ 11,787 ರೂ ಬೆಲೆ ನಿಗದಿಯಾಗಬೇಕು ಇದನ್ನೇ ನಾವು ಎಂಎಸ್‌ಪಿ (ಮಿನಿಮಮ್ ಸಪೋರ್ಟ್ ಪ್ರೈಸ್) 'ಬೆಂಬಲ ಬೆಲೆ' ಎಂದು ಕರೆಯುವುದು. ಆದರೆ ಈ ಬೆಲೆಗೂ ಇಂದು ಮಾರುಕಟ್ಟೆಯಲ್ಲಿರುವ ಬೆಲೆಗೂ ಅಜಗಜಾಂತರ ವ್ಯತ್ಯಾಸಗಳಿದ್ದು ಕರ್ನಾಟಕ ಪ್ರಾಂತ ರೈತ ಸಂಘ ಡಾ.ಸ್ವಾಮಿನಾಥನ್‌ರವರ ಶಿಫಾರಸ್ಸಿನ ಆಧಾರದ ಮೇಲೆ ಬೆಲೆ ನಿಗದಿ ಮಾಡಿ ಸರ್ಕಾರವೇ ಮಾರುಕಟ್ಟೆ ಒದಗಿಸಬೇಕೆಂದು ಒತ್ತಾಯಿಸುತ್ತದೆ.

ಕೇರಳ ಮಾದರಿಯ ಪರಿಹಾರ:

ಇತ್ತೀಚಿನ ದಿನಗಳಲ್ಲಿ ತೆಂಗಿನ ವಿಚಾರವನ್ನು ಯಾರೇ ಮಾತನಾಡಿದರೂ ಕೇರಳ ಮಾದರಿಯಲ್ಲಿ ಪರಿಹಾರ ನೀಡಬೇಕೆಂದು ಚರ್ಚೆಯಾಗುತ್ತಿದೆ. ಕೇರಳ ಮಾದರಿ ಬಗ್ಗೆ ಆ ರಾಜ್ಯದ ರೈತ ಮುಖಂಡರನ್ನು ಸಂಪರ್ಕಿಸಿ ಕೆಲವು ಮಾಹಿತಿಗಳನ್ನು ಕಲೆ ಹಾಕಲಾಗಿದೆ. ಕೇರಳದಲ್ಲಿ ಪ್ರತಿಯೊಂದು ತೆಂಗಿನ ಮರಕ್ಕೆ ಸರ್ಕಾರದಿಂದಲೇ ನೇರವಾಗಿ ವಿಮೆ ಮಾಡಿಸಲಾಗುವುದು. ಈ ವಿಮೆಯ ಪ್ರೀಮಿಯಂ ಹಣವನ್ನು ಸರ್ಕಾರವೇ ಭರಿಸುತ್ತದೆ. ವಿಮೆ ಮಾಡಿಸಿದ ಮರ ಯಾವುದೇ ಕಾರಣಗಳಿಂದ ನಾಶವಾದರೂ ಪ್ರತೀ ಮರಕ್ಕೆ 2,000 ರೂ ಪರಿಹಾರ ದೊರಕುತ್ತದೆ. ವಿಮೆ ಮಾಡಿಸದ ಮರಗಳಿಗೆ 500 ರೂ ಪರಿಹಾರ ಕೊಡಲಾಗುತ್ತಿದೆ. ಕೇರಳದಲ್ಲಿ ತೆಂಗಿನಕಾಯಿಗೆ ಪ್ರಸ್ತುತ ಮಾರುಕಟ್ಟೆಯಲ್ಲಿರುವ ಬೆಲೆಗೆ ಸರ್ಕಾರ ಪ್ರತಿ ಕಾಯಿಗೆ 3 ರೂ ಸೇರಿಸಿ ಸರ್ಕಾರಿ ಖರೀದಿ ಕೇಂದ್ರಗಳ ಮೂಲಕ ಖರೀದಿ ಮಾಡುತ್ತದೆ. ತೆಂಗಿನ ವ್ಯಾಲ್ಯೂ ಆಡೆಡ್ ಪ್ರಾಡೆಕ್ಟ್ ಕೈಗಾರಿಕೆಗಳಾದ ತೆಂಗಿನ ಎಣ್ಣೆ ತಯಾರಿಕೆ, ಕೊಬ್ಬರಿ ಎಣ್ಣೆ ತಯಾರಿಕೆ, ತೆಂಗಿನ ಪೌಡರ್ ತಯಾರಿಕೆ, ನಾರಿನ ವಸ್ತುಗಳ ತಯಾರಿಕೆ, ಎಳನೀರಿನ ಟೆಟ್ರಾ ಪ್ಯಾಕ್ ತಯಾರಿಕೆ ಇನ್ನೂ ಮುಂತಾದ ಕೈಗಾರಿಕೆಗಳನ್ನು ಸರ್ಕಾರ ಸ್ಥಾಪಿಸುವುದರ ಜೊತೆಗೆ ರೈತರು ಸಹಕಾರಿ ಪದ್ಧತಿಯ ಮೂಲಕ ಇಂತಹ ಕೈಗಾರಿಕೆಗಳನ್ನು ಸ್ಥಾಪಿಸಿದರೆ ಅದಕ್ಕೆ ಪ್ರೋತ್ಸಾಹಧನದ ಜೊತೆಗೆ ಮಾರುಕಟ್ಟೆಯ ಖಾತ್ರಿಯನ್ನೂ ಒದಗಿಸುತ್ತದೆ. ಕೇರಳದಲ್ಲಿ ಎಡರಂಗ ಸರ್ಕಾರ ಪೆಪ್ಸಿ, ಕೊಕ್ಕಾಕೋಲಾ ಉತ್ಪನ್ನಗಳ ಮಾರಾಟವನ್ನು ನಿಷೇಧಿಸಿದೆ. ಅದರ ಬದಲಿಗೆ ಎಳನೀರನ್ನ ಟೆಟ್ರಾ ಪ್ಯಾಕ್‌ಗಳ ಮೂಲಕ ಸರಬರಾಜು ಮಾಡುತ್ತಿದೆ. ಜೊತೆಗೆ ಪ್ರತೀ ತೆಂಗು ಬೆಳೆಗಾರರಿಗೂ ಮಾಸಿಕ ಪಿಂಚಣಿ 1100 ರೂಗಳನ್ನು ಸರ್ಕಾರ ಕೊಡುತ್ತಿದೆ.

ತೆಂಗು ಪುನಶ್ಚೇತನವೆಂಬ ಕಣ್ಣೊರೆಸುವ ನಾಟಕ:

ತೋಟಗಾರಿಕಾ ಇಲಾಖೆಯ ಅಂದಾಜಿನ ಪ್ರಕಾರವೇ ಹಾಸನ ಜಿಲ್ಲೆ ಒಂದರಲ್ಲೆ 66,206 ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯಲಾಗುತ್ತಿದ್ದು ಇದರಲ್ಲಿ ಅರಸೀಕೆರೆ ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲೇ 53,037 ಹೆಕ್ಟೇರ್ ನಷ್ಟು ತೆಂಗಿನ ಬೆಳೆ ಇದೆ. ಇದರಲ್ಲಿ ಚನ್ನರಾಯಪಟ್ಟಣ ಒಂದರಲ್ಲೇ ಸುಮಾರು 6,000 ಹೆಕ್ಟೇರ್ ಪ್ರದೇಶದಲ್ಲಿನ ತೆಂಗು ಬೆಳೆ ನಾಶವಾಗಿದೆ ಎಂದು ಅಂದಾಜಿಸಲಾಗಿದೆ. ಈ ಅಂದಾಜು ಮೂರು ತಿಂಗಳ ಹಿಂದಿನದಾಗಿದ್ದು ಈಗ ಇನ್ನೂ ಶೇ. 20 ರಷ್ಟು ಹೆಚ್ಚು ಬೆಳೆ ನಾಶವಾಗಿರಬಹುದೆಂದು ಅಧಿಕಾರಿಗಳ ಅಂದಾಜು. ಅಂದರೆ ಗ್ರಾಮಗಳಲ್ಲಿ ನಿಖರವಾದ ಸರ್ವೆಗಳನ್ನು ನಡೆಸದೆಯೇ ಮೇಲ್ಮಟ್ಟದ ಅಂದಾಜಿನಲ್ಲಿಯೇ ಪರಿಸ್ಥಿತಿ ಇಷ್ಟೊಂದು ಭೀಕರವಾಗಿರುವಾಗ ಇನ್ನು ರೈತರ ಬೇಡಿಕೆಯಂತೆ ಗ್ರಾಮವಾರು ಪ್ರತೀ ರೈತರ ತೋಟಗಳನ್ನು ಸರ್ವೆ ಮಾಡಿಸಿದರೆ ಅದರ ತೀವ್ರತೆ ಬಗ್ಗೆ ಇನ್ನೂ ಹೆಚ್ಚು ತಿಳಿಯುತ್ತದೆ. ಇದುವರೆಗೂ ನಾಶವಾಗಿರುವ ತೆಂಗು ಬೆಳೆಯನ್ನು ಪುನಶ್ಚೇತನ ಮಾಡುವ ಉದ್ದೇಶದಿಂದ ಸರ್ಕಾರ ಜಿಲ್ಲೆಗೆ 316 ಲಕ್ಷ ರೂ. ಗಳನ್ನು ಖರ್ಚು ಮಾಡಿದೆ ಎಂದು ವರದಿ ನೀಡುತ್ತದೆ. ಅದರಲ್ಲಿ ಚನ್ನರಾಯಪಟ್ಟಣ ತಾಲ್ಲೂಕಿಗೆ 82 ಲಕ್ಷ ರೂಪಾಯಿ ಖರ್ಚು ಮಾಡಲಾಗಿದೆ. ಅಂದರೆ 6,000 ಹೆಕ್ಟೇರ್ ತೆಂಗು ನಾಶವಾಗಿದ್ದರೆ ಒಂದು ಹೆಕ್ಟೇರ್‌ಗೆ ಸರಾಸರಿ 1366 ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ರೈತರ ಅಂದಾಜಿನ ಪ್ರಕಾರ ಒಂದು ಹೆಕ್ಟೇರ್‌ಗೆ ಸರಾಸರಿ 125 ತೆಂಗಿನ ಮರಗಳನ್ನು ಬೆಳೆಯಬಹುದು ಅಂದರೆ ಈಗ ಸರ್ಕಾರ ತೆಂಗು ಪುನಶ್ಚೇತನಕ್ಕೆಂದು ಒಂದು ಮರಕ್ಕೆ 10 ರೂಪಾಯಿಗಳನ್ನು ಖರ್ಚು ಮಾಡಿದೆ ಇದರಿಂದ ತೆಂಗಿನ ಪುನಶ್ಚೇತನ ಸಾಧ್ಯವಿಲ್ಲ ಎಂಬುದು ಎಲ್ಲರಿಗೂ ಅರ್ಥವಾಗುತ್ತದೆ. ಸರ್ಕಾರಗಳ ಇಂತಹ ನೀತಿಗಳೇ ಇಂದು ರೈತರನ್ನು ಸಂಕಷ್ಟಕ್ಕೆ ಸಿಲುಕಿಸುತ್ತಿವೆ. ರೈತರು ಸಾಲ ಮನ್ನಾ ಮಾಡಿ ಎಂದು ಬೇಡಿಕೆ ಇಟ್ಟರೆ ಕೇಂದ್ರದ ಮೇಲೆ ರಾಜ್ಯ, ರಾಜ್ಯದ ಮೇಲೆ ಕೇಂದ್ರ ದೂರು ಹೇಳುವುದು ಬಿಟ್ಟರೆ ರೈತರ ಬಗ್ಗೆ ಪ್ರಾಮಾಣಿಕ ಕಾಳಜಿಯನ್ನ ವ್ಯಕ್ತಪಡಿಸಲ್ಲಿಲ್ಲ. ಬದಲಾಗಿ ಅಂತಿಮವಾಗಿ ಎರಡೂ ಸರ್ಕಾರಗಳು ರೈತರ ಸಾಲವನ್ನು ಮನ್ನಾ ಮಾಡಲು ಸಾಧ್ಯವಿಲ್ಲ ಇದರಿಂದ ಸರ್ಕಾರಕ್ಕೆ ಆರ್ಥಿಕ ಹೊರೆಯಾಗುತ್ತದೆ ಎಂದು ಘೋಷಿಸಿವೆ. ಆದರೆ ಇಲ್ಲೊಂದು ಪ್ರಶ್ನೆ ಎಲ್ಲರನ್ನೂ ಯಾವಾಗಲೂ ಕಾಡುತ್ತಿರುತ್ತದೆ. ಅದೇನೆಂದರೆ ದೊಡ್ಡ ದೊಡ್ಡ ಕಾರ್ಪೊರೇಟ್ ಕಂಪನಿಗಳಿಗೆ ಲಕ್ಷಾಂತರ ಕೋಟಿ ರೂಪಾಯಿ ತೆರಿಗೆ ವಿನಾಯಿತಿ ನೀಡುವಾಗ ಸರ್ಕಾರಕ್ಕೆ ಆರ್ಥಿಕ ಹೊರೆಯಾಗುವುದಿಲ್ಲವೇ?

ತೆಂಗು ಬೆಳೆಗಾರರ ಹೋರಾಟ:

ತೆಂಗು ಬೆಳೆಗಾರರ ಸಮಸ್ಯೆ ಇಷ್ಟೊಂದು ತೀವ್ರವಾಗಿರುವುದನ್ನು ಗಮನಿಸಿದ ಕರ್ನಾಟಕ ಪ್ರಾಂತ ರೈತ ಸಂಘವು ಚನ್ನರಾಯಪಟ್ಟಣ ತಾಲ್ಲೂಕನ್ನು ಕೇಂದ್ರವಾಗಿಟ್ಟುಕೊಂಡು ತೆಂಗು ಬೆಳೆಗಾರರ ಸಮಾವೇಶವನ್ನು ಸಂಘಟಿಸಿ ಅಲ್ಲಿ ತೆಂಗು ಬೆಳೆಗಾರರ ಹೋರಾಟ ಸಮಿತಿಯನ್ನು ರಚಿಸಿ ಅದರ ನೇತೃತ್ವದಲ್ಲಿ ತೆಂಗು ಬೆಳೆಗಾರರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಏಪ್ರಿಲ್ 1ರಂದು ಚನ್ನರಾಯಪಟ್ಟಣ ತಹಸಿಲ್ದಾರ್ ಕಛೇರಿ ಎದುರು ಪ್ರತಿಭಟನೆಯನ್ನು ನಡೆಸಲಾಯಿತು. ಅಂದು ನಡೆದ ಈ ಹೋರಾಟದಲ್ಲಿ ಕೆಳಕಂಡ ಹಕ್ಕೊತ್ತಾಯಗಳನ್ನು ಇಡಲಾಗಿದೆ.

ಹಕ್ಕೊತ್ತಾಯಗಳು:

1. ನಷ್ಟಕ್ಕೊಳಗಾಗಿರುವ ತೆಂಗಿನ ಮರಗಳನ್ನು ಕೂಡಲೇ ನಿಖರವಾಗಿ ಸರ್ವೆ ಮಾಡಬೇಕು.
2. ತೆಂಗು ಬೆಳೆ ನಷ್ಟ ಪರಿಹಾರವನ್ನು ಕೇರಳ ಮಾದರಿಯಲ್ಲಿ ನೀಡಬೇಕು.
3. ತಾಲ್ಲೂಕಿನ ಎಲ್ಲಾ ಕೆರೆಗಳಿಗೂ ವರ್ಷಕ್ಕೆ ಒಂದು ಭಾರಿ ನೀರು ತುಂಬಿಸುವ ಯೋಜನೆಯನ್ನು ಜಾರಿಗೆ ತರಬೇಕು.
4. ತೋಟಗಾರಿಕಾ ಇಲಾಖೆಯೇ ತೆಂಗಿನ ತೋಟಗಳಿಗೆ ಹನಿ ನೀರಾವರಿ ಪದ್ಧತಿಯನ್ನು ಉಚಿತವಾಗಿ ಅಳವಡಿಸಿಕೊಡಬೇಕು.
5. ರೈತರ ಎಲ್ಲಾ ರೀತಿಯ ಸಾಲಗಳನ್ನು ಮನ್ನಾ ಮಾಡಬೇಕು.
6. ತೆಂಗಿನ ಉತ್ಪನ್ನಗಳಾದ ತೆಂಗಿನಕಾಯಿ ಮತ್ತು ಕೊಬ್ಬರಿಗೆ ಡಾ.ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ಬೆಲೆ ನಿಗದಿ ಮಾಡಿ ಸರ್ಕಾರವೇ ಮಾರುಕಟ್ಟೆ ಒದಗಿಸಬೇಕು.
7. ವಿದೇಶಗಳಿಂದ ಆಮದು ಮಾಡಿಕೊಳ್ಳುವ ತೆಂಗಿನ ಉತ್ಪನ್ನಗಳ ಮೇಲೆ ಹೆಚ್ಚು ಸುಂಕ ವಿಧಿಸಬೇಕು.
8. ರೈತರ ಕೊಳವೆ ಬಾವಿಗಳ ನೋಂದಣಿಯನ್ನು ಉಚಿತವಾಗಿ ಮಾಡಬೇಕು ಮತ್ತು ದಿನಪೂರ್ತಿ ವಿದ್ಯುತ್ ನೀಡಬೇಕು.
9. ಎಲ್ಲಾ ರೈತರಿಗೂ ಬೆಳೆ ವಿಮೆ ಮತ್ತು ಬರ ಪರಿಹಾರ ನೀಡಬೇಕು.

●

ಕಾಂಗ್ರೆಸ್‌ನ ತಾತ್ವಿಕ ದಿವಾಳಿಕೋರತನ..........

ಪುಟ 8 ರಿಂದ

ಪಕ್ಷದ ಅತ್ಯಂತ ಹೀನ ಕ್ರಿಮಿನಲ್ ಅಪರಾಧವಾಗಿ ಇತಿಹಾಸದಲ್ಲಿ ದಾಖಲಾಯ್ತು. ಮತ್ತೆ 2004 ರಿಂದ 2013 ವರೆಗೆ ಕೇಂದ್ರದಲ್ಲಿ ಅಧಿಕಾರ ನಡೆಸಿದ ಕಾಂಗ್ರೆಸ್ ಪಕ್ಷದ ಮನಮೋಹನ್ ಸಿಂಗ್ ಸರ್ಕಾರದ ಅತ್ಯಂತ ದಿವಾಳಿಕೋರ ಆರ್ಥಿಕ ಸಾಮಾಜಿಕ ನೀತಿಗಳಿಂದಾಗಿ ಇಂದು, ಹಿಂದುತ್ವವಾದದ ಶಕ್ತಿಗಳ ಕೈಗೆ ದೇಶವನ್ನು ಒಪ್ಪಿಸಿದರು. ಯಾವುದೇ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಕೋಮುವಾದವನ್ನು ಎದುರಿಸಲು ಬೇಕಾದ ತಾತ್ವಿಕ ಸ್ಪಷ್ಟತೆಯನ್ನು ಪಡೆದಿರಲಿಲ್ಲ ಅಥವಾ ತಾನು ಅಧಿಕಾರದಲ್ಲಿದ್ದಾಗ ಕೋಮುವಾದಿ ಶಕ್ತಿಗಳ ವಿರುದ್ಧ ರಾಜಕೀಯ ಹೋರಾಟವನ್ನು ನಡೆಸಲಿಲ್ಲ ಅಥವಾ ಆಡಳಿತಾತ್ಮಕ ಕ್ರಮಗಳಿಂದ ಕೋಮುವಾದವನ್ನು ತಡೆಯುವ ಪ್ರಯತ್ನವನ್ನು ಮಾಡಲಿಲ್ಲ. ಜೊತೆಗೆ ಅಧಿಕಾರದಲ್ಲಿದ್ದಾಗ ಅದು ಅನುಸರಿಸಿದ ನೀತಿಗಳು ಮತ್ತು ಧೋರಣೆಗಳು ಕೂಡ ಬಲಪಂಥೀಯ ಶಕ್ತಿಗಳಿಗೆ ಸುವರ್ಣಾವಕಾಶವನ್ನು ಒದಗಿಸಿಕೊಟ್ಟಿತು.

ಪ್ರಾರಂಭದಿಂದಲೂ ಕೋಮುವಾದಿ ಶಕ್ತಿಗಳನ್ನು ತಡೆಯಲು ಬೇಕಾದ ಸ್ಪಷ್ಟ ವೈಜ್ಞಾನಿಕ ಧೋರಣೆ ಇರಲಿಲ್ಲ ಮತ್ತು ಜಾತ್ಯಾತೀತ ವಾದಕ್ಕೆ ತನ್ನ ಬದ್ಧತೆಯನ್ನು ತೋರಿಸಲಿಲ್ಲ. ಭೂಮಾಲಕ ವರ್ಗದ ಜತೆ ಹೊಂದಾಣಿಕೆ ಮಾಡುತ್ತಾ ಅವರ ಜತೆಗೆ ಕಾಂಗ್ರೆಸ್ ಶಾಮೀಲಾಗಿದ್ದು ಇಂತಹ ವೈಜ್ಞಾನಿಕ ಧೋರಣೆ ಮತ್ತು ಬದ್ಧತೆಯ ಅಭಾವಕ್ಕೆ ಮುಖ್ಯ ಕಾರಣ. ಕಾಂಗ್ರೆಸ್ ಪಕ್ಷಕ್ಕೆ ಜಾತ್ಯಾತೀತವಾದ ಎನ್ನುವುದು ಪರಿಗಣನೆ ಮಾತ್ರವೇ ಹೊರತು ಬದ್ಧತೆಯಿಂದಲ್ಲಾ. ಇದರಿಂದಾಗಿ ನಿರಂತರವಾಗಿ ದಿವಾಳಿಕೋರತನವನ್ನು ಕಾಂಗ್ರೆಸ್ ಪಕ್ಷ ಪ್ರದರ್ಶಿಸುತ್ತಾ ಬಂದಿದೆ ಮತ್ತು ಜನವಿರೋಧಿ ಆರ್ಥಿಕ ನೀತಿಗಳಲ್ಲೇ ತೊಡಗಿ ಇಂದು ರಾಜಕೀಯವಾಗಿ ಬಲಹೀನಗೊಂಡಿದೆ. ಇದರಿಂದಾಗಿ ಪ್ರಾರಂಭದಿಂದಲೂ ಜಾತ್ಯಾತೀತತೆ ಎಂಬುದು ಕಾಂಗ್ರೆಸ್ ಪಕ್ಷಕ್ಕೆ ಸೋಗಲಾಡಿತನದ ಮುಖವಾಡವಾಗಿತ್ತೇ ಹೊರತು, ಅದು ಎಂದೂ ಕೂಡಾ ಜಾತ್ಯಾತೀತತೆಗೆ ಬದ್ಧತೆಯನ್ನು ತೋರಲಿಲ್ಲ. ಬದಲಿಗೆ, ರಾಜಕೀಯ ಲಾಭಕ್ಕಾಗಿ ಜಾತ್ಯಾತೀತತೆಯನ್ನು ಉಪಯೋಗಿಸಿತೇ ಹೊರತು, ನಿಜವಾದ ಜಾತ್ಯಾತೀತತೆ ಆಧಾರದಲ್ಲಿ ಈ ದೇಶವನ್ನು ಮುನ್ನಡೆಸಲಾಗಲಿಲ್ಲ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷದಲ್ಲಿನ ಇಂದಿನ ಬದಲಾವಣೆಗಳನ್ನು ನೋಡಿದರೆ ಆಶ್ಚರ್ಯ ಪಡುವುದೇನಿಲ್ಲ. 60 ವರ್ಷಗಳ ಕಾಲ ಎಲ್ಲಾ ಅಧಿಕಾರಗಳನ್ನು ಅನುಭವಿಸಿದ 84 ವರ್ಷದ ಎಸ್.ಎಂ. ಕೃಷ್ಣ, ಅವರಷ್ಟೇ ವಯಸ್ಸಾಗಿರುವ ಹಿರಿಯರು ಆದ ಜಾಫರ್ ಶರೀಫ್ ಅಂತಹವರು ಆರ್.ಎಸ್.ಎಸ್.ನ ಮೋಹನ್ ಭಾಗವತ್ ರವರನ್ನು ರಾಷ್ಟ್ರಪತಿ ಮಾಡಿದರೆ ತಪ್ಪಿಲ್ಲ ಎಂದು ಹೇಳಿದರೆ ಆಶ್ಚರ್ಯ ಪಡುವುದೇನಿಲ್ಲ. ಬದಲಿಗೆ, ಇವರುಗಳ ಅವಕಾಶವಾದಿ ರಾಜಕೀಯ ಅಧಃಪತನಕ್ಕೆ ಅಸಹ್ಯಪಡಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಎಡ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಜವಾಬ್ದಾರಿ ಹೆಚ್ಚಿದೆ.

●

ಮನರೇಗದ ಮೇಲೆ ಮತ್ತೊಂದು ಸರಕಾರೀ ದಾಳಿ: ಬಡ ಕೆಲಸಗಾರರ ಸಾಮಾಜಿಕ ಭದ್ರತೆಯ ಸೌಲಭ್ಯಗಳನ್ನು ಕಿತ್ತುಕೊಳ್ಳುವ ಸುತ್ತೋಲೆ



ಸುಮಾರು 5 ಕೋಟಿ ಗ್ರಾಮೀಣ ಕುಟುಂಬಗಳಿಗೆ ಸ್ವಲ್ಪ ಪ್ರಮಾಣದಲ್ಲಾದರೂ ಜೀವನಾಧಾರ ಕಲ್ಪಿಸಿರುವ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ(ಮನರೇಗ) ಮೇಲೆ ಮೇ 2014ರಿಂದ ಮೋದಿ ಸರಕಾರ ಅಧಿಕಾರ ವಹಿಸಿಕೊಂಡ ಮೇ 2014 ರಿಂದಲೇ ದಾಳಿ ಆರಂಭವಾಗಿತ್ತು. ಬಜೆಟ್‌ಗಳಲ್ಲಿ ಕಾನೂನು ಪ್ರಕಾರ ವರ್ಷದಲ್ಲಿ 100 ದಿನಗಳ ಉದ್ಯೋಗ ಒದಗಿಸಲು ಅಗತ್ಯವಾದ ಹಣವನ್ನು ಒದಗಿಸದೆ ಸತತವಾಗಿ ಕಡಿತ ಮಾಡಿಕೊಂಡು ಬರಲಾಗಿದೆ.

ಈಗ ಫೆಬ್ರುವರಿ 10ರಂದು ಭಾರತ ಸರಕಾರದ ಕಾರ್ಮಿಕ ಮಂತ್ರಾಲಯ ಎಲ್ಲ ರಾಜ್ಯ ಸರಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸರಕಾರಗಳಿಗೆ ಒಂದು ಸುತ್ತೋಲೆ ಕಳಿಸಿ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಕಾಯ್ದೆಯ ಅಡಿಯಲ್ಲಿ ಮನರೇಗ ಕೆಲಸಗಾರರಿಗೆ ನೀಡಿರುವ ಸೌಲಭ್ಯಗಳನ್ನು ಇನ್ನು ಮುಂದೆ ಕೊಡಬಾರದು ಎಂದು ತಾಕೀತು ಮಾಡಿದೆ.

ಇದರಿಂದಾಗಿ ಬಹುಪಾಲು ಮಹಿಳೆಯರೇ ಇರುವ ಈ ಲಕ್ಷಾಂತರ ಮನರೇಗ ಕಾರ್ಮಿಕರ ಮಕ್ಕಳಿಗೆ ಸಿಗುತ್ತಿದ್ದ ವಿದ್ಯಾರ್ಥಿವೇತನಗಳು ನಿಂತು ಹೋಗುತ್ತವೆ, ವೈದ್ಯಕೀಯ ನೆರವು ಸಿಗುವುದಿಲ್ಲ, ಮಕ್ಕಳ ಮದುವೆಗೆ ಹಣಕಾಸು ನೆರವು ಸಿಗುವುದಿಲ್ಲ, ತಮ್ಮ ಮನೆ ರಿಪೇರಿ ಮಾಡಿಕೊಳ್ಳಲು ಹಣಃ ಸಿಗದಂತಾಗುತ್ತದೆ.

ಇದನ್ನು ಸಿಐಟಿಯು ಬಲವಾಗಿ ಖಂಡಿಸಿದೆ. ಸಿಐಟಿಯು ನೇತೃತ್ವದಲ್ಲಿ ಕಾರ್ಮಿಕರ ಸತತ ಹೋರಾಟಗಳಿಂದಾಗಿ 1996ರಲ್ಲಿ ಕೇಂದ್ರ ಸರಕಾರ 'ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರು(ಉದ್ಯೋಗ ಮತ್ತು ಸೇವಾ ಶರತ್ತುಗಳ ನಿಯಂತ್ರಣ) ಕಾಯ್ದೆ' ಹಾಗೂ 'ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ತೆರಿಗೆ ಕಾಯ್ದೆ'ಯನ್ನು ತಂದಿತು. ಇದರ ಅಡಿಯಲ್ಲಿ ರಾಜ್ಯ ಸರಕಾರಗಳು ಈ ಕಾರ್ಮಿಕರಿಗೆ ಕಲ್ಯಾಣ ಮಂಡಳಿ ರಚಿಸಬೇಕಾಗಿತ್ತು. ಒಂದು ವರ್ಷದಲ್ಲಿ 90 ದಿನಗಳಿಗಿಂತ ಹೆಚ್ಚು ಕೆಲಸ ಮಾಡಿರುವ ಕಟ್ಟಡ ಮತ್ತು ಇತರ ನಿರ್ಮಾಣ ವಲಯದ ಕಾರ್ಮಿಕರನ್ನು ಈ ಮಂಡಳಿಗಳು ನೊಂದಾಯಿಸಿಕೊಳ್ಳಬೇಕು. ಹೀಗೆ ನೋಂದಾಯಿತರಾದ ಕಾರ್ಮಿಕರು ಅಪಘಾತಗಳಾದಲ್ಲಿ ನೆರವು, ಪೆನ್ಶನ್, ಮಕ್ಕಳ ವಿವಾಹಕ್ಕೆ ಹಣಕಾಸು ಸಹಾಯ ಮತ್ತು ಇಬ್ಬರು ಮಕ್ಕಳಿಗೆ ವಿದ್ಯಾರ್ಥಿವೇತನದ ಸೌಲಭ್ಯಗಳಿಗೆ ಅರ್ಹರಾಗುತ್ತಾರೆ. ಕಲ್ಯಾಣ ತೆರಿಗೆ ಸಂಗ್ರಹದಿಂದ ಇವನ್ನು ಕೊಡಲಾಗುತ್ತದೆ.

ಈ ಕಾನೂನುಗಳು ಸರಿಯಾಗಿ ಜಾರಿಯಾಗುತ್ತಿಲ್ಲ ಎಂದು ಮನಗಂಡ ಸುಪ್ರಿಂ ಕೋರ್ಟ್ 2012ರಲ್ಲಿ ಈ ಕಾಯ್ದೆಯ ಪರಿಣಾಮಕಾರಿ ಜಾರಿಗಾಗಿ ಸೂಕ್ತ ನಿರ್ದೇಶನಗಳನ್ನು ರಾಜ್ಯ ಸರಕಾರಗಳಿಗೆ ಕೇಂದ್ರ ಸರಕಾರ ನೀಡಬೇಕು ಎಂದು ತಿಳಿಸಿತು. ಕಟ್ಟಡ ಮತ್ತು ಇತರ ನಿರ್ಮಾಣ ಕಾಮಗಾರಿಗಳಲ್ಲಿ ದುಡಿಯುವ ಕಾರ್ಮಿಕರನ್ನು ಸಾಕಷ್ಟು ಸಂಖ್ಯೆಯಲ್ಲಿ ನೋಂದಾಯಿಸಲಾಗುತ್ತಿಲ್ಲವಾದ್ದರಿಂದ ಕೇಂದ್ರ ಸರಕಾರ ಮನರೇಗದ ಅಡಿಯಲ್ಲಿ 50 ದಿನಗಳು ಅಥವ ಹೆಚ್ಚು ಕೆಲಸ ಮಾಡಿರುವವರನ್ನು ಒಂದು ಸರಳ ವಿಧಾನದ ಮೂಲಕ ಈ ಕಲ್ಯಾಣ ಮಂಡಳಿಗಳಲ್ಲಿ ನೋಂದಾಯಿಸಬೇಕು ಎಂದು ನಿರ್ದೇಶಿಸಿತು.

ಮೊದಲಿಂದಲೂ ಎಡಪಕ್ಷಗಳ ಸತತ ಒತ್ತಡಗಳಿಂದಾಗಿ ಯುಪಿಎ–1 ಸರಕಾರ ಅರೆಮನಸ್ಸಿನಿಂದಲೇ ಜಾರಿ ಮಾಡುತ್ತಿದ್ದರೆ, ಬಿಜೆಪಿ ಅದನ್ನು ವಿರೋಧಿಸುತ್ತ ಬಂದಿತ್ತು. ಆದ್ದರಿಂದ 2014ರಲ್ಲಿ ಅಧಿಕಾರಕ್ಕೆ ಬಂದಾಗ ಮೊದಲು ಅದು ನಿಷ್ಪ್ರಯೋಜಕ, ಯಾವುದೇ ಸಾರ್ವಜನಿಕ ಆಸ್ತಿಗಳನ್ನು ನಿರ್ಮಿಸುತ್ತಿಲ್ಲ, ಭ್ರಷ್ಟಾಚಾರದ ಆಗರವಾಗಿದೆ ಎಂದೆಲ್ಲ ಆಪಾದಿಸಿತ್ತು. ಆದರೆ ಇದು ಕೇವಲ ಒಂದು ಯೋಜನೆಯಾಗಿರದೆ ಕಾನೂನೇ ಆಗಿದ್ದರಿಂದ ಅದನ್ನು ಸುಲಭವಾಗಿ ಕೈ ಬಿಡುವಂತಿರಲಿಲ್ಲ. ಆದ್ದರಿಂದ ಇದನ್ನು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ದುರ್ಬಲಗೊಳಿಸುತ್ತ ಬರಲಾರಂಭಿಸಿತು. ಈ ಮೇಲೆ ಹೇಳಿದಂತೆ ಬಜೆಟ್ ಅನುದಾನವನ್ನು ಕಡಿತ ಮಾಡುತ್ತ ಬರಲಾಗಿದೆ. ಕೆಲವೊಮ್ಮೆ ಸಿಮೆಂಟ್, ಮರಳು ಮುಂತಾದ ನಿರ್ಮಾಣ ಸಾಮಗ್ರಿಗಳಿಗೆ ಹಣ ನೀಡಿಕೆಯನ್ನು ನಿಲ್ಲಿಸಿದರೆ, ಇನ್ನು ಕೆಲವು ಬಾರಿ ಮನರೇಗ ಕಾರ್ಮಿಕರಿಗೆ ಕೂಲಿ ಪಾವತಿಗೆ ಹಣವನ್ನು ಬಿಡುಗಡೆ ಮಾಡುವುದನ್ನು ತಡೆಯಿತು ಅಥವ ವಿಳಂಬ ಮಾಡಲಾರಂಭಿಸಿತು.

ಈಗ ಈ ಸರಕಾರ ಮನರೇಗ ಕಾರ್ಮಿಕರಲ್ಲಿ ವರ್ಷದಲ್ಲಿ 50 ದಿನಗಳಷ್ಟು ಕೆಲಸ ಮಾಡಿದ ಕೆಲವರಿಗಾದರೂ ಲಭ್ಯವಿದ್ದ ಸಾಮಾಜಿಕ ಕಲ್ಯಾಣ ಸೌಲಭ್ಯಗಳನ್ನು ಕಿತ್ತುಕೊಳ್ಳುವ ನಿರ್ಧಾರ ಮಾಡಿದೆ. ಈ ಕಾಯ್ದೆಯ ಪರಿಣಾಮಕಾರಿ ಜಾರಿಯ ಬದಲು ಬಡ ಕಾರ್ಮಿಕರಿಗೆ ಸಲ್ಲಬೇಕಾದ ಸೌಲಭ್ಯಗಳನ್ನು ವಂಚಿಸುತ್ತಿರುವುದು ಅತ್ಯಂತ ಖೇದಕರ ಎಂದು ಸಿಐಟಿಯು ಹೇಳಿದೆ.

ಅದರ ಪ್ರಕಾರ ಈ ಕಾಯ್ದೆಯ ಅಡಿಯಲ್ಲಿ ದಾಖಲು ಮಾಡಿಕೊಂಡಿರುವ ಕಟ್ಟಡ ಕಾರ್ಮಿಕರ ಪ್ರಮಾಣ ಕೇವಲ 21%. ಈ ಕಲ್ಯಾಣ ಕಾಯ್ದೆಯ ಅಡಿಯಲ್ಲಿ 70270 ಕೋಟಿ ರೂ. ವಸೂಲಾಗಬೇಕಿತ್ತು. ಆದರೆ ವಸೂಲಾದ್ದು ಕೇವಲ 24277.38 ಕೋಟಿ ರೂ.ಗಳ ಮಾತ್ರ. ಅದರಲ್ಲೂ ಕಾರ್ಮಿಕರಿಗೆ ನೀಡಿದ ಸೌಲಭ್ಯದ ಮೊತ್ತ ಕೇವಲ 5684.8 ಕೋಟಿ ರೂ. ಮಾತ್ರ.

ಮನರೇಗಕ್ಕೆ ಬಜೆಟ್ ಕಡಿತಗಳಿಂದಾಗಿ ಈಗಾಗಲೇ ಕೆಲಸ ಕೇಳುವ ಕೆಲಸಗಾರರಿಗೆ ಕಾನೂನುಪ್ರಕಾರ ಸಿಗಬೇಕಾದ ಕನಿಷ್ಟ 100ದಿನಗಳ ಕೆಲಸ ಸಿಗುತ್ತಿಲ್ಲ. ಒಂದು ವರ್ಷದಲ್ಲಿ ಸಿಕ್ಕ ಸರಾಸರಿ ಕೆಲಸದ ಪ್ರಮಾಣ 50 ದಿನಗಳಿಗಿಂತಲೂ ಕಡಿಮೆಯಾಗಿ ಬಹಳಷ್ಟು ಕೆಲಸಗಾರರಿಗೆ ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯ ಪ್ರಯೋಜನ ಸಿಗದಂತಾಗಿತ್ತು. ಈ ಪರಿಸ್ಥಿತಿಯನ್ನು ಉತ್ತಮಪಡಿಸುವ ಬದಲು ಸರಕಾರ ಆ ಸೌಲಭ್ಯವನ್ನೇ ಹಿಂತೆಗೆದುಕೊಂಡಿದೆ.

ಸರಕಾರ ತಕ್ಷಣವೇ ಈ ಸುತ್ತೋಲೆಯನ್ನು ಹಿಂದಕ್ಕೆ ಪಡೆಯಬೇಕು ಎಂದು ಆಗ್ರಹಿಸಿರುವ ಸಿಐಟಿಯು ಎಲ್ಲ ಮನರೇಗ ಕಾರ್ಮಿಕರ ಮತ್ತು ಕಟ್ಟಡ ಕಾರ್ಮಿಕರ ಸಂಘಟನೆಗಳು ಒಂದುಗೂಡಿ ಈ ಸುತ್ತೋಲೆಯನ್ನು ಹಿಂತೆಗೆದುಕೊಳ್ಳುವಂತೆ ಸರಕಾರದ ಮೇಲೆ ಒತ್ತಡ ತರಬೇಕೆಂದು ಕರೆ ನೀಡಿದೆ.

18 ತಿಂಗಳಾದರೂ ಬಿಹಾರ ತಲುಪದ ಪ್ರಧಾನಿ ಪ್ಯಾಕೇಜ್

2015ರಲ್ಲಿ ಬಿಹಾರ ಚುನಾವಣಾ ಪ್ರಚಾರದ ವೇಳೆಯಲ್ಲಿ ಪ್ರಧಾನ ಮಂತ್ರಿಗಳು 1.25ಲಕ್ಷ ಕೋಟಿ ರೂ.ಗಳ ಪ್ಯಾಕೇಜನ್ನು ಘೋಷಿಸಿದ್ದರು. ಆಗ ಈ ಬಗ್ಗೆ ಬಹಳ ವಾದ–ವಿವಾದ–ಚರ್ಚೆಗಳು ನಡೆದವು.

ಆ ಘೋಷಣೆಯ ಪ್ರಯೋಜನ ಬಿಜೆಪಿಗೆ ದಕ್ಕಲಿಲ್ಲ. ಆಗ ಪತ್ರಿಪಕ್ಷಗಳು ಗೇಲಿ ಮಾಡಿದಂತೆ ಈ ಪ್ಯಾಕೇಜ್‌ಗಾಗಿ ಬಿಹಾರ ಇನ್ನೂ ಕಾಯುತ್ತಲೇ ಇದೆ ಎಂದು ಮಾಹಿತಿ ಹಕ್ಕು(ಆರ್‌ಟಿಐ) ಮಾಹಿತಿಯಿಂದ ಖಾತ್ರಿಯಾಗಿದೆ. ನೇರವಾಗಿ ಉತ್ತರಿಸಲು ನಿರಾಕರಿಸಿದ ಕೇಂದ್ರ ಹಣಕಾಸು ಇಲಾಖೆಯ ಡೆಪ್ಯುಟಿ ಡೈರೆಕ್ಟರ್ ಹಂತ–ಹಂತವಾಗಿ ಪ್ರಾಜೆಕ್ಟ್‌ಗಳನ್ನು ಪೂರ್ಣಗೊಳಿಸಲಾಗುವುದು, ಆದರೆ ಇದುವರೆಗೂ ಒಂದು ಪೈಸೆಯನ್ನೂ ನೀಡಲಾಗಿಲ್ಲ'ಂದು ಉತ್ತರಿಸಿರುವುದಾಗಿ ಈ ಬಗ್ಗೆ ಪ್ರಶ್ನೆ ಕೇಳಿದ ಆರ್‌ಟಿಐ ಕಾರ್ಯಕರ್ತ ಅನಿಲ್ ಗಲಗಲಿ ಹೇಳಿದ್ದಾರೆ.

'ಗೋರಕ್ಷಕ'ರು ಪುಂಡಾಟಿಕೆ ಮಾಡಿಲ್ಲ, 'ಸಂವಿಧಾನ ನಿಷೇಧಿಸಿದ' ಆಹಾರ ತಿನ್ನಬೇಡಿ ಎನ್ನುವ ಮಂತ್ರಿವರ್ಯರುಗಳು!

ರಾಜಸ್ತಾನದ ಅಲವರ್‌ನಲ್ಲಿ 'ಗೋರಕ್ಷಕರು' ಎಂದು ಹೇಳಿಕೊಳ್ಳುವ ಪಡೆಗಳ ಮತ್ತೊಂದು ಹೀನಕೃತ್ಯ ಜಗಜ್ಜಾಹೀರಾದರೂ ಮೋದಿ ಸರಕಾರದ ಸಂಸದೀಯ ವ್ಯವಹಾರಗಳ ರಾಜ್ಯ ಮಂತ್ರಿಗಳ ಪ್ರಕಾರ ಇಂತಹದೊಂದು ಘಟನೆ ನಡೆದೇ ಇಲ್ಲ! ಇದನ್ನು ಅವರು ರಾಜ್ಯಸಭೆಯಲ್ಲೇ ಯಾವ ಮುಜುಗರವೂ ಇಲ್ಲದೆ ಹೇಳಿದ್ದಾರೆ.

"ನಮ್ಮ ದೇಶದಲ್ಲಿ ನಾವು ಹತ್ಯೆಯ ಸಮರ್ಥನೆ ಮಾಡುತ್ತೇವೆ ಎಂಬ ಸಂದೇಶ ಹೋಗಬಾರದು. ..ಆದ್ದರಿಂದ ಇದು ಸೂಕ್ಷ್ಮ ವಿಷಯ.. ಕೋಟಿಗಟ್ಟಲೆ ಜನಗಳ ಭಾವನೆಯೊಂದಿಗೆ ಬೆಸೆದುಕೊಂಡಿರುವ ಪ್ರಶ್ನೆ. ಆದ್ದರಿಂದ ಯಾವ ನಿರ್ದಿಷ್ಟ ರಾಜ್ಯದ ಬಗ್ಗೆ ಹೇಳಲಾಗುತ್ತಿದೆಯೋ, ಅಂತಹ ಯಾವುದೇ ಘಟನೆ ಹೇಳಲಾಗುತ್ತಿರುವ ರೀತಿಯಲ್ಲಿ ನಡೆದಿಲ್ಲ, ಯಾವ ಮಾಧ್ಯಮ ವರದಿಯ ಬಗ್ಗೆ ಹೇಳಲಾಗುತ್ತಿದೆಯೋ ಆ ರಾಜ್ಯದ ಸರಕಾರ ಅದನ್ನಾಗಲೇ ಖಂಡಿಸಿದೆ" ಎಂದು ಮಂತ್ರಿವರ್ಯರು ಹೇಳಿದರು ಎಂದು ವರದಿಯಾಗಿದೆ.

ಅವರು ಹೇಳಿದ ರಾಜ್ಯ ಸರಕಾರದ 'ಖಂಡನೆ' ಬಂದ ನಂತರ ಈ ಹೇಳಿಕೆ ನೀಡುವ ವೇಳೆಗೆ ಹಲ್ಲೆಗೊಳಗಾದವರು ಗೋವುಗಳ ಕಳ್ಳ ಸಾಗಾಣಿಕೆಯಲ್ಲಿ ತೊಡಗಿರಲಿಲ್ಲ, ಬದಲಿಗೆ ಅವರೆಲ್ಲ ಡೈರಿ ರೈತರಾಗಿದ್ದು ಹೈನುಗಾರಿಕೆಗೆ ಹಸುಗಳನ್ನು ಖರೀದಿಸಿದ್ದರು ಎಂಬುದು ಪುರಾವೆ ಸಹಿತ ಸ್ಪಷ್ಟವಾಗಿತ್ತು, ಇದು ರಿವರ್ಸ್ 'ತುಷ್ಟೀಕರಣ'ದ ಮಾದರಿ ಇರಬಹುದೇನೋ ಎಂದೊಬ್ಬ ಟಿಪ್ಪಣಿಗಾರರು ಹೇಳಿದ್ದಾರೆ.

ಈ ನಡುವೆ ಮೋದಿ ಸರಕಾರದ ಮತ್ತೊಬ್ಬ ಮಂತ್ರಿ(ಬಹಳ ಸೀನಿಯರ್ ಮಂತ್ರಿ) ನಮ್ಮ ಆಯ್ಕೆಯ ಆಹಾರವನ್ನು ತಿನ್ನಬಹುದು, ಆದರೆ ಸಂವಿಧಾನ ನಿಷೇಧಿಸಿದ ಆಹಾರ ತಿನ್ನಬಾರದು ಎಂದರಂತೆ. ಸಂವಿಧಾನ ಯಾವ ಆಹಾರವನ್ನು ನಿಷೇಧಿಸಿದೆ ಎಂದು ಈ ಮಾನ್ಯ ಮಂತ್ರಿ ಹೇಳಬಲ್ಲರೇ ಎಂದು ಇನ್ನೊಬ್ಬ ಟಿಪ್ಪಣಿಗಾರರು ಕೇಳುತ್ತಾರೆ.

'ಗೋರಕ್ಷಕ' ಸರಕಾರಕ್ಕೆ ಆದೇಶ: ವಿವೇಚನಾಹೀನ ಕ್ರಿಯೆಗಳ ಬಗ್ಗೆ ವಿವೇಚಿಸಿ 10 ದಿನದಲ್ಲಿ ಉತ್ತರಿಸಿ


ಕಾನೂನುಬಾಹಿರ ಕಸಾಯೀ ಖಾನೆಗಳು ಮತ್ತು ಪರವಾನಿಗೆ ಇಲ್ಲದ ಮಾಂಸ ವ್ಯಾಪಾರವನ್ನು ನಿಲ್ಲಿಸುವ ಹೆಸರಲ್ಲಿ ಉತ್ತರ ಪ್ರದೇಶ ಆಡಳಿತ ನಡೆಸಿರುವ ಕಾರ್ಯಾಚರಣೆಗಳು ವಿವೇಚನೆಯಿಲ್ಲದ್ದು, ಈ ಬಗ್ಗೆ ಸರಿಯಾಗಿ ವಿವೇಚಿಸಿ, ಇವು ಸಂವಿಧಾನದ ಕಲಮು 19(ಜಿ) ನೀಡಿರುವ ಮಾಂಸದ ವ್ಯಾಪಾರಿಗಳ ಹಕ್ಕಿನ ಮತ್ತು ಕಲಮು 21ರ ಅಡಿಯಲ್ಲಿ ನೀಡಿರುವ ಆಹಾರ ಬಳಕೆದಾರರ ಹಕ್ಕಿನ ಉಲ್ಲಂಘನೆಯಾಗುವುದಿಲ್ಲವೇ ಎಂದು ನ್ಯಾಯಾಲಯಕ್ಕೆ 10 ದಿನಗಳೊಳಗೆ ವರದಿ ನೀಡಬೇಕು ಎಂದು ಅಲಹಬಾದ್ ಹೈಕೋರ್ಟಿನ ಲಕ್ನೌ ಪೀಠ ಉತ್ತರಪ್ರದೇಶದ ಆಡಳಿತಕ್ಕೆ ತಾಕೀತು ಮಾಡಿದೆ.

ಹಲವು ಸಂದರ್ಭಗಳಲ್ಲಿ ಕಾನೂನುಬಾಹಿರ ಮಾಂಸದ ವ್ಯಾಪಾರ ನಡೆಯುತ್ತಿದ್ದರೆ, ಅದು ನಗರಸಭೆಗಳು ನಡೆಸುವ ಕಸಾಯಿ ಖಾನೆಗಳು ತಮ್ಮ ಕೆಲಸ ಮಾಡದ್ದರಿಂದ ಮತ್ತು ಪರವಾನಿಗೆಗಳನ್ನು ನವೀಕರಿಸಲು ಸರಕಾರ ನಿರಾಕರಿಸಿದ್ದರಿಂದ ಎಂದು ಹೈಕೋರ್ಟ್ ತೀರ್ಪು ಹೇಳಿದೆ.

ಇದು ಹಿಂದಿನ ಸರಕಾರ ಮಾಡಿದ ತಪ್ಪು ಎಂದು ಜಾರಿಕೊಳ್ಳುವಂತಿಲ್ಲ. ಏಕೆಂದರೆ ಲಕ್ನೌ, ಕಾನ್ಪುರ, ಮೇರಠ್ ಮುಂತಾದ ದೊಡ್ಡ ನಗರಸಭೆಗಳು ಬಿಜೆಪಿ ಹತೋಟಿಯಲ್ಲಿವೆ. ಒಬ್ಬ ಉಪಮುಖ್ಯಮಂತ್ರಿ ಲಕ್ನೌ ಮಹಾನಗರಪಾಲಿಕೆಯ ಮೇಯರ್ ಆಗಿದ್ದವರು ಎಂಬುದನ್ನು ಇಲ್ಲಿ ಗಮನಿಸಬಹುದು.


ಕಾನೂನುಬಾಹಿರ ಚಟುವಟಿಕೆಯನ್ನು ತಕ್ಷಣ ತಡೆಯುವ ಕೆಲಸ ಕಾನೂನುಬದ್ಧ ಚಟುವಟಿಕೆ ನಡೆಸಲು ಸೌಕರ್ಯ ಒದಗಿಸುವುದರೊಂದಿಗೇ ನಡೆಯಬೇಕು, ವಿಶೇಷವಾಗಿ ಆಹಾರ, ಆಹಾರ ಪದ್ಧತಿ ಮತ್ತು ಅದರ ಪೂರೈಕೆಯ ವಿಷಯದಲ್ಲಿ. ಇದು ಬದುಕಿನ ಮತ್ತು ಜೀವನಾಧಾತರದ ಹಕ್ಕಿಗೆ ಸಂಬಂಧಪಟ್ಟದ್ದು ಎಂಬುದು ವಿವಾದಾತೀತ. ಆರೋಗ್ಯಕ್ಕೆ ಪೂರಕವಾದ ಆಹಾರವನ್ನು ತಪ್ಪು ಆಯ್ಕೆ ಎನ್ನಲಾಗದು. ಅದರಿಂದಾಗಿಯೇ ಆರೋಗ್ಯಕರ ಆಹಾರವಸ್ತುಗಳ ಪೂರೈಕೆಗೆ ಪ್ರಭುತ್ವವನ್ನು ಬದ್ಧಗೊಳಿಸಲಾಗಿದೆ ಎಂದು ಹೈಕೋರ್ಟ್ ಪೀಠ ಉ.ಪ್ರ. ಆಡಳಿತಕ್ಕೆ ನೆನಪಿಸಿದೆ.

ಜಮ್ಮು–ಶ್ರೀನಗರ ಹೆದ್ದಾರಿ ಸುರಂಗ ಮಾರ್ಗವನ್ನು ಉದ್ಘಾಟಿಸುತ್ತ ಪ್ರಧಾನಿಗಳು ಕಾಶ್ಮೀರದ ಯುವಜನ 'ಟೆರರಿಸಂ–ಟೂರಿಸಂ' (ಪ್ರವಾಸೋದ್ಯಮ ಅಥವ ಭಯೋತ್ಪಾದನೆ) ಇವೆರಡರಲ್ಲಿ ಒಂದನ್ನು ಆಯ್ದುಕೊಳ್ಳಬೇಕಾಗಿದೆ ಎಂದರು. –ಸುದ್ದಿ




ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ದೇಶದ ರಾಜಧಾನಿಯ ಬಳಿ ಗುಂಪೊಂದು ನೈಜೀರಿಯಾದ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿತು ಎಂಬ ಸುದ್ದಿಯ ಹಿಂದೆಯೇ ಅಮೆರಿಕಾದ ಅಧ್ಯಕ್ಷರು ಭಾರತದ ಪ್ರಧಾನಿಗಳಿಗೆ ಮೂರನೇ ಬಾರಿಗೆ ಪೋನ್ ಮಾಡಿದರು ಎಂಬ ಸುದ್ದಿ ಪ್ರಕಟವಾಯಿತು.



ವ್ಯಂಗ್ಯಚಿತ್ರ: ಇ.ಪಿ.ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ಪ್ರಜಾಪ್ರಭುತ್ವಕ್ಕೆ ಅತ್ಯಂತ ಅಪಾಯಕಾರಿಯಾದ 'ಹಣ ಮಸೂದೆ'ಗಳೆಂಬ ಮಹಾ ಪಾತಕದ ದಾರಿ



ಕೆ.ಎಂ.ನಾಗರಾಜ್

ಬಿಜೆಪಿ ಸರಕಾರ ಯಾವುದೇ ನಾಚಿಕೆಯಿಲ್ಲದೆ ಅತ್ಯಂತ ಪ್ರಜಾಪ್ರಭುತ್ವ-ವಿರೋಧಿ ವಿಧಾನದಲ್ಲಿ, ಅಂದರೆ 'ಹಣ ಮಸೂದೆ'ಯ ವೇಷ ತೊಡಿಸಿ, ಲೋಕಸಭೆಯಲ್ಲಿ ತನ್ನ ಬಹುಮತದ ಬಲವಂತದಿಂದ ಪ್ರಭುತ್ವದ ಸಂರಚನೆಯಲ್ಲಿ ಮೂಲಭೂತ ಬದಲಾವಣೆಗಳನ್ನು ತುರಿಸಿ ಅದನ್ನೊಂದು ಕಾರ್ಪೊರೇಟ್ ಬಂಡವಾಳದೊಂದಿಗೆ ನಿಕಟವಾಗಿ ಕೈಮಿಲಾಯಿಸಿ ಕೆಲಸ ಮಾಡುವ, ಎಲ್ಲದರಲ್ಲೂ ಹಣಿಕಿ ಹಾಕುವ ಮತ್ತು ಭಯಹುಟ್ಟಿಸುವ ಪ್ರಭುತ್ವವಾಗುವಂತೆ ಮಾಡುತ್ತಿದೆ.

-ಪ್ರೊ. ಪ್ರಭಾತ್ ಪಟ್ನಾಯಕ್

ತನ್ನ ಚಾಳಿಗೆ ತಕ್ಕಂತೆ, ಬಿಜೆಪಿ ಸರ್ಕಾರವು ಭಾರತ ಪ್ರಭುತ್ವವನ್ನು ಒಂದು ಭಯಹುಟ್ಟಿಸುವ ಮತ್ತು ಪತ್ತೇದಾರ ಸಂಸ್ಥೆಯಾಗಿ ಬದಲಾಯಿಸಲು ಸನ್ನದ್ಧವಾಗಿದೆ. ಕಾರ್ಪೊರೇಟ್ ಬಂಡವಾಳದಾರರಿಗೆ ಬಹಳ ಆಪ್ತವಾಗಿರುವ ಭಾರತ ಪ್ರಭುತ್ವವು ಅವರಿಗೆ ಇನ್ನೂ ಹೆಚ್ಚು ಆಪ್ತವಾಗುವಂತೆ ಮತ್ತು ಪ್ರಭುತ್ವದ ಕಾರ್ಯವೈಖರಿಯನ್ನು ಸಾರ್ವಜನಿಕ ಪರಿಶೀಲನೆಯಿಂದ ಆಚೆ ಉಳಿಯುವಂತೆ ಮಾಡುವ ನಿಟ್ಟಿನಲ್ಲಿ ಬಿಜೆಪಿ ಸರ್ಕಾರ ಕಾರ್ಯಪ್ರವೃತ್ತವಾಗಿದೆ. ಈ ರೀತಿಯ ಬದಲಾವಣೆಯ ಪರಿಣಾಮಗಳು ಎಷ್ಟು ಅಪಾಯಕಾರಿಯಾಗಿರುತ್ತವೆಯೋ, ಅಷ್ಟೇ ಅಪಾಯಗಳು ಪ್ರಜಾಪ್ರಭುತ್ವ ವ್ಯವಸ್ಥೆಗೂ ತಟ್ಟುತ್ತವೆ.

ಪ್ರಮುಖ ಶಾಸನಗಳಿಗೆ ಹಣಕಾಸು ಮಸೂದೆಯ ವೇಷ ತೊಡಿಸಿ, ಲೋಕ ಸಭೆಯ ಮುಂದಿಟ್ಟು ಅಂಗೀಕಾರ ಪಡೆಯುವ ಚಾಳಿ ಆರಂಭವಾಗಿದೆ. ಯಾವುದೇ ಪ್ರಮುಖ ಮಸೂದೆಯನ್ನು ಪಾರ್ಲಿಮೆಂಟಿನ ಎರಡೂ ಸದನಗಳು ಅಂಗೀಕರಿಸಿದ ನಂತರವೇ ಅದು ಶಾಸನವಾಗುತ್ತದೆ. ಹಾಗಾಗಿ, ರಾಜ್ಯ ಸಭೆಯ ಅಂಗೀಕಾರ ದೊರೆಯದ ಕಾರಣದಿಂದ, ಭೂಸ್ವಾಧೀನ ಸುಗ್ರೀವಾಜ್ಞೆಯು ಇನ್ನೂ ಒಂದು ಶಾಶ್ವತ ಕಾನೂನಿನ ಸ್ಥಾನ ಪಡೆಯಲು ಸಾಧ್ಯವಾಗಿಲ್ಲ. ಆದರೆ, 'ಹಣ ಮಸೂದೆ'ಗಳ ವಿಷಯದಲ್ಲಿ, ಅವು ಲೋಕ ಸಭೆಯ ಅಂಗೀಕಾರ ಪಡೆದರೆ ಅಷ್ಟೇ ಸಾಕಾಗುತ್ತದೆ. ಇಂತಹ ಉದ್ದೇಶಿತ ಮಸೂದೆಗಳಿಗೆ ರಾಜ್ಯ ಸಭೆ ವಿರೋಧ ವ್ಯಕ್ತಪಡಿಸಿದರೂ ಅವು ಶಾಶ್ವತ ಶಾಸನದ ಪಟ್ಟ ಪಡೆಯಲು ಅಡ್ಡಿಯಾಗುವುದಿಲ್ಲ. ಇಂತಹ ಸೂಕ್ಷ್ಮ ತೊಡಕುಗಳಿಂದ ಪಾರಾಗುವ ಉದ್ದೇಶದಿಂದ, ಬಿಜೆಪಿ ಸರ್ಕಾರವು, 'ಹಣ ಮಸೂದೆ' ಅಲ್ಲವೆಂದು ಪ್ರತ್ಯಕ್ಷವಾಗಿ ಕಾಣುವ ಕೆಲವು ಮುಖ್ಯವಾದ ಶಾಸನಗಳಿಗೆ 'ಹಣ ಮಸೂದೆ'ಯ ವೇಷ ತೊಡಿಸಿ, ಬಜೆಟ್ಟಿನ ವ್ಯಾಪ್ತಿಗೆ ಒಳಪಡದ ವಿಷಯಗಳನ್ನು ಬಜೆಟ್ಟಿಗೆ ಸಂಬಂಧಿಸಿದ ಹಣಕಾಸು ಮಸೂದೆಯೊಂದಿಗೆ ಲಗತ್ತಿಸಿ, ಭಾರತ ಪ್ರಭುತ್ವದ ಸ್ವರೂಪದಲ್ಲಿ ಮೂಲಭೂತ ಬದಲಾವಣೆ ಮಾಡಲು ಹೊರಟಿದೆ.

ನಾಗರಿಕರಿಗೆ ಗುರುತಿನ ಸಂಖ್ಯೆ ನೀಡುವ ಆಧಾರ್ ಮಸೂದೆಯಲ್ಲಿ, ಎಲ್ಲ ನಾಗರಿಕರು ಆಧಾರ್ ಕಾರ್ಡ್ ಹೊಂದುವುದು ಕಡ್ಡಾಯವೆಂದು ಮಾಡಲು ಹೊರಟಿತ್ತು. ಆಧಾರ್ ಮಸೂದೆ ನಾಗರಿಕರ ಏಕಾಂತತೆಗೆ ಧಕ್ಕೆ ಒಡ್ಡುವುದರ ಜೊತೆಗೆ ಅನೇಕ ರೀತಿಯ ಅಡ್ಡ ಪರಿಣಾಮಗಳನ್ನು ಉಂಟುಮಾಡುತ್ತದೆ ಎಂಬುದಾಗಿ ವಿರೋಧ ಪಕ್ಷಗಳು ಮತ್ತು ಅನೇಕ ಸ್ವಯಂ ಸೇವಾ ಸಂಸ್ಥೆಗಳು ಎತ್ತಿದ ಆಕ್ಷೇಪಣೆಗಳನ್ನು ಮತ್ತು ಪ್ರತಿಭಟನೆಗಳನ್ನು ಸರ್ಕಾರ ತಳ್ಳಿಹಾಕಿತು. ಆಧಾರ್ ಕಾರ್ಡ್ ಕಡ್ಡಾಯ ಮಾಡದಂತೆ ಸುಪ್ರೀಂ ಕೋರ್ಟಿನ ನಿರ್ದೇಶನವಿದ್ದರೂ ಅದೊಂದು 'ಹಣ ಮಸೂದೆ' ಎಂದು ಸರ್ಕಾರ ಸೋಗುಹಾಕುತ್ತಿದೆ. ಕೇವಲ ಪ್ಯಾನ್ ಕಾರ್ಡ್, ಚಾಲಕನ ಪರವಾನಗಿ ಮತ್ತು ಬ್ಯಾಂಕ್ ಖಾತೆ ತೆರೆಯಲು ಮಾತ್ರವಲ್ಲದೆ, ಮಕ್ಕಳು ಮಧ್ಯಾಹ್ನದ ಊಟ ಪಡೆಯಲು, ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೂಲಿ ಕೆಲಸ ಪಡೆಯಲು, ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ರಿಯಾಯ್ತಿ ದರದಲ್ಲಿ ದಿನಸಿ ಪಡೆಯಲು, ವಯಸ್ಸಾದವರು, ಅಂಗವಿಕಲರು ಮತ್ತು ವಿಧವೆಯರು ಪಿಂಚಣಿ ಪಡೆಯಲು ಆಧಾರ್ ಕಾರ್ಡ್ ಹೊಂದುವುದನ್ನು ಈ ಮಸೂದೆಯಲ್ಲಿ ಕಡ್ಡಾಯಗೊಳಿಸಲಾಗಿದೆ. ಈ ಕ್ರಮವು, ಜನ ಕಲ್ಯಾಣ ಯೋಜನೆಗಳಿಗೆ ಆಧಾರ್ ಕಾರ್ಡ್ ಕಡ್ಡಾಯಗೊಳಿಸಲಾಗದು ಎಂದು ಸುಪ್ರೀಂ ಕೋರ್ಟ್ 2015ರ ಅಕ್ಟೋಬರ್ 15ರಂದು ನೀಡಿದ ಆದೇಶದ ಉಲ್ಲಂಘನೆಯಾಗಿದೆ.

ಈ ಸಂಬಂಧವಾಗಿ, ಸುಪ್ರೀಂ ಕೋರ್ಟ್ ಆದೇಶವನ್ನು ಪಾಲಿಸಿಲ್ಲ ಎಂಬ ತಕರಾರು ಅರ್ಜಿಯ ವಿಚಾರಣೆಯ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಇದೇ ಮಾರ್ಚ್ 27ರಂದು, ತನ್ನ ನಿಲುವನ್ನು ಪುನರುಚ್ಚರಿಸಿ, ನೀಡಿರುವ ಆದೇಶದ ಪ್ರಕಾರ, ಮಕ್ಕಳ ಮಧ್ಯಾಹ್ನದ ಊಟ, ಉದ್ಯೋಗ ಖಾತ್ರಿ ಯೋಜನೆಯ ಕೂಲಿ ಕೆಲಸ, ಸಾರ್ವಜನಿಕ ವಿತರಣಾ ವ್ಯವಸ್ಥೆಯ ಅಡಿಯಲ್ಲಿ ವಿತರಣೆ, ಭವಿಷ್ಯ ನಿಧಿ ಹಾಗೂ ವಿವಿಧ ಪಿಂಚಣಿಗಳು ಮತ್ತು ಜನ್ ಧನ್ ಯೋಜನೆಗಳ ಪ್ರಯೋಜನ ಪಡೆಯಲು ಆಧಾರ್ ಕಾರ್ಡ್ ಕಡ್ಡಾಯಗೊಳಿಸುವಂತಿಲ್ಲ. ಆದರೆ, ಬ್ಯಾಂಕ್ ಖಾತೆ ತೆರೆಯಲು (ಜನ್ ಧನ್ ಖಾತೆಗಳಿಗೆ ಆಧಾರ್ ಕಾರ್ಡ್ ಕಡ್ಡಾಯವಲ್ಲ) ಪ್ಯಾನ್ ಕಾರ್ಡ್ ಮತ್ತು ಚಾಲಕನ ಪರವಾನಗಿ ಪಡೆಯಲು (ಇವು ಜನ ಕಲ್ಯಾಣ ಸೇವೆಗಳಲ್ಲ ಎಂಬ ನೆಲೆಯಲ್ಲಿ) ಆಧಾರ್ ಕಾರ್ಡ್ ಕಡ್ಡಾಯಕ್ಕೆ ಅವಕಾಶ ನೀಡಿದೆ.

ಆಧಾರ್ ಕಾರ್ಡ್ ಕಡ್ಡಾಯಗೊಳಿಸುವ ವಿಷಯದಲ್ಲಿ "ಜನ ಕಲ್ಯಾಣ" ಮತ್ತು "ಜನ ಕಲ್ಯಾಣ ಅಲ್ಲದ" ಎಂಬ ವ್ಯತ್ಯಾಸಗಳನ್ನು ಸುಪ್ರೀಂ ಕೋರ್ಟ್ ಗುರುತಿಸಿರುವುದು ಬಹಳ ಅತೃಪ್ತಿಕರವಾಗಿದೆ. ಮತ್ತು ಒಂದು ಮೂಲಭೂತ ಅಂಶವನ್ನೇ ಅದು ಪರಿಗಣಿಸಿಲ್ಲ. ಉದಾಹರಣೆಗೆ, ಉದ್ಯೋಗ ಖಾತ್ರಿ ಯೋಜನೆಯು ಕೇವಲ ಒಂದು ಕಲ್ಯಾಣ ಯೋಜನೆ ಮಾತ್ರವಲ್ಲ, ಅದು, ಪಾರ್ಲಿಮೆಂಟಿನ ಎರಡೂ ಸದನಗಳ ಅವಿರೋಧ ನಿರ್ಣಯದ ಮೂಲಕ ಕೊಡಮಾಡಿದ ಬಡತನ ರೇಖೆಯ ಕೆಳಗಿರುವ ಜನತೆಯ ಕಾನೂನಾತ್ಮಕವಾದ ಒಂದು ಹಕ್ಕು. ಅದೇನೂ ಉಪಕಾರದ ಕಾಯ್ದೆಯಲ್ಲ. ಅದು ಬಡ ಜನತೆಯ ಹಕ್ಕು. ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ಕೇಳಲು ಆಧಾರ್ ಕಾರ್ಡ್ ಕಡ್ಡಾಯ ಮಾಡುವ ಮೂಲಕ ಬಡಜನತೆಯಿಂದ ಕಿತ್ತುಕೊಂಡಿರುವುದು ಬರಿ ಆರ್ಥಿಕ ನೆರವಲ್ಲ, ಅವರ ಹಕ್ಕುಗಳನ್ನೇ ಕಸಿದುಕೊಂಡಂತಾಗಿದೆ. ಸುಪ್ರೀಂ ಕೋರ್ಟ್ ತೀರ್ಮಾನ ಒಳಗೊಂಡಿರುವ ಈ ತರ್ಕದ ಬಗ್ಗೆ ವ್ಯಾಖ್ಯಾನಗಳು ಬೇರೆ ಬೇರೆ ಇರಬಹುದಾದರೂ, ಬಿಜೆಪಿ ಸರ್ಕಾರದ ಉದ್ದೇಶ ಸ್ಪಷ್ಟವಾಗಿದೆ: ಎಲ್ಲರಿಗೂ, ಎಲ್ಲದಕ್ಕೂ ಆಧಾರ್ ಕಾರ್ಡ್ ಕಡ್ಡಾಯ ಮಾಡುವುದು. ಅದರ ಅಪಾಯಗಳೂ ಬಹಳ ಸ್ಪಷ್ಟವಾಗಿವೆ.

ಆಧಾರ್ ಮಸೂದೆಯು ಹಿಂದೆಂದೂ ಕಾಣದ ರೀತಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಮೇಲೂ ಕಣ್ಗಾವಲಿಡಲು ಅನುವುಮಾಡಿಕೊಟ್ಟಿದೆ. ಅದು ವ್ಯಕ್ತಿಯ ಖಾಸಗಿತನ ಮತ್ತು ಏಕಾಂತತೆಯನ್ನು ನಾಶ ಮಾಡುತ್ತದೆ. ಸರ್ಕಾರವು ತನ್ನ ರಾಜಕೀಯ ವಿರೋಧಿಗಳನ್ನು, ಟೀಕಾಕಾರರನ್ನು ಮತ್ತು ಭಿನ್ನಮತೀಯರುಗಳನ್ನು ಹಾಗೂ ತನ್ನ ದಾರಿಗೆ ಬಾರದವರನ್ನು ಗುರಿಯಿಟ್ಟು ಬಗ್ಗುಬಡಿಯಬಹುದು. ಈ ಮಸೂದೆಯಲ್ಲಿ, ವೈಯಕ್ತಿಕ ವಿವರಗಳನ್ನು ಖಾಸಗಿ ಕಂಪೆನಿಗಳೊಂದಿಗೆ ಹಂಚಿಕೊಳ್ಳಲು ಅವಕಾಶವಿದೆ. ಒಬ್ಬ ವ್ಯಕ್ತಿಯ ವಿವರಗಳನ್ನು ಇನ್ನೊಬ್ಬ ಕದ್ದು ಅವುಗಳನ್ನು ಬಳಸಿಕೊಂಡು ಅನೇಕ ರೀತಿಯ ವಂಚನೆಗಳಲ್ಲಿ ತೊಡಗಬಹುದು. ಕಳ್ಳತನ, ವಂಚನೆ, ಕಂಪ್ಯೂಟರ್ ಮಾಹಿತಿ ಕನ್ನ, ದತ್ತಾಂಶ ಮಾಹಿತಿ ಸೋರಿಕೆಗಳ ಪತ್ತೆಯ ಸಂದರ್ಭದಲ್ಲಿ, ಭದ್ರತಾ ದೃಷ್ಟಿಕೋನದಲ್ಲಿ, ನಾಗರಿಕರೆಲ್ಲರೂ ಸಂಶಯಕ್ಕೊಳಗಾಗುವ ಮತ್ತು ನಿರಪರಾಧಿಗಳಾಗಿದ್ದರೂ ಶಿಕ್ಷೆಗೊಳಗಾಗುವ ಅಪಾಯವಿದೆ. ಆಧಾರ್ ಮಸೂದೆಯಲ್ಲಿ ವೈಯಕ್ತಿಕ ರಕ್ಷಣೆ ಮತ್ತು ಕಂಪ್ಯೂಟರ್ ಮಾಹಿತಿ ರಕ್ಷಣೆಯಂತಹ ಕೆಲವು ಉಪಕ್ರಮಗಳಿವೆಯಾದರೂ, ಅವು ಏನೇನೂ ಸಾಲವು. ಆದಾಗ್ಯೂ, ಈ ಕಾಯ್ದೆಯನ್ನು, ರಾಜ್ಯ ಸಭೆಯ ಒಪ್ಪಿಗೆ ಇಲ್ಲದಿದ್ದರೂ, ಎಲ್ಲರ ತಲೆಗೂ ಕಟ್ಟಲು ಬಿಜೆಪಿ ಸರ್ಕಾರ ಹೊರಟಿದೆ.

ಹಣಕಾಸು ಮಸೂದೆಯ ಹೆಸರಿನಲ್ಲಿ ನಾಗರಿಕರ ಹಕ್ಕುಗಳಿಗೆ ಗಂಭೀರ ಸ್ವರೂಪದ ಅಪಚಾರ ಎಸಗುವ ಎರಡನೆಯ ಕ್ಷೇತ್ರವೆಂದರೆ, ಹೊಸ ಹಣಕಾಸು ಮಸೂದೆಯಲ್ಲಿ ಆದಾಯ ತೆರಿಗೆ ಅಧಿಕಾರಿಗಳಿಗೆ ದಾಳಿ ನಡೆಸಲು ವಿಶೇಷ ಅಧಿಕಾರ ಕೊಡಲು ಉದ್ದೇಶಿಸಿರುವುದು. ಇಲ್ಲಿಯವರೆಗೆ ಇದ್ದ ಪದ್ಧತಿಯ ಪ್ರಕಾರ, ಆದಾಯ ತೆರಿಗೆಗೆ ಒಳಪಡುವ ವ್ಯಕ್ತಿಯೊಬ್ಬ, ಅಘೋಷಿತ ಆದಾಯ, ನಗದು ಹಣ, ಬಂಗಾರ, ಆಸ್ತಿ ಅಥವಾ ಅವಕ್ಕೆ ಸಂಬಂಧಿಸಿದ ದಾಖಲೆಗಳನ್ನು ತನ್ನ ಬಳಿ ಇಟ್ಟುಕೊಂಡಿರುವವನು ಮತ್ತು ಅವುಗಳನ್ನು ಅಧಿಕಾರಿಗಳಿಗೆ ಸಿಗದಂತೆ ಮುಚ್ಚಿಟ್ಟಿದ್ದಾನೆ ಎಂಬ ಸಂಗತಿ ನಂಬಲರ್ಹವಾಗಿದ್ದ ಸಂದರ್ಭದಲ್ಲಿ ಮಾತ್ರ ಅವನ ಮನೆ/ಆಫೀಸ್ ಮುಂತಾದ ಸ್ಥಳಗಳ ಜಪ್ತಿ ಮತ್ತು ಹಣ/ದಾಖಲೆಗಳನ್ನು ವಶಪಡಿಸಿಕೊಳ್ಳಲಾಗುತ್ತಿತ್ತು. ಇಂತಹ ಜಪ್ತಿ/ ದಾಳಿ ಕೈಗೊಳ್ಳುವ ಮೊದಲು ಸಂಬಂಧಪಟ್ಟ ಉನ್ನತ ಮಟ್ಟದ ಅಧಿಕಾರಿಯು ಒಂದು ಆಜ್ಞೆ ಹೊರಡಿಸುತ್ತಿದ್ದರು. ಇಂತಹ ನಡವಳಿಕೆಯಲ್ಲಿ ಒಂದು ಮಟ್ಟದ ಉತ್ತರದಾಯಿತ್ವ ಮತ್ತು ನಿರ್ಬಂಧಗಳಿದ್ದವು. ಹೇಗೆಂದರೆ, ವಿನಾಕಾರಣ ಜಪ್ತಿ ನಡೆಸುವ ಒಬ್ಬ ಅಧಿಕಾರಿಯನ್ನು ಕಟಕಟೆಗೆ ತಂದು ವಿಚಾರಣೆಗೆ ಒಳಪಡಿಸಬಹುದಾಗಿತ್ತು. ಈಗ, ಅಂತಹ ನಿರ್ಬಂಧಗಳನ್ನು ಕೈಬಿಡಲಾಗಿದೆ. ಹಾಗಾಗಿ, ವಿರೋಧಿಗಳು ಮತ್ತು ಭಿನ್ನಮತೀಯರ ಮೇಲೆ ಸುಲಭವಾಗಿ ತೆರಿಗೆ ದಾಳಿ ನಡೆಸಬಹುದಾಗಿದೆ. ಆದಾಯ ತೆರಿಗೆ ಅಧಿಕಾರಿಗಳ ಮೂಲಕ ಇನ್ನೂ ಹೆಚ್ಚಿನ ಮಟ್ಟದಲ್ಲಿ ಬೆದರಿಕೆ ಹುಟ್ಟಿಸುವ ಕ್ರಮಕ್ಕೆ ಪ್ರಭುತ್ವವು ಮುಂದಾಗಿದೆ.

ಕಪ್ಪು ಹಣ ಮತ್ತು ಭ್ರಷ್ಟಾಚಾರ ನಿರ್ಮೂಲನೆಯ ಹೆಸರಿನಲ್ಲಿ ಸರ್ಕಾರ ಈ ತಿದ್ದುಪಡಿಗಳನ್ನು ಸಮರ್ಥಿಸಿಕೊಳ್ಳುತ್ತಿದೆ. ಆದರೆ, ಇದೇ ಮಸೂದೆಯಲ್ಲಿರುವ ಇನ್ನೊಂದು ತಿದ್ದುಪಡಿಯು, ಭ್ರಷ್ಟಾಚಾರವನ್ನು ಶಾಶ್ವತಗೊಳಿಸುತ್ತದೆ ಎಂಬುದೊಂದು ವಿಡಂಬನೆ. ಕಾರ್ಪೊರೇಟ್ ಕುಳಗಳಿಗೂ ಮತ್ತು ಆಳುವ ವರ್ಗದ ರಾಜಕೀಯ ಧುರೀಣರಿಗೂ ಇರುವ ಅಪವಿತ್ರ ಸಂಬಂಧವೇ ಭ್ರಷ್ಟಾಚಾರಗಳ ಅತಿ ದೊಡ್ಡ ಮೂಲ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯವೇ. ಈಗಿರುವ ಕಂಪೆನಿ ಕಾಯ್ದೆಯ ಪ್ರಕಾರ, ಕನಿಷ್ಠ ಮೂರು ವರ್ಷಗಳ ಕಾಲ ಕಾರ್ಯಚಟುವಟಿಕೆ ನಡೆಸಿದ್ದ ಒಂದು ಕಂಪೆನಿಯು ತನ್ನ ನಿವ್ವಳ ಲಾಭದ ಗರಿಷ್ಠ 7.5% ಹಣವನ್ನು ರಾಜಕೀಯ ಪಕ್ಷಗಳಿಗೆ ದೇಣಿಗೆ ಕೊಡಬಹುದು. ಜೊತೆಗೆ, ಈ ದೇಣಿಗೆ ಕೊಡುವ ಮೊದಲು ಕಂಪೆನಿಯ ಆಡಳಿತ ಮಂಡಳಿಯು ಒಂದು ನಿರ್ಣಯ ಅಂಗೀಕರಿಸಬೇಕಿತ್ತು. ಅದರಲ್ಲಿ ಈ ದೇಣಿಗೆ ಪಡೆಯುವ ರಾಜಕೀಯ ಪಕ್ಷದ ಹೆಸರು ನಮೂದಿಸುವುದು ಅಗತ್ಯವಿತ್ತು. ಆದರೆ, ಬಿಜೆಪಿ ಸರ್ಕಾರವು, ದೇಣಿಗೆಯ ಈ 7.5% ಗರಿಷ್ಠ ಮಿತಿಯನ್ನು ರದ್ದುಪಡಿಸಿದೆ ಮತ್ತು ದೇಣಿಗೆ ಪಡೆಯುವ ರಾಜಕೀಯ ಪಕ್ಷದ ಹೆಸರನ್ನು ನಿರ್ಣಯದಲ್ಲಿ ನಮೂದಿಸುವ ಅವಶ್ಯಕತೆ ಇಲ್ಲ ಎಂಬುದಾಗಿ ಕಂಪೆನಿ ಕಾಯ್ದೆಗೆ ತಿದ್ದುಪಡಿ ಮಾಡಿದೆ. ಈ ತಿದ್ದುಪಡಿಯ ಉದ್ದೇಶವೆಂದರೆ, ಯಾರಿಗೂ ಗೊತ್ತಾಗದ ಹಾಗೆ, ಯಾವುದೋ ಒಂದು ಕಂಪೆನಿ ಎಷ್ಟೂ ಹಣವನ್ನು ಯಾವುದೋ ಒಂದು ರಾಜಕೀಯ ಪಕ್ಷಕ್ಕೆ ದೇಣಿಗೆ ಕೊಡಬಹುದು.

ಅಧಿಕಾರ ನಡೆಸುವ ರಾಜಕೀಯ ಪಕ್ಷಗಳಿಗೆ ಅಥವಾ ಮುಂದೆ ಅಧಿಕಾರ ಹಿಡಿಯಬಹುದಾದ ಪಕ್ಷಗಳಿಗೆ ಕಂಪೆನಿಗಳು ಹಣ ಒದಗಿಸುವುದು ಮತ್ತು ಅಧಿಕಾರಕ್ಕೆ ಬಂದ ನಂತರ ರಾಜಕೀಯ ಪಕ್ಷಗಳು ಈ ಕಂಪೆನಿಗಳ ಋಣ ತೀರಿಸುವ ಸಲುವಾಗಿ ಅವರಿಗೆ ಸಾಕಾಗುವಷ್ಟು ಅನುಕೂಲ ಮಾಡಿಕೊಡುವ ಪರಿಪಾಠ ಇರುವುದು ನಿಸ್ಸಂಶಯವಾಗಿದೆ. ಇಂತಹ ಸ್ನೇಹ ಸಲಿಗೆಯ ಬೆಚ್ಚನೆಯ ಹೊಂದಾಣಿಕೆಗಳು ಇನ್ನು ಮುಂದೆ ಸಾರ್ವಜನಿಕ ಪರಿಶೀಲನೆಯಿಂದ ತಪ್ಪಿಸಿಕೊಳ್ಳುತ್ತವೆ. ಅಷ್ಟೇ ಅಲ್ಲ, ಬಿಜೆಪಿ ಸರ್ಕಾರ ಸೂಚಿಸಿರುವ ತಿದ್ದುಪಡಿಯ ಪರಿಣಾಮವಾಗಿ ಸರಬರಾಜಾಗುವ ಹಣದ ಪ್ರಮಾಣ ಅಗಾಧವಾಗುತ್ತದೆ ಮತ್ತು ಅದರ ಪ್ರಯೋಜನವನ್ನು ಬಿಜೆಪಿ ಪುಷ್ಕಳವಾಗಿ ಪಡೆಯುತ್ತದೆ. ಕಂಪೆನಿ ಕಾಯ್ದೆಗೆ ಸೂಚಿಸಿರುವ ಈ ತಿದ್ದುಪಡಿಯ ಪರಿಣಾಮವಾಗಿ: ಪ್ರಜಾಪ್ರಭುತ್ವದ ಮೇಲೆ ಅತಿ ದೊಡ್ಡ ಹಲ್ಲೆ ಎರಗುತ್ತದೆ. ದುಡಿಯುವ ಜನತೆಯ ಸೊಲ್ಲಡಗಿಸಿದ ಕೂಗು ಕರ್ಣಕಠೋರವಾಗಿರುತ್ತದೆ. ರಾಜ್ಯಾಧಿಕಾರ ಮತ್ತು ಕಾರ್ಪೊರೇಟ್‌ಗಳ ಸಂಗಮ ಸಂಪನ್ನವಾಗುತ್ತದೆ. ಬೃಹತ್ ಮೊತ್ತದ ಹಗರಣಗಳಿಗೆ ಪರವಾನಗಿ ಕೊಟ್ಟಂತಾಗುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಬಿಜೆಪಿ ಸರಕಾರ ಯಾವುದೇ ನಾಚಿಕೆಯಿಲ್ಲದೆ ಅತ್ಯಂತ ಪ್ರಜಾಪ್ರಭುತ್ವ-ವಿರೋಧಿ ವಿಧಾನದಲ್ಲಿ , ಅಂದರೆ 'ಹಣ ಮಸೂದೆ'ಯ ವೇಷ ತೊಡಿಸಿ, ಲೋಕಸಭೆಯಲ್ಲಿ ತನ್ನ ಬಹುಮತದ ಬಲವಂತದಿಂದ ಪ್ರಭುತ್ವದ ಸಂರಚನೆಯಲ್ಲಿ ಮೂಲಭೂತ ಬದಲಾವಣೆಗಳನ್ನು ತುರಿಸಿ ಅದನ್ನೊಂದು ಕಾರ್ಪೊರೇಟ್ ಬಂಡವಾಳದೊಂದಿಗೆ ನಿಕಟವಾಗಿ ಕೈಮಿಲಾಯಿಸಿ ಕೆಲಸ ಮಾಡುವ, ಎಲ್ಲದರಲ್ಲೂ ಹಣಿಕಿ ಹಾಕುವ ಮತ್ತು ಭಯಹುಟ್ಟಿಸುವ ಪ್ರಭುತ್ವವಾಗುವಂತೆ ಮಾಡುತ್ತಿದೆ.

ನಿಂತಲ್ಲೇ ನ್ಯಾಯ ನಿರ್ಣಯ ಮಾಡುವ ಸೋಗಿನ ಹಿಂದುತ್ವದ ಕೋಲೆಗಡುಕ ಗುಂಪುಗಳು ಬೀದಿ ಬೀದಿಗಳಲ್ಲಿ ತಿರುಗುತ್ತಾ ಜನರನ್ನು ಭಯಭೀತಿಗೊಳಿಸುವುದು, ಅಲ್ಲಲ್ಲಿ ಒಬ್ಬೊಬ್ಬರಿಗೆ ಚಿತ್ರಹಿಂಸೆ ಕೊಡುವುದು, ತಾವು ಇಷ್ಟಪಡದವರು ರಾಷ್ಟ್ರ-ವಿರೋಧಿಗಳೆಂದು ಹಣೆಪಟ್ಟಿ ಹಚ್ಚುವುದು ಮುಂತಾದ ಕೃತ್ಯಗಳಲ್ಲಿ ತೊಡಗಿರುವುದನ್ನು ಇಲ್ಲಿಯವರೆಗೂ ನಾವು ಕಂಡಿದ್ದೇವು. ಈ ಕೊಲೆಗಡುಕ ಮನೋಭಾವವು ಹಿಂದುತ್ವದ ಕೆಲವು ವಕ್ರರ ಗುಂಪುಗಳಿಗೆ ಸೀಮಿತವಾಗಿದೆ ಎಂದು ಈಗ ತಿಳಿಯುವಂತಿಲ್ಲ. ಏಕೆಂದರೆ, ಮೂರು ನಾಲ್ಕು ವರ್ಷಗಳ ಹಿಂದೆ ಭಾರತ ಸರ್ಕಾರದ ಗೃಹ ಕಾರ್ಯದರ್ಶಿಯಾಗಿ ಈ ದೇಶದ ಕಾನೂನು ಎತ್ತಿ ಹಿಡಿಯುವ ಜವಾಬ್ದಾರಿ ಹೊತ್ತಿದ್ದ ಮತ್ತು ಈಗ ಬಿಜೆಪಿಯ ಎಂ.ಪಿಯೂ ಆಗಿರುವ ಆರ್.ಕೆ ಸಿಂಗ್, ಇತ್ತೀಚೆಗೆ ವ್ಯಕ್ತಪಡಿಸಿದ್ದ ಅಭಿಪ್ರಾಯ ಹೀಗಿತ್ತು: "ನಾವು ರಾಷ್ಟ್ರವಾದಿಗಳು. ಯಾರು ರಾಷ್ಟ್ರ-ವಿರೋಧಿಯೋ ಅವರಿಗೆ ಬಿಸಿಮುಟ್ಟಿಸುವುದನ್ನು ತಪ್ಪಿಸಲಾಗದು". ಅಂದರೆ, ಅದರ ಅರ್ಥ, ಆಳುವ ಪಕ್ಷವನ್ನು ಟೀಕಿಸುವವರನ್ನು ಬೇಟೆಯಾಡಲು, ಬೀದಿ ಬೀದಿಗಳಲ್ಲಿ ಅಡ್ಡಾಡುವ ಕೊಲೆಗಡುಕ ಗುಂಪುಗಳ ಜೊತೆಗೆ ಪ್ರಭುತ್ವದ ಅಂಗ ಸಂಸ್ಥೆಗಳನ್ನು ಲಂಗುಲಗಾಮಿಲ್ಲದೆ ಹರಿಯ ಬಿಡಲಾಗುವುದು ಎಂದಾಗುತ್ತದೆ. ವಿವಿಧ ಮೂಲಗಳಿಂದ ಒದಗುವ ತೋಳ್ಬಲದ ಜೊತೆಗೆ ಕಾರ್ಪೊರೇಟ್ ವಲಯದಿಂದ ಮಿತಿ ಇಲ್ಲದೆ ಒದಗುವ ಹಣ ಬಲವೂ ಸೇರಿಕೊಳ್ಳುವುದರಿಂದ ಆಳುವ ಪಕ್ಷಕ್ಕೆ ಚುನಾವಣೆಗಳನ್ನು ಎದುರಿಸುವುದು ನಿರಾಯಾಸವಾಗುತ್ತದೆ. ಚಲಾವಣೆಯಲ್ಲಿದ್ದ ನೋಟುಗಳನ್ನು ರದ್ದುಗೊಳಿಸಿ, ಕಪ್ಪು ಹಣ ಮತ್ತು ಭ್ರಷ್ಟಾಚಾರಗಳ ನಿರ್ಮೂಲನೆ ಮಾಡುವುದಾಗಿ ಇದೇ ಸರ್ಕಾರ ಹೇಳಿದ್ದು ಒಂದು ವಿಡಂಬನೆಯೇ ಸರಿ!

(ಪ್ರೊ. ಪ್ರಭಾತ್ ಪಟ್ನಾಯಕ್ ಅವರ The Nefarious Money Bills ಲೇಖನದ ಸಾರಾಂಶ.)

ಅಗರ್ತಲಾದಲ್ಲಿ ಐದಂಶಗಳ ಬೇಡಿಕೆಗಳ ಮೇಲೆ ಬೃಹತ್ ಸಿಪಿಐ(ಎಂ) ರ್‍ಯಾಲಿ
ನೇಮಕಾತಿಯಲ್ಲಿ ಶಿಕ್ಷಕರ ಹಿತ ರಕ್ಷಿಸುವ ಭರವಸೆ



ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯಲ್ಲಿ 200ದಿನಗಳ ಕೆಲಸದ ಗ್ಯಾರಂಟಿ ಕೊಡಬೇಕು, ಕೂಲಿಯನ್ನು ಹೆಚ್ಚಿಸಬೇಕು, ಯುವಜನರಿಗೆ ಉದ್ಯೋಗ, ರೈತರಿಗೆ ಬೆಂಬಲ ಬೆಲೆ ಮತ್ತು ಅವರಿಂದ ಆಹಾರಧಾನ್ಯಗಳ ನೇರ ಖರೀದಿ ಈ ಬೇಡಿಕೆಗಳ ಮೇಲೆ ಸಿಪಿಐ(ಎಂ)ನ ತ್ರಿಪುರಾ ರಾಜ್ಯಸಮಿತಿಯ ಕರೆಯ ಮೇರೆಗೆ ಅಗರ್ತಲಾದಲ್ಲಿ ಒಂದು ಬೃಹತ್ ರ್‍ಯಾಲಿ ನಡೆಯಿತು.

ಇದನ್ನು ಉದ್ದೇಶಿಸಿ ಮಾತನಾಡುತ್ತ ಬಿಜನ್ ಧರ್ ಅವರು ಎಡರಂಗ ಸರಕಾರವನ್ನು ಉರುಳಿಸಲು ಪಿತೂರಿಗಳು ನಡೆಯುತ್ತಿವೆ, ಆದರೆ ದ್ವೇಷ ಹರಡುವ ಮೂಲಕ ಅದನ್ನು ಉರುಳಿಸಲು ಸಾಧ್ಯವಿಲ್ಲ, ಏಕೆಂದರೆ ಅದು ಜನರ ನಡುವೆ ಪ್ರೀತಿಯಿಂದ ಆಳವಾಗಿ ಬೇರು ಬಿಟ್ಟಿದೆ ಎಂದು ಅವರು ಹೇಳಿದರು.

ಈಗ ಶಿಕ್ಷಕರ ನೇಮಕ ಕುರಿತಂತೆ ಸುಪ್ರಿಂ ಕೋರ್ಟ್ ತೀರ್ಪಿನಿಂದ ಉಂಟಾಗಿರುವ ಪರಿಸ್ಥಿತಿಯ ಬಗ್ಗೆಯೂ ಮಾತನಾಡಿದರು. ಕಾಂಗ್ರೆಸ್, ಬಿಜೆಪಿ, ಟಿಎಂಸಿ ಮತ್ತಿತರ ಪಕ್ಷಗಳಿಗೆ ಬಹಳ ಆನಂದವಾಗಿರುವಂತೆ ಕಾಣುತ್ತದೆ, ಮಾಧ್ಯಮಗಳೂ ಎಡರಂಗ ಸರಕಾರದ ವಿರುದ್ಧ ಅಪಪ್ರಚಾರ ನಡೆಸಿ ಈ ಪ್ರತಿಪಕ್ಷಗಳಿಗೆ ಅವಕಾಶಗಳನ್ನು ಕೊಡುತ್ತಿವೆ ಎಂದ ಅವರು ಎಡರಂಗ ಸರಕಾರ ಇದರಿಂದ ಬಾಧಿತರಾಗಿರುವವರ ಬಗ್ಗೆ ಸಹಾನುಭೂತಿಯಿಂದ ಕ್ರಮ ಕೈಗೊಳ್ಳುತ್ತದೆ ಎಂದು ಭರವಸೆ ನೀಡಿದರು.

ಸುಪ್ರಿಂ ಕೋರ್ಟ್ ನಿರ್ದೇಶನ ಪಾಲಿಸುವ ನಿರ್ಧಾರ

ಮಾರ್ಚ್ 29ರಂದು ಸರ್ವೋಚ್ಚ ನ್ಯಾಯಾಲಯ 2013ರಲ್ಲಿ ಮಾಡಿದ್ದ ಸುಮಾರು 10,000 ಸರಕಾರಿ ಶಾಲಾ ಶಿಕ್ಷಕರ ನೇಮಕಾತಿಯನ್ನು ರದ್ದು ಮಾಡುವ ತ್ರಿ ಪುರಾ ಹೈಕೋರ್ಟಿನ ತೀರ್ಪನ್ನು ಎತ್ತಿ ಹಿಡಿದಿದೆ. ಇದರಿಂದಾಗಿ ಉಂಟಾಗಿರುವ ಪರಿಸ್ಥಿತಿಯನ್ನು ಎಪ್ರಿಲ್ 5ರಂದು ಸಭೆ ಸೇರಿದ ತ್ರಿಪುರಾ ಮಂತ್ರಿಮಂಡಳ ಪರಿಶೀಲಿಸಿತು.

ಈ ನೇಮಕಾತಿಗಳನ್ನು 1978ರಲ್ಲಿ ಎಡರಂಗ ರೂಪಿಸಿದ ನೇಮಕಾತಿ ಧೋರಣೆಗಳ ಅಡಿಯಲ್ಲಿ ಮಾಡಲಾಗಿತ್ತು. ಆದರೆ ಇದು ನಂತರ 2009ರಲ್ಲಿ ಅಂಗೀಕರಿಸಿದ ಶಿಕ್ಷಣದ ಹಕ್ಕು ಕಾನೂನಿನ ಪ್ರಕಾರ ಇಲ್ಲವೆಂಬ ಕಾರಣಕ್ಕೆ ಇದನ್ನು ಈಗ ರದ್ದು ಮಾಡಲಾಗಿದೆ. ಇದು ಅನಿರೀಕ್ಷಿತ ತೀರ್ಪು ಎಂದು ಅಭಿಪ್ರಾಯ ಪಟ್ಟ ಮಂತ್ರಿಮಂಡಳ, ಆದರೂ ಸುಪ್ರಿಂ ಕೋರ್ಟಿನ ನಿರ್ದೇಶನಗಳನ್ನು ಪಾಲಿಸಲು ನಿರ್ಧರಿಸಿತು. ಎಪ್ರಿಲ್ 30ರೊಳಗೆ ಹೊಸ ನೇಮಕಾತಿ ಧೋರಣೆಯನ್ನು ರೂಪಿಸಿ ಡಿಸೆಂಬರ್ 31ರೊಳಗೆ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು ಎಂದು ಅದು ನಿರ್ದೇಶಿಸಿದೆ.

ಈ ರದ್ದತಿಯಿಂದಾಗಿ ಈಗ ಕೈಗೊಂಡಿರುವ ಶೈಕ್ಷಣಿಕ ಪ್ರಯತ್ನಗಳಿಗಾಗಲೀ, ಶೈಕ್ಷಣಿಕ ಸಂಸ್ಥೆಗಳ ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆ ಉಂಟಾಗದಂತೆ ನೋಡಿಕೊಳ್ಳಲಾಗುವುದು ಎಂದಿರುವ ಮಂತ್ರಿಮಂಡಳ ಈಗಾಗಲೇ ರಾಜ್ಯ ಶಿಕ್ಷಣ ರಂಗದಲ್ಲಿ ಪ್ರಾಮಾಣಿಕವಾಗಿ, ಸಮರ್ಪಣಾ ಭಾವದಿಂದ ಸೇವೆ ಸಲ್ಲಿಸಿರುವ ಶಿಕ್ಷಕರ ಭವಿಷ್ಯದ ಬಗ್ಗೆಯೂ ಕಾಳಜಿ ವಹಿಸಲಾಗುವುದು ಮತ್ತು ಅವರ ಹಿತರಕ್ಷಣೆಗೆ ಸಾಧ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಅದು ಭರವಸೆ ನೀಡಿದೆ.

ತ್ರಿಪುರ ಮುಖ್ಯಮಂತ್ರಿಗಳಿಗೆ ಮತ್ತೊಂದು ಪುರಸ್ಕಾರ

ತ್ರಿಪುರ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಅವರಿಗೆ ಚೆನ್ನೈನ 'ಕಾಯ್ದೆ ಮಿಲ್ಲತ್ ಶೈಕ್ಷಣಿಕ ಮತ್ತು ಸಾಮಾಜಿಕ ಟ್ರಸ್ಟ್' ಈ ವರ್ಷದ "ರಾಜಕೀಯ ಬದುಕಿನಲ್ಲಿ ಋಜುತ್ವದ ಪುರಸ್ಕಾರ'ವನ್ನು ನೀಡಿ ಗೌರವಿಸಿರುವ ಮೂವರಲ್ಲಿ ತ್ರಿಪುರಾ ಎಡರಂಗ ಸರಕಾರದ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಸೇರಿದ್ದಾರೆ. ಇನ್ನಿಬ್ಬರು ಎಂದರೆ ಮಣಿಪುರದಲ್ಲಿ ಒಂದೂವರೆ ದಶಕದಿಂದ 'ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾನೂನಿ'ನ ವಿರುದ್ಧ ಹೋರಾಡುತ್ತಿರುವ ಇರೋಮ್ ಶರ್ಮಿಳ ಮತ್ತು ಜನತಾದಳ(ಜಾತ್ಯತೀತ)ದ ತಮಿಳುನಾಡು ಅಧ್ಯಕ್ಷ ಪಿ.ಮಹಮ್ಮದ್ ಇಸ್ಮಾಯಿಲ್.

ಮಾರ್ಚ್ 30ರಂದು ಪುರಸ್ಕಾರವನ್ನು ಸ್ವೀಕರಿಸಿ ಮಾತನಾಡುತ್ತ ಸರ್ಕಾರ್ ಅವರು ನಮ್ಮ ಸಂವಿಧಾನದ ಪ್ರಧಾನ ಸಾರ ಈಗ ತೀವ್ರ ದಾಳಿಗೆ ಒಳಗಾಗಿದೆ ಎಂದು ಎಚ್ಚರಿಸಿದರು. ಹಿಂದೂರಾಷ್ಟ್ರ ಮುಂತಾದ ಪ್ರಶ್ನೆಗಳನ್ನೆಬ್ಬಿಸಿ ಜನಗಳ ಗಮನವನ್ನು ಅವರ ನಿಜವಾದ ಸಮಸ್ಯೆಗಳಿಂದ ಬೇರೆಡೆಗೆ ಸೆಳೆಯುವ ಪ್ರಯತ್ನಗಳು ನಡೆಯುತ್ತಿವೆ. ಪ್ರಜಾಪ್ರಭುತ್ವದ ಪ್ರಾಣವಾಯು ಇಲ್ಲದೆ ಮಾನವ ಜೀವಿಗಳು ಬದುಕಲಾರರು. ಪ್ರಜಾಪ್ರಭುತ್ವ ವಿಲ್ಲದೆ ಸಾಮಾಜಿಕ ಪ್ರಗತಿಯಿಲ್ಲ. ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆ ಕೈ-ಕೈ ಹಿಡಿದು ಸಾಗಬೇಕು ಎಂದು ಅವರು ಹೇಳಿದರು.



ಆರೆಸ್ಸೆಸ್-ಬಿಜೆಪಿ ಕೂಟ ಈಗ ಪಶ್ಚಿಮ ಬಂಗಾಲದ ಕೋಮುಸೌಹಾರ್ದದ ಪರಂಪರೆಯನ್ನು ಧ್ವಂಸ ಮಾಡುವ ಜೋಜನೆ ಹಾಕಿದೆ. ರಾಜ್ಯದಲ್ಲಿ ಅಲ್ಲಲ್ಲಿ ಘಟಿಸುತ್ತಿರುವ ಕೋಮು ಗಲಭೆಗಳಲ್ಲಿ ಇದು ಕಾಣುತ್ತಿದೆ. ಸಿಪಿಐ(ಎಂ) ಪಶ್ಚಿಮ ಬಂಗಾಲ ಕಾರ್ಯದರ್ಶಿ ಸೂರ್ಯಕಾಂತ ಮಿಶ್ರ ಅವರು ರಾಜ್ಯದಲ್ಲಿ ಕೋಮು ಸೌಹಾರ್ದವನ್ನು ಕಾಯ್ದುಕೊಳ್ಳುವ ಹೊಣೆಯನ್ನು ಪಕ್ಷದ ಕಾರ್ಯಕರ್ತರು ನಿಭಾಯಿಸಬೇಕೆಂದು ಕರೆ ನೀಡಿದ್ದಾರೆ. ಇದಕ್ಕೆ ಓಗೊಟ್ಟು ರಾಜ್ಯದಲ್ಲಿ ಶಾಂತಿ ಮತ್ತು ಸೌಹಾರ್ದ ರ್‍ಯಾಲಿಗಳು ನಡೆಯುತ್ತಿವೆ.



ಮಧ್ಯಪ್ರದೇಶದಲ್ಲಿ ಮತಯಂತ್ರ ತೊಡಕು: ಚುನಾವಣಾ ಆಯೋಗದ ಮಾತು ಕೇಳಲೂ ಬಿಜೆಪಿ ಸರಕಾರದ ನಕಾರ

ಉತ್ತರಪ್ರದೇಶ ವಿಧಾನಸಭಾ ಚುನಾವಣೆಗಳಲ್ಲಿ ಇಲೆಕ್ಟ್ರಾನಿಕ್ ಮತಯಂತ್ರ(ಇವಿಎಂ)ಗಳ ವಿಶ್ವಾಸಾರ್ಹತೆಯ ಕುರಿತು ಸಂದೇಹ ಎತ್ತಿರುವ ಹಿನ್ನೆಲೆಯಲ್ಲಿ ಮಧ್ಯಪ್ರದೇಶದ ಭಿಂಡ್‌ನಲ್ಲಿ ಎಪ್ರಿಲ್ ಮೊದಲ ವಾರದಲ್ಲಿ ನಡೆಯಬೇಕಾದ ಉಪಚುನಾವಣೆಯಲ್ಲಿ ಈ ಹಿಂದೆ ಸುಪ್ರಿಂ ಕೋರ್ಟ್ ನೀಡಿದ ಸೂಚನೆಯಂತೆ ಮತಯಂತ್ರದ ಜೊತೆಗೆ ವಿವಿಪಿಎಟಿ ಅಂದರೆ 'ಮತದಾರರು ಪರೀಕ್ಷಿಸಬಹುದಾದ ಪರಿಶೋಧನಾ ಕಾಗದದ ಜಾಡು' ಎಂಬ ವ್ಯವಸ್ಥೆಯನ್ನು ಅಳವಡಿಸಲು ಚುನಾವಣಾ ಆಯೋಗ ನಿರ್ಧರಿಸಿತು. ಈ ವ್ಯವಸ್ಥೆಯಲ್ಲಿ ಮತದಾರ ಯಂತ್ರದಲ್ಲಿ ತನ್ನ ಆಯ್ಕೆಯ ಅಭ್ಯರ್ಥಿಯ ಹೆಸರ ಮುಂದಿನ ಬಟನ್ ಒತ್ತಿದ ಕೆಲವು ಸೆಕಂಡುಗಳ ನಂತರ ಆತ/ಆಕೆ ವೋಟು ಹಾಕಿದ ಅಭ್ಯರ್ಥಿಯ ಮತಚಿಹ್ನೆಯನ್ನು ಮುದ್ರಿಸಿದ ಕಾಗದವೊಂದು ಬರುತ್ತದೆ. ಅದು ಮತದಾರ ಒತ್ತಿದ ಚಿಹ್ನೆಯಾಗಿರದಿದ್ದರೆ ಆಕ್ಷೇಪ ಸಲ್ಲಿಸಬಹುದಾಗಿದೆ. ಈ ಪತ್ರ ಮತಯಂತ್ರದಲ್ಲೇ ಸೇರಿಕೊಂಡು ಮುಂದೆ ಯಾವುದೇ ಪರೀಕ್ಷಣೆಗೆ ಲಭ್ಯವಾಗುತ್ತದೆ. ಈ ವ್ಯವಸ್ಥೆಯ ಸಾರ್ವಜನಿಕ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಆಗ ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿಗಳು ಎಸ್‌ಪಿ ಅಭ್ಯರ್ಥಿಗೆ ಮತ ಒತ್ತಿದರೂ ಕಾಗದದಲ್ಲಿ ಬಿಜೆಪಿಯ ಕಮಲದ ಚಿಹ್ನೆ ಬಂತು. ನಂತರ ಇನ್ನೊಬ್ಬ ಅಭ್ಯರ್ಥಿಗೆ ಮತ ಹಾಕಿದಾಗಲೂ ಅದೇ ಚಿಹ್ನೆ ಬಂತು. ನಂತರ ಎರಡು ಪ್ರಯತ್ನಗಳಲ್ಲಿ ಬಿಜೆಪಿ ಚಿಹ್ನೆ ಬರದಿದ್ದರೂ ಒತ್ತಿದ ಚಿಹ್ನೆ ಅದರಲ್ಲಿರಲಿಲ್ಲ. ಇದು ದೇಶದಾದ್ಯಂತ ಸುದ್ದಿಯಾಗಿ ಚುನಾವಣಾ ಆಯೋಗ ಇದರ ತನಿಖೆಗೆ ತಂಡ ಕಳಿಸಿತು. ನಂತರ ಅದು ಜಿಲ್ಲಾ ಕಲೆಕ್ಟರ್ ಮತ್ತು ಎಸ್‌ಪಿ ಸೇರಿದಂತೆ 17 ಅಧಿಕಾರಿಗಳನ್ನು ಅಲ್ಲಿಂದ ತೆಗೆಯುವಂತೆ ಆದೇಶ ನೀಡಿತು.

ಆದರೆ ರಾಜ್ಯದ ರೆವಿನ್ಯೂ ಕಾರ್ಯದರ್ಶಿ ತಹಸಿಲ್ದಾರ್ ಮತ್ತಿತರ ಕೆಲವು ಅಧಿಕಾರಿಗಳನ್ನು ಹೊರಗೆ ಕಳಿಸಲು ಸಾರ್ವಜನಿಕವಾಗಿಯೇ ನಿರಾಕರಿಸಿದ್ದಾರೆ. ಅದಕ್ಕೆ ಅವರು ಕೊಡುವ ಕಾರಣ ಅವರು ಈ ವಿಷಯದಲ್ಲಿ ದೋಷಿಗಳಲ್ಲ. ಹಾಗಿದ್ದರೆ ಇವರು ಆಗಲೇ ತನ್ನ ಕ್ಷಿಪ್ರ ತನಿಖೆ ಮಾಡಿ ಮುಗಿಸಿದ್ದಾರೆಯೇ? ಅವರು ಹೇಳುವ ಅಧಿಕಾರಿಗಳು ದೋಷಿಗಳಲ್ಲ ಎನ್ನುತ್ತಾರಾದರೆ ದೋಷಿಗಳು ಯಾರು ಎಂದೂ ಅವರಿಗೆ ತಿಳಿದಿರಬೇಕಲ್ಲವೇ? ಅಂತವರ ಹೆಸರುಗಳನ್ನು ಹೇಳಲಿ ಎಂದು ಸಿಪಿಐ(ಎಂ) ಮಧ್ಯಪ್ರದೇಶ ರಾಜ್ಯ ಕಾರ್ಯದರ್ಶಿ ಬಾದಲ್ ಸರೋಜ್ ಈ ನಿಲುವನ್ನು ಖಂಡಿಸುತ್ತ ಹೇಳಿದ್ದಾರೆ. ಈ ರೆವಿನ್ಯೂ ಕಾರ್ಯದರ್ಶಿಗೆ ರಾಜಕೀಯ ಆಶೀರ್ವಾದ ಇಲ್ಲದಿದ್ದರೆ ಅವರು ಹೀಗೆ ಹೇಳುವ ಧೈರ್ಯ ಮಾಡುತ್ತಿದ್ದರೇ? ಅಂದರೆ ಬಿಜೆಪಿ ಪ್ರಜಾಪ್ರಭುತ್ವದ ಎಲ್ಲ ರೀತಿ-ನೀತಿಗಳನ್ನು ಧ್ವಂಸ ಮಾಡಲು ಮುಂದಾಗಿದೆ ಎಂಬುದು ಸ್ಪಷ್ಟ ಎಂದು ಬಾದಲ್ ಸರೋಜ್ ಹೇಳಿದ್ದಾರೆ.

ತಮಿಳುನಾಡಿನ ಮೂಲೆ-ಮೂಲೆಗಳಿಂದ ಬಂದ ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ ಎಪ್ರಿಲ್ 4ರಂದು ಚೆನ್ನೈನಲ್ಲಿ ಒಂದು ಬೃಹತ್ ರ್‍ಯಾಲಿಯನ್ನು ನಡೆಸಿದರು. ಸಾರ್ವಜನಿಕ ವಲಯವನ್ನು ರಕ್ಷಿಸಿ, ಕೃಷಿಯನ್ನು ರಕ್ಷಿಸಿಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ಸಾಕಷ್ಟು ಪರಿಹಾರ ಒದಗಿಸಿ, ಕನಿಷ್ಟ ಸಂಬಳ 18000 ರೂ. ನಿಗದಿ ಪಡಿಸಿ ಎಂಬುದು ಇವರ ಮುಖ್ಯ ಬೇಡಿಕೆಗಳಾಗಿದ್ದವು.



ಇಕ್ವಾಡರ್ ನಲ್ಲಿ ಎಡಪಂಥೀಯ ಮೊರೆನೊ ಅಧ್ಯಕ್ಷ ಜಗ್ಗದ ಲ್ಯಾಟಿನ್ ಅಮೆರಿಕದ "ಎಳೆಗೆಂಪು ಅಲೆ"



ಕಳೆದ ವರ್ಷ ಬ್ರೆಜಿಲಿನಲ್ಲಿ ಚುನಾಯಿತ ಅಧ್ಯಕ್ಷೆ ದಿಲ್ಮಾ ಅವರನ್ನು ಮೋಸದಿಂದ ಪದಚ್ಯುತಗೊಳಿಸಿ, ಅರ್ಜೆಂಟಿನಾದಲ್ಲಿ ಎಡ ಅಭ್ಯರ್ಥಿಯ ಸೋಲಿನ ನಂತರ "ಎಳೆಗೆಂಪು ಅಲೆ" ನಿಂತು ಹೋಗಿದೆ, ಎಂದು ಅಮೆರಿಕನ್ ಮತ್ತು ಅವುಗಳ ಬಾಲಬಡುಕ ಮಾಧ್ಯಮಗಳು ಸಾರಲು ಆರಂಭಿಸಿದ್ದವು. ಲ್ಯಾಟಿನ್ ಅಮೆರಿಕದಲ್ಲಿ 1990ರ ದಶಕದ ಮಧ್ಯಭಾಗದಲ್ಲಿ ಬ್ರೆಜಿಲ್ ಮತ್ತು ವೆನೆಜುವೇಲಾಗಳಲ್ಲಿ ಎಡ ಅಭ್ಯರ್ಥಿಗಳು ಅಧ್ಯಕ್ಷೀಯ ಚುನಾವಣೆಯಲ್ಲಿ ಗೆದ್ದದ್ದಿನಿಂದ ಒಂದಾದ ಮೇಲೊಂದರಂತೆ ಎಡ ಸರಕಾರಗಳು ಅಧಿಕಾರ ವಹಿಸಿಕೊಂಡ ದೀರ್ಘ ಪ್ರಕ್ರಿಯೆಗೆ "ಎಳೆಗೆಂಪು ಅಲೆ" ಎಂದು ಕರೆಯಲಾಗಿತ್ತು. ಮೇಲೆ ಹೇಳಿದ ಹಾಗೆ ಇತ್ತೀಚೆಗೆ ಬ್ರೆಜಿಲ್ ಮತ್ತು ಅರ್ಜೆಂಟಿನಾಗಳಲ್ಲಿ ಎಡ ಸರಕಾರಗಳಿಗೆ ಹಿನ್ನಡೆ–ಯ ನಡುವೆಯೂ ನಿಕರಾಗುವದಲ್ಲಿ ಎಡ ಅಭ್ಯರ್ಥಿ ಅಧ್ಯಕ್ಷರಾಗಿ ಗೆದ್ದಿದ್ದಾರೆ. ಈಗ ಇಕ್ವಾಡರ್ ನಲ್ಲಿ 10 ವರ್ಷಗಳ ಸತತ ಎಡಪಂಥೀಯ ಆಡಳಿತದ ನಂತರ ಹೊಸ ಅಭ್ಯರ್ಥಿ ಲೆನಿನ್ ಮೊರೆನೊ ಅಧ್ಯಕ್ಷರಾಗಿ ಚುನಾಯಿತರಾಗಿ ಕಳೆದ ಕೆಲ ಸಮಯ ಹಿಡಿದ ಗ್ರಹಣ ಬಿಟ್ಟಿದೆ "ಎಳೆಗೆಂಪು ಅಲೆ" ಅಷ್ಟು ಸುಲಭಕ್ಕೆ ಲ್ಯಾಟಿನ್ ಅಮೆರಿಕದ ಶ್ರೀಮಂತರ ಹಾಗು ಅವರ ಉತ್ತರ ಅಮೆರಿಕದ ಧಣಿಗಳಿಗೆ ಜಗ್ಗುವುದಿಲ್ಲ ಎಂಬ ಭರವಸೆ ಮೂಡಿಸಿದ್ದಾರೆ.

ಹಿಂದಿನ ಎಡಪಂಥಿಯ ಅಧ್ಯಕ್ಷ ರಾಫೆಲ್ ಕೊರಿ ಅವರ ಎಡಪಂಥೀಯ ಪಕ್ಷ ಎಂ.ಎ.ಪಿ. (ಮೂವಿಮೆಂಟ್ ಅಲಿಯಾನ್ಸಾ ಪೈಸ್)ದ ಅಭ್ಯರ್ಥಿ ಲೆನಿನ್ ಮೊರೆನೊ ಅವರು ಎರಡನೇ ಸುತ್ತಿನಲ್ಲಿ ಶೇ. 51.16 ಮತ ಗಳಿಸಿ, ಶೇ. 48.84 ಗಳಿಸಿದ ಬಲಪಂಥೀಯ ರಂಗದ ಅಭ್ಯರ್ಥಿ ಹಾಗೂ ಮಾಜಿ ಬ್ಯಾಂಕರ್ ಗಿಲೆರ್ಮೊ ಲಾಸೊ ಅವರನ್ನು ಸೋಲಿಸಿದ್ದಾರೆ. ಮೊದಲ ಸುತ್ತಿನಲ್ಲೇ ಮೊರೆನೊ ಗೆಲ್ಲಲು ಶೇ. 0.7 ಮತ ಮಾತ್ರ ಕಡಿಮೆ ಇತ್ತು. ಎರಡನೇ ಸುತ್ತಿನಲ್ಲಿ 24ರಲ್ಲಿ 11 ಪ್ರಾಂತ್ಯಗಳಲ್ಲಿ ಮೊರೆನೊ ಅತ್ಯಂತ ಹೆಚ್ಚಿನ ಅಂತರದಿಂದ ಲಾಸೊ ಅವರನ್ನು ಸೋಲಿಸಿದ್ದಾರೆ. 10 ವರ್ಷಗಳ ಹಿಂದೆ ತೀವ್ರ ಬಿಕ್ಕಟ್ಟಿನಲ್ಲಿದ್ದ ಇಕ್ವಡಾರ್ ನ್ನು ಅಮೆರಿಕದ ಮತ್ತು ಬ್ಯಾಂಕ್–ಫಂಡ್ ಕಪಿಮುಷ್ಟಿಯಿಂದ ಹೊರತಂದು ಜನ–ಪರ ಸಾಮಾಜಿಕ ಕಾರ್ಯಕ್ರಮಗಳ ಆಧಾರದಲ್ಲಿ ರಾಫೆಲ್ ಕೊರಿ ಚುನಾವಣೆ ನಿಂತು ಗೆದ್ದಿದ್ದರು. ಅಂದಿನಿಂದ ಅವರು ಜಾರಿ ಮಾಡಿದ ಜನ–ಪರ ಸಾಮಾಜಿಕ ಕಾರ್ಯಕ್ರಮಗಳಿಂದ ಬಹಳ ಜನಪ್ರಿಯರಾಗಿದ್ದರು. ಕೊರಿ ಅವರು ಈ ಬಾರಿ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಘೋಷಣೆ ಮಾಡಿದಾಗ ದೇಶದಲ್ಲೂ, ಇಡೀ ಲ್ಯಾಟಿನ್ ಅಮೆರಿಕದಲ್ಲೂ ಆತಂಕ ಮೂಡಿತ್ತು. ಯಾರು ಸಮರ್ಥ ಅಭ್ಯರ್ಥಿಯಾಗುತ್ತಾರೆ? ಅವರು ಗೆಲ್ಲುತ್ತಾರಾ? ಜನ–ಪರ ನೀತಿಗಳು ಮುಂದುವರೆಯುತ್ತವಾ? "ಎಳೆಗೆಂಪು ಅಲೆ" ನಿಜವಾಗಿಯೂ ಕೊನೆಯಾಗುತ್ತಾ? – ಇದು ಆತಂಕಗಳ ಮೂಲವಾಗಿತ್ತು. ತಾವು ಗೆದ್ದರೆ ವಿಕಿಲೀಕ್ಸ್ ಸ್ಥಾಪಕ ಎಡ್ವರ್ಡ್ ಸ್ನೋಡೆನ್ ಅವರ ರಾಜಕೀಯ ಆಶ್ರಯ ರದ್ದು ಮಾಡುವುದಾಗಿ ಬಲಪಂಥೀಯ ಅರ್ಭರ್ಥಿ ಘೋಷಿಸಿದ್ದರು. ಲ್ಯಾಟಿನ್ ಅಮೆರಿಕದ ಜನತೆ, ಮತ್ತು ಇಡೀ ಜಗತ್ತಿನ ಪ್ರಗತಿಪರ ಚಳುವಳಿಗಳು ಮೊರೆನೊ ವಿಜಯವನ್ನು ಸ್ವಾಗತಿಸಿವೆ. ಸಮಾಧಾನದ ನಿಟ್ಟುಸಿರು ಬಿಟ್ಟಿವೆ. ಚುನಾವಣೆಗಳ ವೀಕ್ಷಿಸಿದ ಅಮೆರಿಕನ್ ದೇಶಗಳ ಒಕ್ಕೂಟ ಮತ್ತು ಅಂತರ್ರಾಷ್ಟ್ರೀಯ ಸಂಘಟನೆಗಳು ತಮ್ಮ ವರದಿಯಲ್ಲಿ ನ್ಯಾಯಯುತ ಕ್ರಮಬದ್ಧತೆಯ ಬಗ್ಗೆ ಸಕಾರಾತ್ಮಕ ವರದಿ ನೀಡಿವೆ.

ಇಂತಹ ಸನ್ನಿವೇಶದಲ್ಲಿ 2007–2013 ಅವಧಿಯಲ್ಲಿ ಕೊರಿ ಜತೆ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದ ಲೆನಿನ್ ಮೊರೆನೊ ಎಂ.ಎ.ಪಿ. ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿಯಾಗಿ ಹೊಮ್ಮಿದ್ದರು. ಅವರು ಇಕ್ವಡಾರ್ ನಲ್ಲೂ ವಿಶ್ವದಾದ್ಯಂತವೂ ಅಂಗವಿಕಲರ ಹಕ್ಕುಗಳಿಗೆ ಹೋರಾಟ ಪ್ರಚಾರಾಂದೋಲನ ಮಾಡಿದವರು. ಈ ಹೋರಾಟಗಳ ಫಲವಾಗಿ 2013ರಿಂದ ಈ ವರೆಗೆ ಅವರು ಅಂಗವಿಕಲರ ಹಕ್ಕುಗಳಿಗಾಗಿ ವಿಶ್ವಸಂಸ್ಥೆಯ ವಿಶೇಷ ರಾಯಭಾರಿ ಆಗಿದ್ದರು. ಈ ಕ್ಷೇತ್ರದಲ್ಲಿ ಅವರ ವಿಶೇಷ ಕೊಡುಗೆಗಾಗಿ 2012ರಲ್ಲಿ ಅವರನ್ನು ನೊಬೆಲ್ ಶಾಂತಿ ಪ್ರಶಸ್ತಿಗೆ ಸೂಚಿಸಲಾಗಿತ್ತು. ಮೊರೆನೊ ಸ್ವತಃ ಅಂಗವಿಕಲರಾಗಿದ್ದರು. 1998ರಲ್ಲಿ ಡಕಾಯಿತಿ ಪ್ರಯತ್ನದಲ್ಲಿ ಅವರ ಮೇಲೆ ಹಿಂದಿನಿಂದ ಗುಂಡು ತಗಲಿದ್ದರಿಂದ ಅವರು ಕಾಲುಗಳ ಮತ್ತು ದೇಹದ ಕೆಳಬಾಗದ ನಿಯಂತ್ರಣ ಕಳೆದುಕೊಂಡಿದ್ದರು. ಅವರು ತಮ್ಮ ಇಡೀ ಚುನಾವಣಾ ಪ್ರಚಾರವನ್ನು ಗಾಲಿಉರ್ಚಿಯಿಂದಲೇ ನಿರ್ವಹಿಸಿದರು. ಸ್ವತಃ ಅಂಗವಿಕಲರಾಗಿರುವ ಮತ್ತು ಅಂಗವಿಕಲರ ಹಕ್ಕುಗಳಿಗೆ ವಿಶಿಷ್ಟ ಕೊಡುಗೆ ನೀಡಿದ ವ್ಯಕ್ತಿಯೊಬ್ಬರು ದೇಶದ ಮುಖ್ಯಸ್ಥರಾಗುವುದು ಇದೇ ಮೊದಲ ಬಾರಿ ಎನ್ನಲಾಗಿದೆ. ಅವರು ತಮ್ಮ ವಿ.ವಿ. ವಿದ್ಯಾರ್ಥಿ ದೆಸೆಯಿಂದಲೂ ಕ್ರಾಂತಿಕಾರಿ ಎಡಪಂಥೀಯ ಚಳುವಳಿಯಲ್ಲಿ ಗುರುತಿಸಿಕೊಂಡವರು. ಅವರು ಚುನಾವಣಾ ಪ್ರಚಾರದ ಉದ್ದಕ್ಕೂ ಹಿಂದಿನ ಅಧ್ಯಕ್ಷ ಕೊರಿ ಅವರ ಬಂಡವಾಳದ ಬಂಡವಾಳಿಗರ ಹಿತಾಸಕ್ತಿಗಿಂತ ಜನರ ಏಳ್ಗೆಗೆ ಆದ್ಯತೆ ನೀಡುವ ಸಾಮಾಜಿಕ ನೀಡುವ ನೀತಿಗಳನ್ನು ಮುಂದುವರೆಸುವ ಭರವಸೆ ನೀಡಿದ್ದರು.



2000ರ ದಶಕದ ಆದಿಯ ತೀವ್ರ ಬಿಕ್ಕಟ್ಟು ಎಷ್ಟು ಉಗ್ರವಾಗಿತ್ತು ಎಂದರೆ ಕೆಲ ಕಾಲ ಇಕ್ವಡಾರ್ ನಾಣ್ಯವನ್ನು ಬಿಟ್ಟುಕೊಟ್ಟು, ಅಮೆರಿಕನ್ ಡಾಲರನ್ನು ನಾಣ್ಯವಾಗಿ ಅಂಗೀಕರಿಸಲಾಗಿತ್ತು. ಆರ್ಥಿಕ ಬಿಕ್ಕಟ್ಟಿನಿಂದಾಗಿ ರಾಜಕೀಯ ಬಿಕ್ಕಟ್ಟು ತೀವ್ರವಾಗಿದ್ದು ಸತತವಾಗಿ 7 ಚುನಾಯಿತ ಅಧ್ಯಕ್ಷರುಗಳು ಜನಾಂದೋಳನದ ಒತ್ತಡದಿಂದಾಗಿ ಪದತ್ಯಾಗ ಮಾಡಬೇಕಾಗಿ ಬಂದಿತ್ತು. 2006 ಚುನಾವಣೆಯ ಹೊತ್ತಿಗೆ ರಾಫೆಲ್ ಕೊರಿ ಹೊಸ ಸಂವಿಧಾನ ಮತ್ತು ಆರ್ಥಿಕ ನೀತಿಯ ಪ್ರಸ್ತಾವ ಮುಂದಿಟ್ಟು ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಆ ಮೇಲೆ ಹೊಸ ಸಂವಿಧಾನ ರಚಿಸಿ ಅದರ ಪ್ರಕಾರ ಪುನಃ ಆಯ್ಕೆಯಾಗಿದ್ದರು. ಈ ಇಡೀ ಪ್ರಕ್ರಿಯೆಗೆ "ನಾಗರಿಕ ಕ್ರಾಂತಿ" ಎಂಬ ಹೆಸರು ಕೊಡಲಾಗಿತ್ತು. ಕೊರಿ ಸರಕಾರ ವಿದೇಶಿ ಸಾಲ ರದ್ದು ಮಾಡಿತು. ದೇಶದ ತೈಲ–ಗ್ಯಾಸ್ ಸಂಪನ್ಮೂಲಗಳನ್ನು ವಿದೇಶಿ ಕಂಪನಿಗಳ ನಿಯಂತ್ರಣದಿಂದ ಬಿಡುಗಡೆ ಮಾಡಿತು. ಅಮೆರಿಕನ್ ಮಿಲಿಟರಿ ನೆಲೆಯನ್ನು ಮುಚ್ಚಲು ಆದೇಶಿಸಿತು.

ಹಿಂದಿನ ಅಧ್ಯಕ್ಷ ಕೊರಿ ಅವರ ನೀತಿಗಳು ಪ್ರಾಮಾಣಿಕವಾಗಿ ಜಾರಿಯಾಗಿದ್ದನ್ನು ಮತ್ತು ಜನ–ಪರ ದೇಶ–ಪರ ಫಲ ನೀಡಿದ್ದು ನೋಡಿದ್ದಾರೆ. 10 ವರ್ಷಗಳ ಈ ನೀತಿಗಳ ನಂತರ, ಲ್ಯಾಟಿನ್ ಅಮೆರಿಕದಲ್ಲೇ ಅತ್ಯಂತ ಹೆಚ್ಚಿನ ಕನಿಷ್ಠ ವೇತನ ಹೊಂದಿದೆ. 10 ವರ್ಷದಲ್ಲಿ ಬಡತನದ ಸೂಚಕ ಮೂರನೇ ಒಂದರಷ್ಟು ಇಳಿದಿದೆ. 15 ಲಕ್ಷ ಬಡವರನ್ನು ಬಡತನದಿಂದ ಮೇಲಕ್ಕೆತ್ತಲಾಗಿದೆಸಿದರಿಂದ ಆರ್ಥಿಕ ಬೆಳವಣಿಗೆಗೂ ನೆರವಾಗಿದೆ. ಸತತವಾಗಿ ಸರಾಸರಿ ಶೇ. 4 (ಈ ಪ್ರದೇಶದಲ್ಲಿ ಹೆಚ್ಚೇ) ಬೆಳವಣಿಗೆ ಸಾಧಿಸಿದೆ. ವಿದೇಶೀ ಸಾಲ ಮರುಪಾವತಿಗಿಂತ ಸಾಮಾಜಿಕ ಕಾರ್ಯಕ್ರಮಗಳಿಗೆ ಆದ್ಯತೆ ನೀಡಲಾಗಿದೆ. ವಿ.ವಿ. ಮಟ್ಟದ ವರೆಗೆ ಉಚಿತ ಶಿಕ್ಷಣ ಮತ್ತು ಉಚಿತ ಆರೋಗ್ಯ ಸೇವೆ ಒದಗಿಸಲಾಗಿದೆ. 2015ರಲ್ಲಿ ಜಗತ್ತಿನಲ್ಲೇ ಎರಡನೇ ಅತಿ ಹೆಚ್ಚು ಉನ್ನತ ಶಿಕ್ಷಣದಲ್ಲಿ ಸಾರ್ವಜನಿಕ ಹೂಡಿಕೆ ಇರುವ ದೇಶವೆಂದು ಇಕ್ವಡಾರ್ ಹೆಗ್ಗಳಿಕೆ ಸಾಧಿಸಿದೆ. ಇದಕ್ಕೆ ಹಣ ಹೂಡಲು ಶ್ರೀಮಂತರಿಂದ ತೆರಿಗೆ ಸಂಗ್ರಹವನ್ನು ಬಿಗಿಗೊಳಿಸಿ ಮೂರು ಪಟ್ಟು ಮಾಡಲಾಗಿದೆ. ಹೊಸ ಚುನಾಯಿತ ಅಧ್ಯಕ್ಷ ಮೊರೆನೊ ಈ ನೀತಿಗಳನ್ನು ಇನ್ನಷ್ಟು ತೀವ್ರತೆಯಿಂದ ಮುಂದುವರೆಸುವ ಭರವಸೆ ನೀಡಿದ್ದಾರೆ.

ಬ್ರಿಟನ್–ಯುರೋಕೂಟ ಡೈವೋರ್ಸ್ ಶುರು

ಯುರೋಕೂಟದಲ್ಲಿ ಬ್ರಿಟನ್ ಮುಂದು ವರೆಯುವುದು ಬೇಡ ಎಂದು ಜನಮತಸಂಗ್ರಹದಲ್ಲಿ ತೀರ್ಪು ಕೊಟ್ಟ 9 ತಿಂಗಳ ನಂತರ, ಈಗ ಬ್ರಿಟನ್–ಯುರೋಕೂಟ "ಡೈವೋರ್ಸ್" ಪ್ರಕ್ರಿಯೆ ಆರಂಭವಾಗಿದೆ. ಯುರೋಕೂಟದ ಕಲಮು 50ರ ಪ್ರಕಾರ ಒಂದು ನಿರ್ದಿಷ್ಟ ಪತ್ರ ಕೊಡುವ ಮೂಲಕ ಬ್ರಿಟಿಶ್ ಪ್ರಧಾನಿ ಮೇ ಯವರು ಈ ಪ್ರಕ್ರಿಯೆ ಪ್ರಾರಂಭಿಸಿದ್ದಾರೆ. ಈ ಪತ್ರವನ್ನು ಯುರೋಕೂಟಕ್ಕೆ ಬ್ರಿಟಿಶ್ ರಾಯಭಾರಿ ಯುರೋ ಕೂಟದ ಅಧ್ಯಕ್ಷರಿಗೆ ಈ ಪತ್ರ ತಲುಪಿಸಿದರು. ಇದರ ಮೊದಲು ಈ ಬಗ್ಗೆ ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆದಿದ್ದು ಅಲ್ಲದೆ ಒಂದು ಪ್ರಸ್ತಾವವನ್ನು ಪಾಸು ಮಾಡಿತ್ತು. 44 ವರ್ಷಗಳಿಂದ ಯುರೋಪಿನ ವಿವಿಧ ಆರ್ಥಿಕ ಒಕ್ಕೂಟಗಳ ಭಾಗವಾಗಿದ್ದ ಬ್ರಿಟನ್ ಈಗ ಹೊರಬಂದಿದೆ.

ಇದನ್ನು ಯುರೋಕೂಟ ಚರ್ಚಿಸಿ ಬ್ರಿಟನ್ ಯುರೋಕೂಟದಿಂದ ಹೊರ ಬರುವ ಎರಡು ವರ್ಷಗಳ ಪ್ರಕ್ರಿಯೆ ಆರಂಭವಾಗುತ್ತದೆ. ಸರಕು–ಸೇವೆಗಳ ಮೇಲಿನ ತೆರಿಗೆಗಳ ಪ್ರಶ್ನೆಯಲ್ಲದೆ ಯು–ರೋಕೂಟದ ದೇಶಗಳಲ್ಲಿ ನೆಲೆಸಿರುವ ಬ್ರಿಟಿಶ್ ಪ್ರಜೆಗಳು ಮತ್ತು ಬ್ರಿಟನ್ ನಲ್ಲಿ ನೆಲೆಸಿರುವ ಯು–ರೋ ದೇಶಗಳ ಪ್ರಜೆಗಳ ಹಕ್ಕು–ಬಾಧ್ಯತೆಗಳ ಬಗ್ಗೆ ನಿರ್ಧಾರವಾಗಬೇಕಾಗಿದೆ. ಯುರೋಕೂಟದ ದೇಶಗಳಲ್ಲಿ ನೆಲೆಸಿರುವ ಬ್ರಿಟಿಶ್ ಪ್ರಜೆಗಳ ಹಕ್ಕುಗಳನ್ನು ರಕ್ಷಿಸಬೇಕೆಂದು ಕೇಳಿಕೊಂಡಿದೆ.

ಬ್ರಿಟನ್–ಯುರೋಕೂಟದ ನಡುವಿನ ಈ ಡೈವೋರ್ಸ್ ಮಾತುಕತೆ ಬಹಳ ನಾಜೂಕಾದ್ದು. ಎರಡೂ ಕಡೆ ಉಗ್ರವಾದಿಗಳು ಇದ್ದಾರೆ. ಯು–ರೋಕೂಟದ ಉಗ್ರವಾದಿಗಳು ಬ್ರಿಟನಿನಂತಹ ನಿರ್ಧಾರಗಳನ್ನು ಇತರ ದೇಶಗಳ ಜನ ಕೈಗೊಳ್ಳದಂತೆ ಆ ದೇಶಕ್ಕೆ ತೀವ್ರ ಹಾನಿಯಾಗುವಂತಹ ಕಠಿಣ ಆರ್ಥಿಕ ನಿರ್ಧಾರಗಳನ್ನು ತೆಗೆದುಕೊಳ್ಳಬೇಕೆಂದು ವಾದಿಸಲಿದ್ದಾರೆ. ಆದರೆ ಬ್ರಿಟನಿನಂತಹ ದೊಡ್ಡ ಪ್ರಬಲ ಆರ್ಥಿಕ ಹೊರ ಹೋಗುತ್ತಿರುವುದು ಅದರದೇ ಆರ್ಥಿಕದ ಮೇಲೆ ತೀವ್ರ ಪರಿಣಾಮ ಬೀರಲಿದೆ. ಇದು ಬ್ರಿಟನಿನ ಬಗೆಗೂ ನಿಜ. ಆದ್ದರಿಂದ ಉಗ್ರವಾದಿಗಳ ಒತ್ತಡಕ್ಕೆ ಮಿತಿಗಳೂ ಇರುತ್ತವೆ.


ಬ್ರಿಟನ್–ಯುರೋಕೂಟದ ನಡುವಿನ ಈ ಡೈವೋರ್ಸ್ ಮಾತುಕತೆಗಳ ಎರಡು ವರ್ಷಗಳ ಅವಧಿಯಲ್ಲಿ ಇನ್ನೂ 1–2 ದೇಶ ಯು–ರೋಕೂಟ ಬಿಡುವ ಸಾಧ್ಯತೆ ಇದೆ. ಅದೂ ಬ್ರಿಟನಿನ ಪ್ರಕ್ರಿಯೆ ಮೇಲೆ ಪರಿಣಾಮ ಬೀರಬಹುದು. ಮಾತ್ರವಲ್ಲ, ಬ್ರಿಟನಿನ ಒಳಗೆ ಇನ್ನಷ್ಟು ಸಮಸ್ಯೆಗಳು ಕಾಣಿಸಿಕೊಳ್ಳಲಿವೆ. ಈಗಾಗಲೇ ಬ್ರೆಕ್ಸಿಟ್ ನಂತರ ಸ್ಕಾ–ಟ್ಲೆಂಡ್ ಬ್ರಿಟನ್ ಬಿಡುವ ಜನಮತಸಂಗ್ರಹ ಇನ್ನೊಮ್ಮೆ ನಡೆಸಬೇಕು ಎಂಬ ಒತ್ತಾಯ ಕೇಳಬರುತ್ತಿದೆ. ಬ್ರೆಕ್ಸಿಟ್ ಜನಮತಸಂಗ್ರಹದಲ್ಲಿ ಸ್ಕಾಟ್ಲೆಂಡ್ ನಲ್ಲಿ ದೊಡ್ಡ ಬಹುಮತದಿಂದ ಜನ ಯುರೋಕೂಟದಲ್ಲಿ ಮುಂದುವರೆಯುವ ತೀರ್ಪು ನೀಡಿದ್ದರು. ಇಂತಹ ಜನಮತಸಂಗ್ರಹ ನಡೆದರೆ ಸ್ಕಾಟ್ಲೆಂಡ್ ಜನ ಬ್ರಿಟಿಶ್ ಕೂಟದಿಂದ ಹೊರನಡೆದು ಪುನಃ ಯುರೋಕೂಟ ಸೇರಲು ಬಯಸುವುದು ಹೆಚ್ಚು ಕಡಿಮೆ ಖಚಿತ. ಹೀಗೆ ಹಲವಾರು ಅನಿಶ್ಚಿತತೆ, ಆತಂಕಗಳನ್ನು ಹೊತ್ತು ನಡೆದಿದೆ ಬ್ರೆಕ್ಸಿಟ್ ಜಾರಿ.

ಲಾಲ್ ಸಲಾಂ ! ಕಾ. ಅಹ್ಮದ್ ಕತ್ರಡ !!

ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಹಾಗೂ ಆಫ್ರಿಕಾ ನ್ಯಾಶನಲ್ ಕಾಂಗ್ರೆಸ್ (ಎ.ಎನ್.ಸಿ.) ನ ಭೂಗತ ಮಿಲಿಟರಿ ವಿಭಾಗದ ಸದಸ್ಯರಾಗಿದ್ದ ಅಹ್ಮದ್ ಕತ್ರಡ ತಮ್ಮ 87ನೇ ಇಳಿ ವಯಸ್ಸಿನಲ್ಲಿ ಇದೇ ಮಾರ್ಚ್ 28ರಂದು ನಿಧನ ಹೊಂದಿದರು. ಅವರು 1963–64ರ 'ರಿವೊನಿಯ ಪ್ರಕರಣ'ದಲ್ಲಿ ಬಂಧಿತರಾದ ಮೂಲ 11 ಕೈದಿಗಳಲ್ಲಿ ಒಬ್ಬರಾಗಿದ್ದರು. ನೆಲ್ಸನ್ ಮಂಡೇಲಾ ಸಹ ಇದೇ ಪ್ರಕರಣದಲ್ಲಿ ಬಂಧಿತರಾಗಿದ್ದು, ಕತ್ರಡ ಸಹ ಅವರ ಜತೆ ಕೇಪ್ ಟೌನ್ ಆಚೆಯ ರೊಬ್ಬೆನ್ ದ್ವೀಪದ ಜೈಲಿನಲ್ಲಿ ಬಂಧಿತರಾಗಿದ್ದರು.

ಸೂರತ್ ನಿಂದ ದಕ್ಷಿಣ ಆಫ್ರಿಕಾಕ್ಕೆ ವಲಸೆ ಬಂದ ಮುಸ್ಲಿಮ್ ಕುಟುಂಬದಲ್ಲಿ ಹುಟ್ಟಿದ ಕತ್ರಡ ತಮ್ಮ 12ನೇ ವರ್ಷದಲ್ಲೇ ಯುವ ಕಮ್ಯುನಿಸ್ಟ್ ಲೀಗ್ ಸೇರಿದ್ದರು. ಅವರು 17ನೇ ವರ್ಷದಲ್ಲೇ ಸ್ಕೂಲು ಬಿಟ್ಟು ಏಶ್ಯನರ ಮೇಲೆ ನಿರ್ಬಂಧಗಳನ್ನು ವಿಧಿಸುವ "ಗೆಟ್ಟೊ ಏಕ್ಟ್" ವಿರುದ್ಧ ಪ್ರತಿರೋಧ ಸಂಘಟಿಸುವ ಮಂಡಳಿಯನ್ನು ಕಟ್ಟುವ ಕೆಲಸಕ್ಕೆ ಸೇರಿ–ಕೊಂಡರು. ಆ ಮೇಲೆ ಅವರು ಎ.ಎನ್.ಸಿ. ಯ ಮಿಲಿಟರಿ ವಿಭಾಗವಾದ "ಉಮಖೋಂಟೊ ವೆ ಸಿಜ್ವೆ" (ದೇಶದ ಭರ್ಚಿ) ಸೇರಿಕೊಂಡರು. ಇದರ ಮುಖ್ಯ ಕಚೇರಿಯ ಮೇಲೆ ನಡೆದ ದಾಳಿಯೊಂದರಲ್ಲಿ ಅವರನ್ನು ಬಂಧಿಸಲಾಯಿತು. ಅವರು 1992 ವರೆಗೆ ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಸದಸ್ಯರೂ ಆಗಿದ್ದರು.

ಅವರನ್ನು 1989ರಲ್ಲಿ ಬಿಡುಗಡೆ ಮಾಡಲಾಯಿತು. ಅವರಿಗೆ ಎ.ಎನ್.ಸಿ. ಅತ್ಯುನ್ನತ ಪ್ರಶಸ್ತಿ ನೀಡಲಾಗಿತ್ತು.



JANASHAKTHI KANNADA VARA PATRIKE April 10-16, 2017 Price : Rs. 10/- Date of Publication : 7 April 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

"ಉದ್ಯೋಗ ಖಾತರಿ ಅನುಷ್ಠಾನಕ್ಕೆ ಅನುದಾನ ಸಾಲದು"

ವರದರಾಜನ್ ಆಕ್ಷೇಪ



ಕೆ. ಹನುಮೇಗೌಡ

ಕರ್ನಾಟಕವೂ ಸೇರಿದಂತೆ ದಕ್ಷಿಣದ ಎಲ್ಲಾ ರಾಜ್ಯಗಳಲ್ಲಿ ಭೀಕರ ಬರ ವ್ಯಾಪಿಸಿಕೊಂಡಿದೆ. ಬಿತ್ತನೆಯಾಗದೆ, ಬಿತ್ತಿದ ಪೈರೂ ನಾಶವಾಗಿ ಆಹಾರದ ಕೊರತೆ ಉಂಟಾಗಿದೆ. ಕುಡಿಯಲು ನೀರು ಸಹ ಸಿಗದಂತಾಗಿದೆ. ಉದ್ಯೋಗ ಅರಸಿಕೊಂಡು ಕೃಷಿ ಕೂಲಿಕಾರರು ಮತ್ತು ಬಡ–ರೈತರು ಪರದಾಡುವಂತಾಗಿದೆ. ಬರಪೀಡಿತ ಪ್ರದೇಶಗಳಲ್ಲಿ ಉದ್ಯೋಗ ಕಾತ್ರಿ ಕಾಯ್ದೆ ಅಡಿಯಲ್ಲಿ 100 ರ ಬದಲಾಗಿ ಒಂದು ಕುಟುಂಬಕ್ಕೆ 150 ದಿನಗಳ ಕೆಲಸವನ್ನು ಕೇಂದ್ರ ಸರ್ಕಾರ ಘೋಷಣೆ ಮಾಡಿದ್ದರೂ ಹೆಚ್ಚುವರಿ ಕೆಲಸಕ್ಕೆ ಬೇಕಾಗುವ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಲು ಮೋದಿ ಸಕಾರ ತಯಾರಿಲ್ಲ ಎಂದು ಅಖಿಲ ಭಾರತ ಕಿಸಾನ್ ಸಭಾದ ಅಖಿಲ ಭಾರತ ಉಪಾಧ್ಯಕ್ಷರಾದ ಕೆ. ವರದರಾಜನ್ ಹೇಳಿದರು. ಅವರು ಬೆಂಗಳೂರಿನಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಮತ್ತು ಜನವಾದಿ ಮಹಿಳಾ ಸಂಘಟನೆ ಜಂಟಿಯಾಗಿ ಹಾಗೂ ಜಿಲ್ಲಾ ಪಂಚಾಯತ್ – ಬೆಂಗಳೂರು ಗ್ರಾಮಾಂತರ ಜಿಲ್ಲೆ ಸಹಯೋಗದೊಂದಿಗೆ ಏರ್ಪಡಿಸಿದ್ದ ರಾಜ್ಯ ಮಟ್ಟದ ಉದ್ಯೋಗ ಖಾತರಿ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಈ ಸಲದ ಬಜೆಟ್‌ನಲ್ಲಿ ಉದ್ಯೋಗ ಖಾತ್ರಿ ಅನುಷ್ಠಾನಕ್ಕಾಗಿ 48 ಸಾವಿರ ಕೋಟಿ ಒದಗಿಸಲಾಗಿದೆ ಎಂದು ಕೇಂದ್ರ ಬಿಜೆಪಿ ಸರ್ಕಾರ ಹೇಳುತ್ತಿದೆ. ಇದು ಹಿಂದಿನ ವರ್ಷಕ್ಕಿಂತ ಕೇವಲ 1% ರಷ್ಟು ಹೆಚ್ಚು. 2016–17 ರ ಪರಿಷ್ಕೃತ ವೆಚ್ಚಕ್ಕಿಂತ ಕೇವಲ 500 ಕೋಟಿ ರೂ. ಹೆಚ್ಚು ಪಾವತಿ ಮಾಡಲು ಬಾಕಿ ಇರುವ ಮೊತ್ತವೇ ರೂ. 14,000 ಕೋಟಿ ಇದೆ.

ಕೆಲಸ ಬಯಸುವ ಎಲ್ಲರಿಗೂ ಕನಿಷ್ಠ 150 ದಿನಗಳ ಕೆಲಸ ಒದಗಿಸಲು ಕೇಂದ್ರ ಸರ್ಕಾರ ರಾಜ್ಯಗಳಿಗೆ ನೀಡುವ ಅನುದಾನವನ್ನು ಕನಿಷ್ಠ ಎರಡು ಪಟ್ಟು ಹೆಚ್ಚಿಸಬೇಕಾಗುತ್ತದೆ. ಆದರೆ ಮೋದಿ ಸರ್ಕಾರ ಯೋಜನೆಯನ್ನು ಬಲಪಡಿಸುವುದಕ್ಕಾಗಲಿ, ವಿಸ್ತರಿಸುವುದಕ್ಕಾಗಲಿ ಆಸಕ್ತಿ ಹೊಂದಿರುವುದಿಲ್ಲ ಎಂದು ಅವರು ಹೇಳಿದರು.

ಬಹುತೇಕ ರಾಜ್ಯಗಳಲ್ಲಿ ಉದ್ಯೋಗ ಖಾತರಿ ಯೋಜನೆಯ ಜಾರಿಯಲ್ಲಿ ಅಕ್ರಮಗಳು ನಡೆಯುತ್ತಿರುವುವುದೇ ಹೆಚ್ಚು ಎಂದು ಹೇಳಿದ ಅವರು ಯಂತ್ರಗಳನ್ನು ಬಳಸಿ ಕಾಮಗಾರಿಗಳನ್ನು ಮಾಡಲಾಗುತ್ತಿದೆ. ಕೆಲವೆಡೆ ಕೆಲಸಗಾರರಿಂದ ಸಹಿ ಪಡೆದು 25 ರೂ. ನೀಡಿ ಉಳಿದ ಹಣವನ್ನು ಗುತ್ತಿಗೆದಾರರು, ಅಧಿಕಾರಿಗಳು ಹಂಚಿಕೊಳ್ಳುತ್ತಾರೆ ಎಂದು ಆರೋಪಿಸಿದರು. ಯೋಜನೆಯನ್ನು ಭ್ರಷ್ಟಾಚಾರ ಮುಕ್ತವಾಗಿ ಜಾರಿಗೊಳಿಸಲು ಸಂಘಟಿತ ಹೋರಾಟ ನಡೆಯಬೇಕು ಎಂದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷ ನಿತ್ಯಾನಂದಸ್ವಾಮಿ ಅ ಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷರಾದ ಶ್ರೀಮತಿ ಗೀತಾ ಎಲ್ಲರನ್ನು ಸ್ವಾಗತಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ಅ ಧ್ಯಕ್ಷರಾದ ಶ್ರೀ ವಿ. ಪ್ರಸಾದ್ ಮತ್ತು ಉಪಾಧ್ಯಕ್ಷರಾದ ಶ್ರೀಮತಿ ಅನಂತಕುಮಾರಿ ವಿ.ಎನ್. ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು. ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಯು. ಬಸವರಾಜ ಪ್ರಾಸ್ತಾವಿಕವಾಗಿ ಸಮಾವೇಶದದ ಉದ್ದೇಶವನ್ನು ವಿವರಿಸಿದರು. ಕೊನೆಯಲ್ಲಿ ಕರ್ನಾಟಕದ ಪ್ರಾಂತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಚಂದ್ರಪ್ಪ ಹೊಸ್ಕೇರಾ ಎಲ್ಲರನ್ನು ವಂದಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷರಾದ ಶ್ರೀ ಜಿ.ಸಿ. ಬಯ್ಯಾರೆಡ್ಡಿ, ಜನವಾದಿ ಮಹಿಳಾ ಸಂಘದ ಮುಖಂಡರಾದ ಕೆ.ಎಸ್. ಲಕ್ಷ್ಮಿ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಮುಖಂಡರಾದ ಶ್ರೀ ಜಿ.ಎನ್. ನಾಗರಾಜ ಉಪಸ್ಥಿತರಿದ್ದರು.

ಪ್ರತಿನಿಧಿಗಳ ಅಧಿವೇಶನದಲ್ಲಿ ಚರ್ಚೆಗಾಗಿ ಟಿಪ್ಪಣಿಯೊಂದನ್ನು ಮಂಡಿಸಲಾಯಿತು. ಮಂಡ್ಯ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ಹಾಸನ, ದಾವಣಗೆರೆ, ಬಳ್ಳಾರಿ, ಕೊಪ್ಪಳ, ರಾಯಚೂರು, ಯಾದಗಿರಿ, ಕಲಬುರಗಿ ಮೊದಲಾದ ಜಿಲ್ಲೆಗಳಿಂದ ಪಾಲ್ಗೊಂಡ ಪ್ರತಿನಿಧಿಗಳು ಯೋಜನೆಯನ್ನು ಜಾರಿಗೊಳಿಸುವಲ್ಲಿ ತಮಗಾದ ಅನುಭವಗಳನ್ನು ಹಂಚಿಕೊಂಡರು. ಚರ್ಚೆಯಲ್ಲಿ ಬಂದ ಸಲಹೆ ಸೂಚನೆಗಳನ್ನು ಸೇರಿಸಿ ಟಿಪ್ಪಣಿಯನ್ನು ಅಂತಿಮಗೊಳಿಸಲು ತೀರ್ಮಾನಿಸಲಾಯಿತು. ಮೂರು ಸಂಘಟನೆಗಳ ರಾಜ್ಯ ನಾಯಕತ್ವವು ಜಂಟಿ ಸಭೆ ನಡೆಸಿ ಮುಂದಿನ ಹೋರಾಟವನ್ನು ರೂಪಿಸುವುದೆಂದು ನಿರ್ಧರಿಸಲಾಯಿತು.





ಬಾಗೇಪಲ್ಲಿಯಲ್ಲಿ ಏಪ್ರಿಲ್ 3 ರಂದು ನಡೆದ ಕರ್ನಾಟಕ ಪ್ರಾಂತ ರೈತ ಸಂಘದ ತಾಲ್ಲೂಕು ಸಮ್ಮೇಳನದ ಬಹಿರಂಗ ಸಭೆಯಲ್ಲಿ ಕಾ. ಜಿ ವಿ. ಶ್ರೀರಾಮರೆಡ್ಡಿ





ರಾಜ್ಯ ಸರ್ಕಾರ ಬೆಂಗಳೂರಿನಲ್ಲಿ ಒತ್ತುವರಿ ಭೂಮಿ ತೆರುವು ಗೊಳಿಸಿ ವಶಪಡಿಸಿಕೊಂಡಿರುವ ಸರ್ಕಾರಿ ಭೂಮಿಯಲ್ಲಿ ಅಸಂಘಟಿತ ಕಾರ್ಮಿಕರಿಗೆ ವಸತಿ ನೀಡಬೇಕೆಂದು ಒತ್ತಾಯಿಸಿ ಏಪ್ರಿಲ್ 6ರಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಕಛೇರಿ ಕಂದಾಯ ಭವನ ಮುಂದೆ ನೂರಾರು ಅಸಂಘಟಿತ ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು



JANASHAKTHI KANNADA VARA PATRIKE: Printed, Published by **G.V. SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V. SRIRAMA REDDY**